

ಐಕ್ಯರಂಗ

ಸಂಪುಟ 19 ಸಂಚಿಕೆ 51

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಡಿಸೆಂಬರ್ 15-21, 1997 ಬೆಲೆ ರೂ. 2.00

ಬಲಕ್ರೋಢೀಕರಿಸಿ ಚುನಾವಣಾ ಹೋರಾಟ

- ಸಂಯುಕ್ತ ರಂಗ ನಿರ್ಧಾರ

ಸಂಯುಕ್ತ ರಂಗ ಈಗ ಒಂದು ಸಮರ್ಥ ಪರ್ಯಾಯವಾಗಿ ಮೂಡಿಬಂದಿದೆ. ಜನಗಳ ನಡುವೆ ಸಂಯುಕ್ತ ರಂಗ ಗಳಿಸಿರುವ ಪ್ರತಿಷ್ಠೆಯನ್ನು ಹಾಗೂ ತನ್ನ ಶಕ್ತಿಯನ್ನು ಕ್ರೋಢೀಕರಿಸಿ ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಎರಡರ ವಿರುದ್ಧವೂ ದೇಶಾದ್ಯಂತ ಹೋರಾಟ ನಡೆಸಲು ಸಂಯುಕ್ತ ರಂಗದ ಮುಖಂಡರು ಡಿಸೆಂಬರ್ ೮ ರಂದು ನಡೆದ ಸಭೆಯಲ್ಲಿ ನಿರ್ಧರಿಸಿದ್ದಾರೆ. ಬಿಜೆಪಿಯನ್ನು ಎದುರಿಸಿ ನಿಲ್ಲುವುದು ಈಗ ಸಂಯುಕ್ತ ರಂಗಕ್ಕೆ ಮಾತ್ರ ಸಾಧ್ಯ ಎಂದು ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಹೇಳಿದ ಸಂಯುಕ್ತ ರಂಗದ ವಕ್ತಾರ ಜೈಪಾಲ ರೆಡ್ಡಿಯವರು ದೇಶಾದ್ಯಂತ ಸ್ಪರ್ಧಿಸಿ 'ಕೋಮುವಾದದ ಕರಾಳ ಶಕ್ತಿಗಳನ್ನು ಬಯಲಿಗೆಳೆಯಲಾಗುವುದು' ಎಂದಿದ್ದಾರೆ.

ಬಾಬ್ರಿ ಮಸೀದಿಯನ್ನು ಈ ಕರಾಳ ಕೋಮುವಾದಿ ಶಕ್ತಿಗಳು ಧ್ವಂಸ ಮಾಡಿದ ಡಿಸೆಂಬರ್ ೬ ರಂದು ರಾಷ್ಟ್ರೀಯ ಐಕ್ಯತೆ ಹಾಗೂ ಕೋಮುಸೌಹಾರ್ದದ ದಿನವನ್ನು ಆಚರಿಸಬೇಕೆಂಬ ಸಂಯುಕ್ತ ರಂಗದ ಕರೆಗೆ ದೇಶಾದ್ಯಂತ ಒಳ್ಳೆಯ ಸ್ಪಂದನ ದೊರೆತಿದೆ. ವಿವಿಧೆಡೆಗಳಲ್ಲಿ ಸಂಯುಕ್ತ ರಂಗ ಏರ್ಪಡಿಸಿದ ಸಭೆಗಳು ಅತ್ಯಂತ ಯಶಸ್ವಿಯಾಗಿವೆ ಎಂದು ಜೈಪಾಲ್ ರೆಡ್ಡಿಯವರು ಹೇಳಿದರು.

ಸಂಯುಕ್ತ ರಂಗದ ಇನ್ನೊಬ್ಬ ಪ್ರಮುಖ ಮುಖಂಡ ಮುಲಾಯಂ ಸಿಂಗ್ ಯಾದವ್ ರವರು ಇನ್ನೊಂದೆಡೆ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಬಿಜೆಪಿಯನ್ನು ಸೋಲಿಸಬೇಕೆಂಬ ಜಾತ್ಯಾತೀತ ಪಕ್ಷಗಳ ಆಕಾಂಕ್ಷೆಯನ್ನು ಕಾಂಗ್ರೆಸ್ ಬಗ್ಗೆ ತೋರುವ ನಯ ನಿಲುವು ಎಂದು ತಪ್ಪರ್ಥ ಮಾಡಿಕೊಳ್ಳಬೇಡಿ ಎಂದರು. ಕಾಂಗ್ರೆಸ್ ಕೂಡಾ ಒಂದು ದುಷ್ಟ ಶಕ್ತಿಯೇ. ಬಾಬ್ರಿ ಮಸೀದಿ ಧ್ವಂಸವಾಗುತ್ತಿದ್ದಾಗ ಕೈಕಟ್ಟಿ ನಿಂತು ನೋಡುತ್ತಿದ್ದ ಪಕ್ಷವಲ್ಲವೇ ಅದು ಎಂದು ಅವರು ನೆನಪಿಸಿದರು. 'ನಾವು ಸಂಯುಕ್ತ ರಂಗದ ಭಾಗ. ಆದ್ದರಿಂದ ಅದಕ್ಕಿಂತ ಭಿನ್ನವಾದ ನೀತಿ ನಮ್ಮದಲ್ಲ' ಎಂದು ಸ್ಪಷ್ಟಪಡಿಸುತ್ತಾ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್‌ನ ಅಸ್ತಿತ್ವ ಈಗ ಅತ್ಯಲ್ಪ, ಸಮಾಜವಾದಿ ಪಕ್ಷ ಏಕಾಂಗಿಯಾಗಿ ಬಿಜೆಪಿಯನ್ನು ಎದುರಿಸ ಬಲ್ಲದು ಎಂದು ಅವರು ಹೇಳಿದರು.

ಈ ನಡುವೆ ಕಳೆದ ಚುನಾವಣೆಯ ವೇಳೆಗೆ ಸಮ್ಮಿಶ್ರ ಸರಕಾರದ ಪರಿಕಲ್ಪನೆಯನ್ನು 'ಖಿಚಡಿ'ಯೆಂದು ಗೇಲಿ ಮಾಡುತ್ತಿದ್ದ ಬಿಜೆಪಿ ಮತ್ತು ಕಾಂಗ್ರೆಸ್‌ಗಳು ಈಗ ಕಲಸುಮೇಲೋಗರಗಳನ್ನು ನಿರ್ಮಿಸುವಲ್ಲಿ ಮಗ್ನರಾಗಿದ್ದಾರೆ. ಸಂಯುಕ್ತ ರಂಗ ಏರ್ಪಟ್ಟದ್ದು ಆದಾಗಲೇ ಭಾರತದ ರಾಜಕಾರಣದಲ್ಲಿ ಮೂಡಿಬಂದ ನಿರ್ದಿಷ್ಟ ನೀತಿಗಳ ಮೇಲೆ - ಜಾತ್ಯಾತೀತತೆ, ಒಕ್ಕೂಟವಾದ ಹಾಗೂ ಜನರ ಹಿತಾಸಕ್ತಿಗಳಿಗೆ ಬದ್ಧವಾದ ಪರ್ಯಾಯದೊಂದಿಗೆ. ಆದರೆ ತಾನೇ ಕಾಂಗ್ರೆಸ್‌ಗೆ ಏಕೈಕ ಪರ್ಯಾಯ ಪಕ್ಷ ಎಂದು ಬೀಗುತ್ತಿದ್ದ ಬಿಜೆಪಿ ಈಗ ಕಾಂಗ್ರೆಸ್ ಸೋತು ಸುಣ್ಣವಾಗಿರುವಾಗಲೂ ಒಂದು ಪರ್ಯಾಯ ರಂಗದ ಮಾತನ್ನಷ್ಟೇ ಆಡುತ್ತಿದೆ. ಅದೂ ಎಂತಹ ರಂಗ? ಬಿಜೆಪಿ ಅಧ್ಯಕ್ಷರ 'ದ್ವಂದ್ವಾತ್ಮಕ' ಮಾತುಗಳಲ್ಲಿ ಹೇಳಬೇಕಾದರೆ ಬಿಜೆಪಿ ಅಧಿಕಾರಕ್ಕೆ ಬರುವುದೆಂಬ ನಿರೀಕ್ಷೆಯಿಂದ ಹೆಚ್ಚೆಚ್ಚು ಪಕ್ಷಗಳು (ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿಯವರ ಗುಂಪು, ಒರಿಸ್ಸಾದಲ್ಲಿ ಜನತಾದಳದ ಒಂದು ಗುಂಪು ಇತ್ಯಾದಿ) ತಮ್ಮೊಡನೆ ಮೈತ್ರಿಗೆ ಬರುವ ಸಾಧ್ಯತೆಗಳಿವೆಯಂತೆ. ಅಂದರೆ ಒಂದು ತತ್ವ ಒಂದು ಸಿದ್ಧಾಂತಕ್ಕಾಗಿ ಅಲ್ಲ - ಕೇವಲ ಅಧಿಕಾರಕ್ಕಾಗಿ ಮಾತ್ರ ಈ ಬಿಜೆಪಿ ರಂಗ. ಕರ್ನಾಟಕದಲ್ಲಿ ರಾಮಕೃಷ್ಣ ಹೆಗಡೆಯವರೂ ಬಿಜೆಪಿಯ ಬಗ್ಗೆ ಹೇಳಿರುವ 'ಪ್ರೋತ್ಸಾಹಕರ' ಮಾತುಗಳು ಇದನ್ನು ಇನ್ನಷ್ಟು ಸ್ಪಷ್ಟಗೊಳಿಸಿವೆ.

ಇಂತಹ ಪಕ್ಷದ ನೇತೃತ್ವದ ಒಂದು ಸಮ್ಮಿಶ್ರ ಸರಕಾರ 'ಸಮರ್ಥ ನಾಯಕನ ಅಡಿಯಲ್ಲಿ ಸ್ಥಿರ ಸರಕಾರ' ಒದಗಿಸುವ ವಚನವನ್ನು ಈಡೇರಿಸಬಲ್ಲುದೇ? - ಇದು ಎಲ್ಲಾ ಪ್ರಜಾಪ್ರಭುತ್ವವಾದಿಗಳ ಮನದಲ್ಲಿರುವ ಬಲವಾದ ಶಂಕೆ. ಕಳೆದ ಬಾರಿ ಗುಜರಾತಿನಲ್ಲಿ ಭಾರೀ ಬಹುಮತ ಗಳಿಸಿ ಅಧಿಕಾರಕ್ಕೆ ಬಂದ ಬಿಜೆಪಿಯ ಸರಕಾರ ಕೆಲವೇ ತಿಂಗಳಲ್ಲಿ ಕುಸಿದು ಬಿದ್ದುದನ್ನು ಅದರ ಮೊದಲು ಅಲ್ಲಿಯ ಬಿಜೆಪಿಯ ಘಟಾನುಘಟಿಗಳು ಪ್ರದರ್ಶಿಸಿದ ಹೊಲಸು ರಾಜಕೀಯ ಈಗಲೂ ಜನಗಳ ಮನದಲ್ಲಿ ಹಸಿರಾಗಿದೆ. ಇದು 'ಸ್ಥಿರತೆ'ಯ ಗತಿಯಾದರೆ, ಇನ್ನು 'ಸಮರ್ಥ ನಾಯಕ'ನ ಸ್ಥಿತಿಯೇನು? ಬಿಜೆಪಿಯ ಸಿದ್ಧಾಂತಿಯೆನಿಸಿದ ಗೋವಿಂದಾಚಾರ್ಯರೇ ವರ್ಣಿಸಿದ ಪದಗಳನ್ನು ಬಳಸುತ್ತಾ 'ವಾಜಪೇಯಿಯವರು ಕೇವಲ ಒಂದು ಮುಖವಾಡ, ಮುಖಂಡರಲ್ಲ' ಎಂಬ ಸಂಯುಕ್ತ ರಂಗದ ವಕ್ತಾರ ಜೈಪಾಲ ರೆಡ್ಡಿಯವರ ವಿಮರ್ಶೆ ಮನನೀಯ. ''ವಾಜಪೇಯಿಯವರು ಎಲ್ಲಾ ಎಂ.ಪಿ.ಗಳಿಗೆ ಬಿಜೆಪಿ ಸೇರಲು ಕರೆ ನೀಡಿದ್ದು ಅವರು ವಾಜಪೇಯಿಯವರ ನೀತಿ - ತತ್ವಗಳನ್ನು ಒಪ್ಪುತ್ತಾರೆಂದಲ್ಲ, ಅವರೆಲ್ಲಾ ಚುನಾವಣೆಗಳನ್ನು ಬಯಸುತ್ತಿರಲಿಲ್ಲ ಎಂಬ ಏಕೈಕ ಕಾರಣಕ್ಕಾಗಿ' ಎಂಬ ಜೈಪಾಲ್ ರೆಡ್ಡಿಯವರ ವಿಶ್ಲೇಷಣೆಯೂ ಇಲ್ಲಿ ಗಮನಾರ್ಹ.

ಅದೇ ಸ್ಥಿರತೆಯ ಮಾತನಾಡುತ್ತಾ ಆಳುವ ವರ್ಗಗಳ ಶೋಷಣೆಯನ್ನು ಸ್ಥಿರಗೊಳಿಸಲು ಹೆಣಗುತ್ತಾ ಬಂದು ಅದರಿಂದಾಗಿ ಅಧಿಕಾರ ಕಳಕೊಂಡ ಕಾಂಗ್ರೆಸ್ ಅಂತೂ ನಂತರ ಎರಡು ಬಾರಿ ಜಾತ್ಯಾತೀತ ಸರಕಾರಗಳನ್ನು ಉರುಳಿಸಿ ಸ್ಥಿರತೆಯ ಬಗ್ಗೆಯಾಗಲಿ, ಜಾತ್ಯಾತೀತತೆ ರಕ್ಷಣೆಯ ಬಗ್ಗೆಯಾಗಲೀ ಮಾತನಾಡಲಾಗದೆ, ರಾಜೀವ್ ಗಾಂಧಿಯವರ ಹತ್ಯೆಯ ಪ್ರಶ್ನೆಯನ್ನೂ ಬಳಸಿ ಕೊಳ್ಳಲಾಗದೆ ಈಗ ಸೋನಿಯಾ ಗಾಂಧಿಯವರತ್ತ ನೋಡುತ್ತಾ ನಿಂತಿದೆ.

ಈ ನಡುವೆ ಚುನಾವಣೆಯ ಸಿದ್ಧತೆಯಾಗಿ ನೀತಿ ನಿರೂಪಣೆಗಳಿಗಿಂತ ಪಕ್ಷಗಳು ಹುಟ್ಟುತ್ತಿರುವ, ಒಡೆಯುತ್ತಿರುವ ಸುದ್ದಿಗಳೇ ಹೆಚ್ಚಾಗಿವೆ. ಚುನಾವಣಾ ಆಯೋಗ ಚುನಾವಣಾ ದಿನಾಂಕ ಗೊತ್ತುಪಡಿಸಿದ ಮೇಲೆ ಯಾವ ಪಕ್ಷದ ವಿಭಜನೆಗೂ, ಹೊಸ ಪಕ್ಷಕ್ಕೂ ಮಾನ್ಯತೆಯಿಲ್ಲ ಎಂದು ಎಚ್ಚರಿಸಬೇಕಾಗಿ ಬಂದಿದೆ.

ಸಿ.ಪಿ.ಐ.(ಎಂ) 16ನೇ ರಾಜ್ಯ ಸಮ್ಮೇಳನ ಕೋಲಾರ ಡಿ. 30,31 '97 - ಜ.1,2 '98

ಸಿಪಿಐ(ಎಂ) 16ನೇ ರಾಜ್ಯ ಸಮ್ಮೇಳನದತ್ತ ಸಾಗೋಣ

- ಪಿ.ರಾಮಚಂದ್ರರಾವ್

3ನೇ ಪುಟ ನೋಡಿ

ಬಂದ್ ನಿಷೇದದ ವಿರುದ್ಧ ರಾಜಧಾನಿಯಲ್ಲಿ ಮತಪ್ರದರ್ಶನ

"ಶ್ರಮಜೀವಿಗಳ ಹಕ್ಕುಗಳ ಮೇಲಿನ ಧಾಳಿಯನ್ನು ಒಗ್ಗಟ್ಟಿನಿಂದ ಎದುರಿಸೋಣ"

ಡಿಸೆಂಬರ್ 3 ರಂದು ನೂರಾರು ಕಾರ್ಮಿಕರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು ಮತ್ತಿತರರು ಸುಪ್ರೀಂ ಕೋರ್ಟ್‌ನ ಎದುರು ಮತಪ್ರದರ್ಶನ ನಡೆಸಿ ಬಂದ್‌ಗಳನ್ನು ನಿಷೇಧಿಸುವ ಕೇರಳ ಹೈಕೋರ್ಟ್‌ನ ತೀರ್ಪನ್ನು ಖಂಡಿಸಿದರು. ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಕರೆಯ ಮೇರೆಗೆ ಈ ಪ್ರತಿಭಟನೆ ನಡೆಯಿತು.

ಮಂಡೀ ಹೌಸ್ ಚೌಕದಿಂದ ವಿವಿಧ ಕೇಂದ್ರ ಕಾರ್ಮಿಕ ಸಂಘಟನೆಗಳು, ರೈತ ಸಂಘಟನೆಗಳು, ವಿದ್ಯಾರ್ಥಿ ಯುವಜನ, ಮಹಿಳಾ ಸಂಘಟನೆಗಳ ಪ್ರತಿನಿಧಿಗಳು ಸುಪ್ರೀಂ ಕೋರ್ಟ್‌ಗೆ ಮೆರವಣಿಗೆಯಲ್ಲಿ ಸಾಗಿ ಅಲ್ಲಿ ಮತಪ್ರದರ್ಶನ ನಡೆಸಿದರು.

ಸಿಐಟಿಯು ಅಧ್ಯಕ್ಷ ಇ.ಬಾಲಾನಂದನ್, ಕಾರ್ಯದರ್ಶಿ ತಪನ್ ಸೆನ್, ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಕೆ.ಎಲ್.ಮಹೇಂದ್ರ, ಎಐಸಿಸಿಟಿಯು ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ, ಹೆಚ್.ಎಂ.ಎಸ್.ನ ಸಮೀರ್ ರಾವ್, ಟಿಯುಸಿಸಿಯ ಆರ್.ಕೆ.ಶಾಸ್ತ್ರಿ, ಯುಟಿಯುಸಿ (ಲೆನಿನ್ ಸರಣಿ)ಯ ಆರ್.ಕೆ.ಶರ್ಮ, ಎ.ಐ.ಡಿ.ಡಬ್ಲ್ಯೂ.ಎ ಪ್ರಧಾನ ಕಾರ್ಯದರ್ಶಿ ಬೃಂದಾ ಕಾರಟ್, ಎಐಪಿಡಬ್ಲ್ಯೂಎ ನ ಕುಮುದಿನಿ ಪತಿ, ಬಿಕೆಎಂಯುನ ಪಿ.ಕೆ.ಕೊಡಿಯನ್, ಎಸ್‌ಎಫ್‌ಐನ ಪುಷ್ಪೇಶ್ವರತ್ಯಾಗಿ, ಎಐಎಸ್‌ಎಫ್‌ನ ರಾಹುಲ್ ಭಾಯೀಜಿ ಹಾಗೂ ಎಐಎಸ್‌ಎ ನ ರಂಜಿತ್ ಭೂಯನ್ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು.

ಬಂದ್‌ಗೆ ಕರೆನೀಡುವ ಜನತೆಯ ಹಕ್ಕನ್ನು ನಿಷೇಧಿಸುವ ಸುಪ್ರೀಂ ಕೋರ್ಟ್‌ನ ನಿರ್ಣಯವನ್ನು ಪ್ರತಿಭಟಿಸುತ್ತಾ ಇದು ಸಾಮೂಹಿಕವಾಗಿ ಪ್ರತಿಭಟಿಸುವ ಜನತೆಯ ಹಕ್ಕನ್ನು ಮೊಟಕುಗೊಳಿಸುವ ಪ್ರಯತ್ನ, ಶ್ರಮಜೀವಿಗಳ ಪ್ರಜಾಸತ್ತಾತ್ಮಕ ಹಕ್ಕಿನ ಮೇಲಿನ ಧಾಳಿಯ ವಿರುದ್ಧ ಐಕ್ಯತೆಯಿಂದ ಹೋರಾಡಬೇಕು ಎಂದರು.

ಬಿಹಾರದ ಜಹಾನಾಬಾದ್‌ನ ಬಾಥೆ ಲಕ್ಷ್ಮಣ್‌ಪುರದಲ್ಲಿ ಡಿಸೆಂಬರ್ 1 ರ ರಾತ್ರಿ ಬಡ ರೈತರು, ಮಹಿಳೆಯರು ಹಾಗೂ ಮಕ್ಕಳನ್ನು ನಿಷೇಧಿತ ಭೂಮಾಲಕರ ಗೂಂಡಾ ಪಡೆ ರಣಬೀರ್ ಸೇನಾ ನಡೆಸಿದ ಅಮಾನುಷ ಹತ್ಯಾಕಾಂಡವನ್ನು ರ್‍ಯಾಲಿ ಖಂಡಿಸಿತು. ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳು ಇದನ್ನು ಪ್ರತಿಭಟಿಸಿ ಕರೆ ನೀಡಿದ್ದ ಡಿಸೆಂಬರ್ 5 ರ ಬಿಹಾರ್ ಬಂದ್‌ಗೆ ಬೆಂಬಲ ಸೂಚಿಸಿ ಒಂದು ನಿರ್ಣಯ ಕೈಗೊಳ್ಳಲಾಯಿತು

ಕನ್ನಡ ಸಾಹಿತ್ಯದ ಅದಕ್ಕೂ ಮಿಗಿಲಾಗಿ ಕರ್ನಾಟಕದ ಸಾಂಸ್ಕೃತಿಕ ರಂಗದ ವಿಶಿಷ್ಟ ವ್ಯಕ್ತಿತ್ವದ ಕಾರಂತರು ಇನ್ನಿಲ್ಲ. ಡಿಸೆಂಬರ್ 9, 1997 ರಂದು ಮಣಿಪಾಲದಲ್ಲಿ ನಿಧನರಾದ ಜ್ಞಾನಪೀಠ ಪ್ರಶಸ್ತಿ ವಿಜೇತ ಡಾಕ್ಟರ್ ಕೋಟಾ ಶಿವರಾಮಕಾರಂತರು ಎರಡು ತಿಂಗಳ ಹಿಂದೆಯಷ್ಟೇ 95 ವರ್ಷಗಳನ್ನು ಪೂರೈಸಿದ್ದರು.

"ಹುಚ್ಚು ಮನಸ್ಸಿನ ಹತ್ತು ಮುಖ......" ಇನ್ನಿಲ್ಲ

ಚೋಮನ ದುಡಿ, ಕುಡಿಯರ ಕೂಸು, ಬೆಟ್ಟದ ಜೀವ, ಮೂಕಜ್ಜಿಯ ಕನಸುಗಳು, ಅಳಿದ ಮೇಲೆ, ಮರಳಿ ಮಣ್ಣಿಗೆ ಇವೆಲ್ಲಾ ಕನ್ನಡವನ್ನು ಶ್ರೀಮಂತಗೊಳಿಸಿದ ಕೃತಿಗಳಷ್ಟೇ ಅಲ್ಲ, ನಮ್ಮ ಸಮಾಜದ ಆಗುಹೋಗುಗಳನ್ನು, ನಮ್ಮ ಜೀವನವನ್ನು ಸಂಶೋಧಿಸುವ ಪ್ರಯತ್ನಗಳೂ ಕೂಡಾ. ಆದ್ದರಿಂದ ಓದುಗರನ್ನು ಚಿಂತನೆಗೆ ಹಚ್ಚುವ ಕೃತಿಗಳು ಇವೆಲ್ಲಾ.

1977 ರಲ್ಲಿ ಅವರ 'ಮೂಕಜ್ಜಿಯ ಕನಸುಗಳು' ಕೃತಿಗೆ ಜ್ಞಾನ ಪೀಠ ಪ್ರಶಸ್ತಿ ಬಂದಾಗ ಯಾರಿಗೂ ಆಶ್ಚರ್ಯವಾಗಲಿಲ್ಲ. ಸುಮಾರು ಅದೇ ವೇಳೆಗೆ 1968 ರಲ್ಲಿ ಪಡೆದಿದ್ದ ಪದ್ಮಭೂಷಣ ಪ್ರಶಸ್ತಿಯನ್ನು ತುರ್ತುಪರಿಸ್ಥಿತಿ ಹೇರಿಕೆಯನ್ನು ವಿರೋಧಿಸಿ ಹಿಂದಿರುಗಿಸಿದ್ದೂ ಆಶ್ಚರ್ಯವುಂಟು ಮಾಡಲಿಲ್ಲ.


ಶಿವರಾಮಕಾರಂತರು ಕೇವಲ ಕಾದಂಬರಿಕಾರರಷ್ಟೇ ಅಲ್ಲ, ಹಲವಾರು ನಾಟಕಗಗಳು, ಕವನಗಳನ್ನು, ಪ್ರಬಂಧಗಳನ್ನು ರಚಿಸಿದ ಸಾಹಿತಿಯಷ್ಟೇ ಅಲ್ಲ, ಅವರ ಆತ್ಮಕಥನದ ಹೆಸರೇ ('ಹುಚ್ಚು ಮನಸಿನ ಹತ್ತು ಮುಖಗಳು') ಸೂಚಿಸುವಂತೆ ಹಲವು ಹತ್ತು ರಂಗಗಳಲ್ಲಿ ಗಮನಾರ್ಹ ಸಾಧನೆಯನ್ನು ಮಾಡಿದವರು. 1936 ರಷ್ಟು ಹಿಂದೆಯೇ ಮಕ್ಕಳಿಗಾಗಿ 'ಬಾಲ ಪ್ರಪಂಚ'ದ ಮೂರು ಸಂಪುಟಗಳು, 1959-64 ರಲ್ಲಿ 'ವಿಜ್ಞಾನ ಪ್ರಪಂಚ'ದ ನಾಲ್ಕು ಸಂಪುಟಗಳನ್ನು ಏಕಾಂಗಿಯಾಗಿ ರಚಿಸಿದವರು. ಕನ್ನಡದ ಮೊದಲ ಕಲಾ ವಿಶ್ವಕೋಶ 'ಕಲಾಪ್ರಪಂಚ' ವನ್ನು ಸಂಪಾದಿಸಿದ ಕಾರಂತರು ಇಳಿವಯಸ್ಸಿನಲ್ಲೂ ಸುಮ್ಮನೆ ಕುಳಿತವರಲ್ಲ. 'ಪ್ರಾಣಿ ಪ್ರಪಂಚದ ವಿಸ್ಮಯಗಳು' 'ಸಿರಿಗನ್ನಡ ಅರ್ಥಕೋಶ'ಗಳನ್ನು ರಚಿಸಿದರು. ಯಾವ ವಿಶ್ವವಿದ್ಯಾಲಯದ ಪದವಿಯನ್ನೂ ಪಡೆದಿರದ ಅವರಿಗೆ ನಡೆದಾಡುವ 'ವಿಶ್ವವಿದ್ಯಾಲಯ' ಎಂಬ ಖ್ಯಾತಿ ತಂದ ಕೃತಿಗಳಿವು.

ದೇಶಾದ್ಯಂತ, ವಿಶ್ವಾದ್ಯಂತ ತಿರುಗಾಡಿದ ಕಾರಂತರು ಬರೆದ 'ಅಪೂರ್ವ ಪಶ್ಚಿಮ' ಮತ್ತು 'ಅಬುವಿನಿಂದ ಬರಾಮಕ್ಕೆ' ಕೂಡಾ ಕಾರಂತರ ಛಾಪನ್ನು ಹೊಂದಿದ್ದ ವಿಶಿಷ್ಟ ಕೃತಿಗಳು.

ದಕ್ಷಿಣ ಕನ್ನಡ ಜಿಲ್ಲೆಯ ಜಾನಪದ ಕಲೆ 'ಯಕ್ಷಗಾನ' ಬ್ಯಾಲೆಯ (ನೃತ್ಯ ನಾಟಕ) ರೂಪಕೊಟ್ಟು ವಿಶ್ವಕ್ಕೆ ಪರಿಚಯಿಸಿದ್ದು ಕಾರಂತರ ಸಾಧನೆಗಳ ಪಟ್ಟಿಯಲ್ಲಿ ಮತ್ತೊಂದು ಪ್ರಮುಖ ಅಂಶ. 1959 ರಲ್ಲಿ ಅವರ 'ಯಕ್ಷಗಾನ-ಬಯಲಾಟ'ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆಯಿತು. ಶಿಕ್ಷಣ ರಂಗದಲ್ಲಿ ಅವರ ಪ್ರಯೋಗಗಳೂ ಗಣನೀಯ

ಬ್ರಿಟಿಶ್ ಸಾಮ್ರಾಜ್ಯಶಾಹಿಯ ವಿರುದ್ಧ ಸ್ವಾತಂತ್ರ್ಯ ಹೋರಾಟದಲ್ಲಿ ಅದರ ಜತೆಗೆ ನಡೆದ ಸಾಮಾಜಿಕ ಅನಿಷ್ಟಗಳ ವಿರುದ್ಧದ ಹೋರಾಟದಲ್ಲಿ ಭಾರತ ಒಂದು ಆಧುನಿಕ ದೇಶವಾಗಿ ಮೂಡಿ ಬರುತ್ತಿದ್ದ ಅವಧಿಯಲ್ಲಿ ಆ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲುಗೊಂಡ ಕಾರಂತರದ್ದು ಈ ಪ್ರಕ್ರಿಯೆಯಂತೆಯೇ ಸಂಕೀರ್ಣವಾದ ವ್ಯಕ್ತಿತ್ವ. ಅಳಿದು ಹೋಗುತ್ತಿದ್ದ ಸಮಾಜದಲ್ಲಿ ಉಚ್ಚಸ್ಥಾನ ಪಡೆದಿದ್ದ ವಿಭಾಗದಿಂದ ಬಂದ ಬಿಬ್ಬ ನೇರನಡೆ-ನುಡಿಯ ವಿಚಾರವಾದಿ ಇರಬಹುದಾದ ಅಂತರ್ವೈರುಧ್ಯಗಳನ್ನು ಮೀರಿ ನಿಲ್ಲುವಲ್ಲಿ ಆಗಾಗ ಸೋತಿದ್ದರೂ 'ಕನ್ನಡಕೇಕೊಬ್ಬರೇ ಕಾರಂತರು' ಎಂಬ ಮಾತಿನಲ್ಲಿಂತೂ ಅತಿಶಯೋಕ್ತಿಯಿಲ್ಲ. ಅವರೀಗ ಇತಿಹಾಸದ ಪುಟ ಸೇರಿದ್ದಾರೆ.

- ಕೆ.ವಿ.



ಸಿಪಿಐ(ಎಂ) ಸಂತಾಪ

ಮೂಕಜ್ಜಿಯ ಕನಸುಗಳು, ಚೋಮನದುಡಿ, ಬೆಟ್ಟದ ಜೀವ ಮುಂತಾದ ಚಿಂತನೆಗೆ ಒಳಪಡಿಸುವ ಬಡಜನರ, ಕೃತಿಗಳಿಗೆ ಕನ್ನಡಿಯಂತಿರುವ ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ ಕರ್ನಾಟಕದ ಮಹಾನ್ ಸಾಹಿತಿ, ದಕ್ಷಿಣ ಕನ್ನಡ ಜಿಲ್ಲೆಯ ವಿಶಿಷ್ಟ ಯಕ್ಷಗಾನ ಕಲೆಯನ್ನು ಜಿಲ್ಲೆಯಲ್ಲಿ ಉಳಿಸಿ ಬೆಳೆಸುವುದಲ್ಲದೆ ಅದರ ಸೊಗಡನ್ನು ವಿದೇಶಕ್ಕೂ ಹರಡಿಸಿದವರು ಶಿವರಾಮಕಾರಂತರು ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ತನ್ನ ಶ್ರದ್ಧಾಂಜಲಿ ಹೇಳಿಕೆಯಲ್ಲಿ ತಿಳಿಸಿದೆ. ಕಾರಂತರ ಶೋಕತಪ್ತ ಕುಟುಂಬಕ್ಕೆ ತನ್ನ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

ಬೆಂಗಳೂರು ಜಿಲ್ಲಾ ಸಿಪಿಐ(ಎಂ) ಸಮ್ಮೇಳನ

ರಾಜಧಾನಿಯಲ್ಲಿ ಪಕ್ಷದ ಪ್ರಭಾವ ಹೆಚ್ಚಿಸಲು ನಿರ್ಧಾರ

ರಾಜ್ಯದ ರಾಜಧಾನಿ, ಬೃಹತ್ ಕೈಗಾರಿಕಾ ನಗರವಾದ ಬೆಂಗಳೂರು ಜಿಲ್ಲೆಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 16 ನೇ ಜಿಲ್ಲಾ ಸಮ್ಮೇಳನವು ಡಿಸೆಂಬರ್ 5,6 ಮತ್ತು 7ರಂದು ಹೊಸೂರು ರಸ್ತೆಯ ಹೊಂಗಸಂದ್ರದ ಕಾಂ|| ಜಾನ್ ವಿನ್ಸೆಂಟ್(ಇತ್ತೀಚೆಗೆ ನಿಧನರಾದ ಜಿಲ್ಲಾ ಸಮಿತಿ ಸದಸ್ಯರು)ನಗರದ ಕಾಂ|| ಎನ್. ಎಲ್. ಉಪಾಧ್ಯಾಯ ವೇದಿಕೆಯಲ್ಲಿ ನಡೆಯಿತು. ಸಮ್ಮೇಳನದ ಪೂರ್ವದಲ್ಲಿ ಪಕ್ಷದ ಹಿರಿಯ ಮುಖಂಡರೂ ಸ್ವಾತಂತ್ರ್ಯ ಹೋರಾಟಗಾರರೂ ಆದ ದೊಡ್ಡ ಬಳ್ಳಾಪುರ 'ದ ಕಾಂ. ಮುಗುವಾಳಪ್ಪನವರು ಧ್ವಜಾರೋಹಣ ನೇರವೇರಿಸಿದರು. ಅಗಲಿದ ಸಂಗಾತಿಗಳಿಗೆ ಶ್ರದ್ಧಾಂಜಲಿ ಸಲ್ಲಿಸಲಾಯ್ತು.

ಕೆಂಬಾವುಟದ ಜವಾಬ್ದಾರಿ

ದೇಶದ ಇಂದಿನ ರಾಜಕೀಯದಲ್ಲಿ ಸೈದ್ಧಾಂತಿಕ ಮಟ್ಟ ಕುಸಿಯುತ್ತಿದ್ದು, ಅನೈತಿಕ ಮಾರ್ಗದಿಂದ ಅಧಿಕಾರಗಳಿಸಬೇಕೆಂಬ ಹಂಬಲ ರಾಜಕೀಯ ಪಕ್ಷಗಳಲ್ಲಿ ಬೇರೂರುತ್ತಿರುವ ಸಂದರ್ಭದಲ್ಲಿ, ರಾಷ್ಟ್ರದ ಜನತೆಯಲ್ಲಿ ದೇಶಪ್ರೇಮ ಉಳಿಸಿ ಬೆಳೆಸುವ ಸಲುವಾಗಿ ಕೆಂಬಾವುಟ ದೇಶದ ಜವಾಬ್ದಾರಿಯುತ ರಾಜಕೀಯವನ್ನು ನಿರ್ವಹಿಸಬೇಕಾಗಿದೆ ಎಂದು ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ರಾಜ್ಯ ಕಾರ್ಯದರ್ಶಿ ಪಿ. ರಾಮಚಂದ್ರ ರಾವ್ ಹೇಳಿದರು.

ದೇಶದ ಪ್ರಜಾಪ್ರಭುತ್ವ ಕ್ರಿಯೆಯನ್ನು ಪೂರ್ಣಗೊಳಿಸುವುದೇ ಸಿ.ಪಿ.ಐ(ಎಂ)ನ ಉದ್ದೇಶವಾಗಿದೆ. ಪ್ರಜಾಪ್ರಭುತ್ವ ಹಕ್ಕುಗಳನ್ನು ರಾಷ್ಟ್ರದ ಇಡಿ ಜನತೆ ಅನುಭವಿಸುವಂತೆ ಮಾಡುವುದೇ ಪಕ್ಷದ ಕರ್ತವ್ಯವಾಗಿದೆ ಎಂದರು. ಇಂದು ರಾಜಕೀಯ ಪಕ್ಷಗಳಲ್ಲಿ ಚುನಾವಣಾ ಆಯೋಗದ ಆದೇಶದ ಮುಖಾಂತರ ಪ್ರಜಾಪ್ರಭುತ್ವ ಕ್ರಿಯೆ ನಡೆಸುವಂತಹ ಸ್ಥಿತಿ ತಲುಪಿರುವುದು ವಿಷಾದನೀಯ ಎಂದರು.

ಕೈಗಾರಿಕಾ ಬೆಳವಣಿಗೆ ಅಗತ್ಯ

ಕಳೆದ ದಶಕಗಳಲ್ಲಿ ಬಡ ಜನರ ಕಲ್ಯಾಣ, ಗರೀಬಿ ಹಟಾವೋ, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಉದ್ಧಾರ ಎಂಬ ಉದ್ಗಾರಗಳು ಕೇಳಿ ಬರುತ್ತಿದ್ದವು. ಇಂದು ಜಾಗತೀಕರಣ, ಖಾಸಗೀಕರಣ ಹಾಗೂ ಉದಾರೀಕರಣ ಎಂಬ ಕೂಗು ವಿಶ್ವದೆಲ್ಲೆಡೆ ಕೇಳಿಬರುತ್ತಿದೆ. ಇಂದು ನಿರುದ್ಯೋಗ ಸಮಸ್ಯೆ ದಿನೇ ದಿನೇ ದಟ್ಟವಾಗುತ್ತಿದ್ದು, ಕಾರ್ಮಿಕರು ಉದ್ಯೋಗ ವಂಚಿತರಾಗಿ, ಗುತ್ತಿಗೆ ಕಾರ್ಮಿಕರ ಪದ್ಧತಿ ಬೇರೂರುತ್ತಿದೆ. ಮತ್ತೊಂದೆಡೆ ಬೆಲೆಗಳು ಗಗನ ಮುಟ್ಟುತ್ತಿರುವ ಸನ್ನಿವೇಶದಲ್ಲಿ, ಕೈಗಾರಿಕೆಗಳ ಬೆಳವಣಿಗೆ ಸಾಕಷ್ಟು ಪ್ರಮಾಣದಲ್ಲಿಯಾದರೆ ಕಾರ್ಮಿಕರ ಜೊತೆಗೆ ರೈತ-ಕೂಲಿಕಾರರ ಜೀವನ ಮಟ್ಟವು ಸುಧಾರಿಸುತ್ತದೆ ಎಂದು ಪಿ. ರಾಮಚಂದ್ರ ರಾವ್ ವಿವರಿಸಿದರು.

ಸ್ಥಳೀಯ ಸಮಸ್ಯೆಗಳಿಗೆ ಸ್ಪಂದನೆ

ದೇಶ ಸ್ವಾತಂತ್ರ್ಯದ ಸ್ವರ್ಣ ಜಯಂತಿ ಆಚರಿಸುತ್ತಿದೆ. ಜನತೆಯ ಮೂಲಭೂತ ಅಗತ್ಯಗಳಾದ ಕುಡಿಯುವ ನೀರು, ಆಸ್ಪತ್ರೆ, ಶಾಲೆ, ರಸ್ತೆ ಸಂಚಾರ ಸೌಲಭ್ಯ ಮುಂತಾದವುಗಳಿಂದ ಜನರು ಇನ್ನೂ ವಂಚಿತರಾಗಿ ಬದುಕುತ್ತಿದ್ದಾರೆ. ಇಂತಹ ಪ್ರದೇಶಗಳಲ್ಲಿ ಪಕ್ಷದ ಸದಸ್ಯರು ಹಾಗೂ ಪಕ್ಷ ಇಡಿಯಾಗಿ ಮೂಲಭೂತ ಸೌಲಭ್ಯಗಳ ಈಡೇರಿಕೆಗಾಗಿ ಸ್ಪಂದಿಸಬೇಕಾಗಿದೆ ಎಂದು ಅವರು ಕರೆ ನೀಡಿದರು.

ಕಾಶಿ ಮಥುರ ಮುಟ್ಟುವುದಿಲ್ಲ !

ದೇಶದ ಮುಸ್ಲಿಮರು ಭಾರತೀಯ ಜನತಾ ಪಕ್ಷಕ್ಕೆ ಮತ ನೀಡುವುದಾದರೆ, ಕಾಶಿ, ಮಥುರ ಗಳನ್ನು ನಾವು ಮುಟ್ಟುವುದಿಲ್ಲ, ಬದಲಾಗಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದದ್ದೆ ಆದರೆ, ಇಡೀ ಅಲ್ಪಸಂಖ್ಯಾತರಿಗೆ ರಕ್ಷಣೆ ನೀಡುತ್ತೇವೆ ಎಂದು ಅಡ್ವಾಣಿ ಮುಸ್ಲಿಮರೆದುರು ಹಲ್ಲು ಗಿಂಜುತ್ತಿದ್ದಾರೆ. ಉತ್ತರ ಪ್ರದೇಶದಲ್ಲಿ ಕಲ್ಯಾಣ ಸಿಂಗ್ ಕೇಂದ್ರದಲ್ಲಿ ಭಾಜಪಾ ಅಧಿಕಾರಕ್ಕೆ ಬಂದರೆ ರಾಮ ಮಂದಿರ ಕಟ್ಟುವುದರ ಜೊತೆಗೆ ಕಾಶಿ ಮಥುರಗಳು ಹಿಂದುಗಳ ಪವಿತ್ರ ಸ್ಥಳಗಳಾಗಲಿವೆ ಎಂದು ಘೋಷಿಸಿರುವುದರ ಮುಖಾಂತರ ಭಾಜಪದ ಮುಖವಾಡವನ್ನು ಜನ ಸಾಮಾನ್ಯರು ಅರ್ಥ ಮಾಡಿಕೊಳ್ಳಬೇಕಾಗಿದೆ ಎಂದರು.

ಕಾಂಗ್ರೆಸ್‌ನ ದಿಕ್ಕು ದಿಸೆಯಿಲ್ಲದ ನಿರ್ಧಾರದಿಂದ ದೇಶ ಒಲ್ಲದ ಚುನಾವಣೆ ಎದುರಿಸಬೇಕಾಗಿದೆ, ಕಾಂಗ್ರೆಸ್ ಹಾಗೂ ಬಿ.ಜೆ.ಪಿ. ಅಧಿಕಾರಕ್ಕೆ ಬರ ಬೇಕೆಂಬ ಹೊಂಚನ್ನು ಸಂಯುಕ್ತ ರಂಗ ಒಗ್ಗಟ್ಟಾಗಿ ಅವರ ತಂತ್ರವನ್ನು ದೇಶದ ಮುಂದಿಟ್ಟದೆ ಹಾಗೂ ಒಂದಾಗಿಯೇ ಚುನಾ ವಣೆ ಎದುರಿಸುತ್ತದೆ ಎಂದರು.

ಸಮಾಜವಾದದತ್ತ

91ರಲ್ಲಿ ಸೋವಿಯತ್ ಒಕ್ಕೂಟ ಹಾಗೂ ಪೂರ್ವ ಯುರೋಪಿನಲ್ಲಿ ಸಮಾಜವಾದ ಕುಸಿದ ನಂತರ ಬಂಡವಾಳಶಾಹಿ ರಾಷ್ಟ್ರ ಶಕ್ತಿಶಾಲಿಯಾಗಿ ಕಂಡಿತು. ಆದರೆ 95ರಲ್ಲಿ ಅಲ್ಲಿ ರಾಜಕೀಯ ಪರಿಸ್ಥಿತಿ ಬದಲಾಯಿತು. ರಷ್ಯಾದ ಸಂಸತ್ತಿಗೆ ನಡೆದ ಚುನಾವಣೆಯಲ್ಲಿ ಕಮ್ಯುನಿಸ್ಟ್ ಪಕ್ಷ ಹೆಚ್ಚಿನ ಸ್ಥಾನಗಳಿಸಿದೆ. ಇಟಲಿಯಲ್ಲಿ ಕಮ್ಯುನಿಸ್ಟ್ ಪಕ್ಷದ ಸಹಕಾರದ ಸರ್ಕಾರ, ಫ್ರಾನ್ಸ್‌ನಲ್ಲಿ ಸಮಾಜವಾದಿ ಹಾಗೂ ಕಮ್ಯುನಿಸ್ಟ್ ಸರಕಾರ ಅಧಿಕಾರಕ್ಕೆ ಬಂದಿದೆ. ಹಾಗೂ ಹಲವಾರು ರಾಷ್ಟ್ರಗಳು ಮತ್ತೆ ಸಮಾಜ ವಾದದತ್ತ ವಾಲುತ್ತಿರುವುದು ಸಂತಸದ ಬೆಳವಣಿಗೆಯಾಗಿದೆ ಎಂದು ಪಿ.ಆರ್. ಅಭಿಪ್ರಾಯ ಪಟ್ಟರು.

ಕೈಗಾರಿಕಾ ರಾಜಧಾನಿಯಾದ ಬೆಂಗಳೂರಿನಲ್ಲಿ 20 ಲಕ್ಷಕ್ಕೂ ಮಿಗಿಲಾಗಿ ದುಡಿಯುವ ಜನರಿದ್ದಾರೆ. ಇಂದು ಜಾತಿ, ಭಾಷೆಗಳ ಪ್ರಾಬಲ್ಯ ಹೆಚ್ಚಾಗಿ ದುಡಿಯುವ ಜನತೆಯ ಹಾಗೂ ರಾಷ್ಟ್ರದ ಐಕ್ಯತೆಗೆ ಬಾಧಕ ಉಂಟಾಗುವ ಸ್ಥಿತಿ ನಿರ್ಮಾಣವಾಗಿದೆ. ಪ್ರತಿಯೊಬ್ಬ ಸದಸ್ಯ ಜನತೆಯ ಮಧ್ಯದಲ್ಲಿ ಹಾಸುಹೊಕ್ಕಾಗಿ ಬೆಳೆದು ಇಂತಹ ಅನಿಷ್ಟ ಪದ್ಧತಿಗಳ ವಿರುದ್ಧ ಪಕ್ಷ ಕಟ್ಟಬೇಕಾಗಿದೆ. ಕಾರ್ಮಿಕ ವರ್ಗ ಆರ್ಥಿಕ ಬೇಡಿಕೆಯಿಂದ ವರ್ಗ ಸಂಘರ್ಷದೆಡೆಗೆ ಬರ ಬೇಕಾಗಿದೆ. ಜೊತೆಗೆ ಕಾರ್ಮಿಕರನ್ನು ಸಂಘಟಿಸಿ ವರ್ಗ ದೃಷ್ಟಿಯಲ್ಲಿ ಕೆಲಸ ಮಾಡಬೇಕಾಗಿದೆ ಎಂದು ರಾಜ್ಯ ಮುಖಂಡರಾದ ಎಸ್. ಸೂರ್ಯನಾರಾಯಣರಾವ್ ತಿಳಿಸಿದರು.

ಸ್ವಾಗತ ಸಮಿತಿಯ ಅಧ್ಯಕ್ಷರಾದ ಶಾಮಣ್ಣ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಕಾಂ. ವಿ.ಜಿ.ಕೆ. ನಾಯರ್, ಜಿ.ಎನ್.ನಾಗರಾಜ್, ಆರ್. ಶ್ರೀನಿವಾಸ್, ಪಿ. ಜಗನ್ನಾಥ, ರೇವಣ್ಣ ವೇದಿಕೆ ಮೇಲೆ ಉಪಸ್ಥಿತರಿದ್ದರು. ಪ್ರಕಾಶ್. ಕೆ. ಸ್ವಾಗತಿಸಿ, ಇ.ಕೆ.ಎನ್. ರಾಜನ್ ಕಾರ್ಯಕ್ರಮ ನಿರೂಪಿಸಿದರು. ಪ್ರಾರಂಭದಲ್ಲಿ ಕ್ರಾಂತಿ ಗೀತೆಯೊಡನೆ ಕಾರ್ಯಕ್ರಮ ಪ್ರಾರಂಭವಾಯಿತು. ಜಿ. ರಾಮಯ್ಯ ವಂದನಾರ್ಪಣೆ ಮಾಡಿದರು.



ಕರುಡು ವರದಿ - ಮೇಲ್ಮಟ್ಟದ ಚರ್ಚೆ

ಜಿಲ್ಲಾ ಕಾರ್ಯದರ್ಶಿ ಆರ್. ಶ್ರೀನಿವಾಸ್ ಕರಡು ವರದಿ ಮಂಡಿಸಿದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್. ನಾಗರಾಜ್ ವರದಿ ಮೇಲಿನ ಚರ್ಚೆಗೆ ಪೂರಕವಾಗಿ ಮಾತನಾಡಿ ವರದಿ ಮೇಲಿನ ಚರ್ಚೆಯ ಗುಣ ಮಟ್ಟ ಹೆಚ್ಚಿಸಿದರು. ಸಮ್ಮೇಳನದಲ್ಲಿ 84 ಪ್ರತಿನಿಧಿಗಳು ಭಾಗವಹಿಸಿ 52 ಜನರು ಚರ್ಚೆಯಲ್ಲಿ ಪಾಲ್ಗೊಂಡು ಕಳೆದ ಸಮ್ಮೇಳನಗಳಿಗಿಂತ ಗುಣತ್ಮಾಕವಾಗಿರುವಂತೆ ಹಾಗೂ ಪಕ್ಷವನ್ನು ಕಟ್ಟಿ ಬೆಳಸಲು ಸಹಾಯಕ ವಾಗುವಂತೆ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿದರು.

ಬೆಂಗಳೂರು ಕೈಗಾರಿಕಾ ನಗರವಾಗಿ ರೂಪುಗೊಳ್ಳುತ್ತಿದ್ದರೂ, ಸಾರ್ವಜನಿಕ ಉದ್ದಿಮೆಗಳು ಕೃತಕವಾಗಿ ರೋಗಗ್ರಸ್ತವಾಗಿ ಸದಾ ಮುಚ್ಚುವ ಭೀತಿಯಲ್ಲಿ ನರಳುತ್ತಿವೆ. ಕಾರ್ಮಿಕರು ಸದಾ ಉದ್ಯೋಗ ಅಭದ್ರತೆಯ ನೆರಳಿನಲ್ಲಿಯೇ ದುಡಿಯುತ್ತಿದ್ದರೆ, ಹೊಸ ಖಾಸಗಿ ಕೈಗಾರಿಕೆ ಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಮಿಕರನ್ನು ನೇಮಿಸಿಕೊಂಡು ಅವರಿಗೆ ಕನಿಷ್ಟ ಕೂಲಿಯನ್ನೂ ಕೊಡದೆ, ಶೋಷಣೆ ಮಾಡುತ್ತಿವೆ. ಜೊತೆಗೆ ಅಸಂಘಟಿತ ವಲಯಗಳಾದ ಗಾರ್ಮೆಂಟ್ಸ್, ಅಗರಬತ್ತಿ ಹಾಗೂ ಬೀಡಿ ಮುಂತಾದ ಅಸಂಘ ಟಿತರನ್ನು ಸಂಘಟಿಸಿ ಅವರಿಗೆ ಮೂಲಭೂತ ಸೌಲಭ್ಯ ಕಲ್ಪಿಸುವುದರ ಜೊತೆಗೆ ರಾಜಕೀಯ ಅರಿವು ಮೂಡಿಸುವುದರ ಮುಖಾಂತರ ಪಕ್ಷವನ್ನು ಕಟ್ಟಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಬೆಂಗಳೂರಿನ ಹೊರ ವಲಯದಲ್ಲಿ ರೈತರು ಹಣದ ಆಸೆಗಾಗಿ ಭೂಮಿ ಮಾರಿ, ಹಣ ಹಾಗೂ ಭೂಮಿಯನ್ನು ಕಳೆದು ಕೊಂಡು ಅದೇ ಭೂಮಿ ಯಲ್ಲಿ ದಿನಗೂಲಿಗಳಾಗಿ ದುಡಿಯ ಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಪರಿಸ್ಥಿತಿ ಮರುಕಳಿಸದಂತೆ ರೈತ ಸಂಘಟನೆಯನ್ನು ಪ್ರಬಲಗೊಳಿಸಿ, ಭೂ ಕೇಂದ್ರೀಕರಣ ಗೊಳ್ಳದಂತೆ ಸಂಘಟಿಸಬೇಕಾಗಿದೆ.

ನಗರದಲ್ಲಿ ನೂರಾರು ಕೊಳಚೆ ಪ್ರದೇಶಗಳಿದ್ದು, ಅವುಗಳೆಲ್ಲವು ಉಳ್ಳವರ ಓಟು ಬ್ಯಾಂಕುಗಳಾಗಿವೆ. ಇಂತಹ ಪ್ರದೇಶದ ಜನತೆಯನ್ನು ಅವರಿಂದ ಬಿಡುಗಡೆಗೊಳಿಸಿ ಅವರಿಗೆ ಅಕ್ಷರ ಜ್ಞಾನ, ಅವರ ಮೂಲಭೂತ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ರಾಜಕೀಯ ಅರಿವು ಮೂಡಿಸಬೇಕಾಗಿದೆ ಎಂದು ಚರ್ಚೆಯಲ್ಲಿ ಪಾಲ್ಗೊಂಡಿದ್ದ ಮಹಿಳಾ ಪ್ರತಿನಿಧಿಗಳ ಅಭಿಪ್ರಾಯವಾಗಿತ್ತು. ಹಾಗೇ ದಲಿತ ಚಳುವಳಿ ದಾರಿ ತಪ್ಪಿದ್ದು, ಅವರನ್ನು ಮಾರ್ಕ್ಸ್‌ವಾದದ ಅಡಿಯಲ್ಲಿ ಸಂಘಟಿಸಿ ಸಮಾಜದ ಮುಖ್ಯ ವಾಹಿನಿಯಲ್ಲಿ ತರಬೇಕಾಗಿದೆ.

ದುಡಿಯುವ ಜನರನ್ನು ಸಂಘಟಿಸಿ ಅವರಲ್ಲಿ ರಾಜಕೀಯ ಅರಿವನ್ನು ಮೂಡಿಸಬೇಕಾದರೆ ಸಾಹಿತ್ಯ, ಐಕ್ಯರಂಗ ಮಾರಾಟ, ಸಾಂಸ್ಕೃತಿಕ ತಂಡಗಳ ಮುಖಾಂತರ ಅವರನ್ನು ತಲುಪಬೇಕಾಗಿದೆ, ಅಷ್ಟೆ ಅಲ್ಲದೆ, ಜನ ಸಾಮಾನ್ಯರ ದಿನ ನಿತ್ಯದ ಸಮಸ್ಯೆಗಳ ಬಗ್ಗೆ, ಸಾರ್ವಜನಿಕ ಕ್ಷೇತ್ರದ ಬಗ್ಗೆ ಮುಂಬರುವ ಲೋಕಸಭಾ ಚುನಾವಣೆಯ ಬಗ್ಗೆ ವಿಶೇಷವಾಗಿ ಪ್ರತಿನಿಧಿಗಳು ಚರ್ಚಿಸಿದರು.

ಕರ್ನಾಟಕದಲ್ಲಿ ಪಕ್ಷವನ್ನು ಕಟ್ಟಿ ಬೆಳೆಸುವಲ್ಲಿ ಶ್ರಮಿಸಿದ ಕಾಂ. ಎನ್.ಎಲ್.ಉಪಾಧ್ಯಾಯರ ಸ್ಮರಣೆಯ ದಿನಾಚರಣೆಗೆ, ಇತ್ತೀಚೆಗೆ ನಿಧನರಾದ ಜಿಲ್ಲಾ ಸಮಿತಿ ಸದಸ್ಯರಾದ ಕಾಂ. ಜಾನ್ ವಿನ್ಸೆಂಟ್ ಹೆಸರಿನಲ್ಲಿ ಪೂರ್ಣಾವಧಿ ಕಾರ್ಯಕರ್ತರಿಗೆ ಸಹಾಯ ನಿಧಿ ಸ್ಥಾಪನೆ ಕುರಿತಂತೆ ಚರ್ಚಿಸಿ, ಉತ್ತಮ ಸಲಹೆಗಳನ್ನು ಸಮ್ಮೇಳನವು ಮುಂದಿನ ಸಮಿತಿಗೆ ನೀಡಿತು.

ಕಾಂ. ಪಿ. ಜಗನ್ನಾಥ್, ಮೀನಾಕ್ಷಿ ಸುಂದರಂ ಹಾಗೂ ವರಲಕ್ಷ್ಮಿಯವರಿದ್ದ ಅಧ್ಯಕ್ಷೀಯ ಮಂಡಳಿಯು ಪ್ರತಿನಿಧಿ ಅಧಿವೇಶನವನ್ನು ಯಶಸ್ವಿಯಾಗಿ ನಡೆಸಿಕೊಟ್ಟಿತು. ಸೂರ್ಯ ನಾರಾಯಣ ರಾವ್. ವಿ.ಜಿ.ಕೆ. ನಾಯರ್ ಹಾಗೂ ಜಿ.ಎನ್. ನಾಗರಾಜ್ ಮಾರ್ಗದರ್ಶನ ನೀಡಿದರು.

ಮೆರವಣಿಗೆ-ಬಹಿರಂಗ ಸಭೆ

ಧುಳಧುಳನೇ ಮಳೆ ಸುರಿಯುತ್ತಿದ್ದರೂ ಲೆಕ್ಕಿಸದೆ ಸಾವಿರಾರು ಸಿ.ಪಿ.ಐ.(ಎಂ) ಕಾರ್ಯಕರ್ತರು ಹಾಗೂ ಬೆಂಬಲಿಗರು ಡಿಸೆಂಬರ್ 7ರಂದು ಮಧ್ಯಾಹ್ನ ಮಡಿವಾಳದಿಂದ ಕೈಯಲ್ಲಿ ನೂರಾರು ಕೆಂಬಾವುಟಗಳನ್ನು ಹಿಡಿದು 16ನೇ ಜಿಲ್ಲಾ ಸಮ್ಮೇಳನಕ್ಕೆ, ಜಯವಾಗಲಿ, 16ನೇ ಸಮ್ಮೇಳನದ ನಿರ್ಣಯ ಗಳು ಜಾರಿಯಾಗಲಿ ಎಂಬಿತ್ಯಾದಿ ಘೋಷಣೆಗ ಳೊಂದಿಗೆ 2 ಕಿ.ಮಿ. ದೂರ ಮೆರವಣಿಗೆ ನಡೆಸಿ ಹೊಂಗಸಂದ್ರದಲ್ಲಿ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು.

ಆರ್. ಶ್ರೀನಿವಾಸ್‌ರವರ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ರಾಜ್ಯ ಕಾರ್ಯದರ್ಶಿ ಪಿ. ರಾಮಚಂದ್ರ ರಾವ್ ಮಾತ ನಾಡಿ, ಯಾವ ದೇಶ ರಾಜ್ಯ, ಪ್ರದೇಶ ಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲವೊ ಅಲ್ಲಿ ಪ್ರಜಾಪ್ರಭುತ್ವದ ನೆಲೆ ಇಲ್ಲವೆಂದರ್ಥ, ಸ್ವಾತಂತ್ರ್ಯದ ಬೆಳಕು ಜನ ಸಾಮಾನ್ಯರ ಮೇಲೆ ಪ್ರಕಾಶಿಸಬೇಕಾಗಿದೆ ಎಂದರು.

ಅತಿಥಿಯಾಗಿದ್ದ ಪಕ್ಷದ ರಾಜ್ಯ ಮುಖಂಡರು ಹಾಗೂ ಶಾಸಕರೂ ಆದ ಕಾಂ. ಜಿ.ವಿ. ಶ್ರೀರಾಮರೆಡ್ಡಿ ಮಾತನಾಡಿ, 45 ವರ್ಷಗಳ ಕಾಲ ಆಡಳಿತ ನಡೆಸಿದ ಕಾಂಗ್ರೆಸ್ ದೇಶವನ್ನು ದುಸ್ಥಿತಿಗೆ ತಳ್ಳಿದೆ. ಪ್ರತ್ಯೇಕತಾವಾದ, ಕೋಮುವಾದಿ, ಕಾಶ್ಮೀರ ದಲ್ಲಿ ಮುಸ್ಲಿಂ ಮೂಲಭೂತ ವಾದಿಗಳ ಬೆಳವಣಿಗೆಗೆ ಕಾಂಗ್ರೆಸ್ ನೇರ ಹೊಣೆಯಾಗಿದೆ ಎಂದರು.

11 ವರ್ಷಗಳಷ್ಟು ಹಳೆಯದಾದ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹತ್ವದ ಪಾತ್ರ ವಹಿಸಿದ ಕಾಂಗ್ರೆಸ್, ತನ್ನ ಉಳಿವಿಗಾಗಿ ಒಬ್ಬ ವಿದೇಶಿ ಸೋನಿಯಾ ಗಾಂಧಿಯ ನಿರೀಕ್ಷೆಯಲ್ಲಿರುವುದು ಶೋಚನೀಯ ಎಂದರು.

ಸ್ವಾತಂತ್ರ್ಯದ ಸ್ವರ್ಣಜಯಂತಿಯ ಸುದ್ದಿ ರೇಡಿಯೋ, ಟಿ.ವಿ.ಗಳಲ್ಲಿ ಬಿತ್ತರವಾಗುತ್ತಿದೆ. ವಾಸ್ತವವಾಗಿ ಅದು ಜನ ಸಾಮಾನ್ಯರಿಗೆ ತಲುಪಲಿಲ್ಲ, ಬಿ.ಜೆ.ಪಿ. ಅಧಿಕಾರಕ್ಕೆ ಬಂದರೆ, ಕೃಷಿ ಕಾರ್ಮಿಕರಿಗೆ ಹಾಗೂ ಕಾರ್ಮಿಕರಿಗೆ ರಾಜ್ಯ ಕೊಡಲು ಸಾಧ್ಯವಿಲ್ಲ ಎಂದು ಕಾಂ. ಸೂರಿ ತಿಳಿಸಿದರು.

ವೇದಿಕೆಯಲ್ಲಿ ವಿ.ಜಿ.ಕೆ. ನಾಯರ್, ಕೆ.ಎಸ್. ವಿಮಲಾ, ಪ್ರಭಾ, ಮುಗುವಾಳಪ್ಪ ಅವರಲ್ಲದೆ ಹೊಸ ಕಾರ್ಯದರ್ಶಿ ಮಂಡಳಿ ಸದಸ್ಯರುಗಳಿದ್ದರು. ಶಾಮಣ್ಣ ರೆಡ್ಡಿ ಸ್ವಾಗತಿಸಿ, ಪಿ. ಜಗನ್ನಾಥ ವಂದನೆ ಸಲ್ಲಿಸಿದರು.

16ನೇ ಜಿಲ್ಲಾ ಸಮ್ಮೇಳನವು ಸ್ಥಳೀಯ ಹಾಗೂ ರಾಜ್ಯ ಮಟ್ಟದ ಹಲವಾರು ನಿರ್ಣಯಗಳನ್ನು ಕೈಗೊಂಡು ಅವುಗಳ ಈಡೇರಿಕೆಗಾಗಿ ಸರ್ಕಾರವನ್ನು ಒತ್ತಾಯಿಸಿದೆ. ವಿದ್ಯುತ್ ಬಿಕ್ಕಟ್ಟು ಅಂತ್ಯಕ್ಕಾಗಿ, ಭೂಸುಧಾರಣೆ ತಿದ್ದುಪಡಿ ವಿರೋಧಿಸಿ, ಅಂಗನವಾಡಿ ನೌಕರರ ಸಮಸ್ಯೆ ಗಳ ಪರಿಹಾರಕ್ಕೆ ಒತ್ತಾಯಿಸಿ, ಸಾರ್ವಜನಿಕ ಉದ್ದಿಮೆಗಳ ರಕ್ಷಣೆಗಾಗಿ, ವಿಮಾ ಖಾಸಗೀ ಕರಣದ ವಿರುದ್ಧ, ಬಂದ್ ನಿಷೇಧಿಸಿದ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮರು ಪರಿಶೀಲನೆಗಾಗಿ, ರಾಜ್ಯ ಸರ್ಕಾರದ ಬೆಲೆ ಏರಿಕೆ ವಿರುದ್ಧ, ಬೇಗೂರು ಹೋಬಳಿಯ ಸರ್ಕಾರಿ ಆಸ್ಪತ್ರೆಯ ಕಟ್ಟಡ ದುರಸ್ತಿಗಾಗಿ, ಬೊಮ್ಮನಹಳ್ಳಿ ಅಭಿವೃದ್ಧಿಗೆ ಒತ್ತಾಯಿಸಿ, ಬಗರ್ ಹುಕುಂ ಭೂಮಿಯಲ್ಲಿ ರೈತರಿಗೆ ಹಕ್ಕು ಪತ್ರಕ್ಕಾಗಿ ಭುವನೇಶ್ವರಿ ನಗರದ ವಸತಿ ಹೀನರ ವಸತಿಗಾಗಿ ಒತ್ತಾಯಿಸುವುದರ ಜೊತೆಗೆ ಹಲವಾರು ಪ್ರಮುಖ ನಿರ್ಣಯಗಳನ್ನು ಅಂಗೀಕರಿಸಿ ಮುಂದಿನ ಮೂರು ವರ್ಷಗಳಲ್ಲಿ ಹೋರಾಟ ರೂಪಿಸಲು ಸಮ್ಮೇಳನ ತೀರ್ಮಾನಿಸಿದೆ.

ವರದಿ ; ಜಯರಾಂ

ಹೊಸ ಜಿಲ್ಲಾ ಸಮಿತಿ

ಪಿ. ಜಗನ್ನಾಥ ನೂತನ ಕಾರ್ಯದರ್ಶಿಯಾಗಿ ಅವಿರೋಧವಾಗಿ ಆಯ್ಕೆಗೊಂಡು, ಕಾರ್ಯದರ್ಶಿ ಮಂಡಳಿಗೆ ಆರ್. ಶ್ರೀನಿವಾಸ್, ಪಿ.ಕೆ. ಸುಬ್ರಮಣ್ಯಂ, ಎಸ್. ರೇವಣ್ಣ, ಹೆಚ್.ಎಸ್. ಗೋಪಾಲಗೌಡ, ಇ.ಕೆ.ಎನ್. ರಾಜನ್, ಮೀನಾಕ್ಷಿ ಸುಂದರಂ ಪುನರಾಯ್ಕೆಗೊಂಡರೆ, ಜಿ. ರಾಮಯ್ಯ ಮತ್ತು ಕೆ. ಪ್ರಕಾಶ ಹೊಸದಾಗಿ ಆಯ್ಕೆಗೊಂಡರು.

ಚಂದ್ರ ತೇಜಸ್ವಿ, ಸಹಾಯಾನಾಥನ್, ವಾರಿಯರ್, ಟಿ. ಸುರೇಂದ್ರ ರಾವ್, ಕುಂಜಪ್ಪನ್, ಎಂ. ರಾಜಣ್ಣ, ವರಲಕ್ಷ್ಮಿ, ಕೆ.ಎಸ್. ಸುಬ್ರಮಣ್ಯಂ, ಕೆ.ಎಸ್. ವಿಮಲ, ವೆಂಕಟಾಚಲಯ್ಯ, ಆರ್. ರಾಮಕೃಷ್ಣ, ಗೋಪಾಲಕೃಷ್ಣ, ಪ್ರಭಾವತಿ, ವಿಲ್ಪ್ರೆಡೋರ್, ವೆಂಕಟೇಶಗೌಡ, ಶಾಮಣ್ಣ ರೆಡ್ಡಿ, ರೋನಾಲ್ಡ್ ವಾಜ್ ಜಿಲ್ಲಾ ಸಮಿತಿ ಸದಸ್ಯರಾಗಿ ಆಯ್ಕೆಗೊಂಡಿದ್ದಾರೆ.

ಶಹಪುರ ಮಧ್ಯಂತರ ಸಮಿತಿ ಸಮ್ಮೇಳನ

ಸಿ.ಪಿ.ಐ(ಎಂ)ನ ಗುಲ್ಬರ್ಗ ಜಿಲ್ಲಾ ಕಾರ್ಯದರ್ಶಿಯಾದ ಮಾರುತಿ ಮಾನ್ಪಡೆ ಅವರು ನವೆಂಬರ್ 7 ರಂದು ನಡೆದ ಸಿ.ಪಿ.ಐ.(ಎಂ)ನ ಶಹಾಪೂರ ಮಧ್ಯಂತರ ಸಮಿತಿಯ ಸಮ್ಮೇಳನದ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಕಾಂಗ್ರೆಸ್‌ನ ಭ್ರಷ್ಟ ಆಡಳಿತ ನೀತಿಯಿಂದಾಗಿ ಮತ್ತು ಜನತಾದಳದ ಜನ ವಿರೋಧಿ ನೀತಿಗಳಿಂದಾಗಿ ವಿದ್ಯುತ್, ಬಸ್ ದರ, ಪಡಿತರ ದರಗಳ ಬೆಲೆ ಏರಿಕೆ ಯಿಂದಾಗಿ ಜನ ಸಾಮಾನ್ಯರು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಇದಕ್ಕೆ ಕೇಂದ್ರ - ರಾಜ್ಯ ಸರ್ಕಾರಗಳ ಉದಾರ ಆರ್ಥಿಕ ನೀತಿಗಳೇ ಕಾರಣ ಎಂದರು. ಶಹಾಪೂರ ತಾಲೂಕಾ ಕಾರ್ಯದರ್ಶಿಯಾದ ಕಾಂ|| ಸಿ.ಎಸ್.ಆನೆಗುಂದಿ ಅವರು ಕೃಷ್ಣ ಮೇಲ್ದಂಡೆ ಯೋಜನೆ ಕಾಮಗಾರಿಯಲ್ಲಿ ನಡೆದ ಭ್ರಷ್ಟಾಚಾರ, ನೀರಾವರಿ ಕರ ಏರಿಕೆ ವಿರುದ್ಧ ನಿರಂತರ ಹೋರಾಟ ಮಾಡಿದ ಸಿ.ಪಿ.ಐ(ಎಂ) ಜನತೆಯ ಅನೇಕ ಸಮಸ್ಯೆಗಳಿಗೆ ಪರಿಹಾರಕ್ಕಾಗಿ ಹೋರಾಡಿದೆ, ಮುಂದೆಯೂ ರೈತರೂ, ಕೂಲಿಕಾರರು ಸಂಘಟಿತರಾಗಿ ಹೋರಾಟಕ್ಕೆ ಮುಂದಾ ಗುವಂತೆ ಕರೆ ಕೊಟ್ಟರು.

ಸಭೆಯನ್ನುದ್ದೇಶಿಸಿ ಕಾಂ|| ಅಪ್ಪಯ್ಯ ಹಿರೇಮಠ, ಕಾಂ|| ಜಿ.ಕೆ. ವಿಶ್ವನಾಥ್ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ|| ನಿಂಗಣ್ಣ ಸಗರ ವಕೀಲರು ವಹಿಸಿದ್ದರು.

ಸಭೆಯ ಪ್ರಾರಂಭದಲ್ಲಿ ಕಾಂ|| ಅಮಲಪ್ಪ ಬೇವಿನ ಕಟ್ಟಿ ಸ್ವಾಗತಿಸಿದರೆ, ಕಾಂ|| ಜೈಲಾಲ್ ತೋಟದ ಮನಿ ವಂದಿಸಿದರು.

ಸಮ್ಮೇಳನದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಕಾಮಗಾರಿಯಲ್ಲಿನ ಭ್ರಷ್ಟಾಚಾರ ತಡೆಗಟ್ಟಿ ತ್ವರಿತವಾಗಿ ಪೂರ್ಣಗೊಳಿಸಬೇಕು, ರೈತರ ಭೂಮಿ ಮೇಲೆ ನಿಗದಿ ಪಡಿಸಿದ ಅಭಿವೃದ್ಧಿ ಕರ ಹಿಂತೆಗೆದು ಕೊಳ್ಳಬೇಕು, ಬರಗಾಲ ಪೀಡಿತ ಸ್ಥಳಗಳನ್ನು ಪುನರ್ ಸರ್ವೆ ಮಾಡಿ ಪರಿಹಾರ ನೀಡಬೇಕು. ಗದಗದಿಂದ ವಾಡಿವರೆಗೆ ರೈಲ್ವೆ ಮಾರ್ಗದ ಸರ್ವೆ ಕಾಮ ಗಾರಿ ಪ್ರಾರಂಭಿಸಬೇಕು, ಬಡ ಕೃಷಿಕೂಲಿ ಕಾರರಿಗೆ ಹಸಿರು ರೇಷನ್ ಕಾರ್ಡ್ ವಿತರಣೆ ಮಾಡಬೇಕೆಂದು ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಸಮ್ಮೇಳನದಲ್ಲಿ ಶಹಾಪೂರ ಮಧ್ಯಂತರ ಸಮಿತಿ ಕಾರ್ಯದರ್ಶಿಯನ್ನಾಗಿ ಸಿ.ಎಸ್. ಆನೆಗುಂದಿ ಅವರನ್ನು ಆಯ್ಕೆ ಮಾಡಲಾಯಿತು.

ಭಾಗ್ಯನಗರ (ಬ)ಶಾಖಾ ಸಮ್ಮೇಳನ

ರಾಮದುರ್ಗ: ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಭಾಗ್ಯನಗರ (ಬ) ಸಮ್ಮೇಳನವು ಇತ್ತೀಚೆಗೆ ಪಕ್ಷದ ಕಛೇರಿಯಲ್ಲಿ ನಡೆಯಿತು.

ಕಾಂ. ಪಡೆಪ್ಪ ಶಾನವಾಡರ ಅಧ್ಯಕ್ಷತೆಯಲ್ಲಿ ನಡೆದ ಸಮ್ಮೇಳನವನ್ನು ಜಿಲ್ಲಾ ಕಾರ್ಯದರ್ಶಿ ವಿ.ಪಿ. ಕುಲಕರ್ಣಿ ಉದ್ಘಾಟಿಸಿ ಮಾತನಾಡಿ, ಸಾಮೂಹಿಕ ಸಂಘಟನೆಗಳಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಿ, ಪಕ್ಷ ಕಟ್ಟಿ ಬೆಳಿಸಲು ಕರೆ ನೀಡಿದರು.

ಸಮ್ಮೇಳನವು ತಾಲೂಕಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ಹಲವು ನಿರ್ಣಯಗಳನ್ನು ಕೈಗೊಂಡಿತು.

ಘಟಪ್ರಭಾ ಬಲದಂಡೆ ಕಾಲುವೆಯ ಶೀಘ್ರ ಕಾಮಗಾರಿಗಾಗಿ, ಮಲಪ್ರಭಾ ನದಿಗೆ ಮಹಾದಾಯಿ ಜೋಡಣೆ ಮಾಡುವುದು. ಜಿಲ್ಲೆಯಲ್ಲಿ ಮಳೆ ಇಲ್ಲದ ಕಾರಣ ಬರಗಾಲ ಪೀಡಿತ ಎಂದು ಘೋಷಿಸುವುದು ಕೇಸರಿ ಕಾರ್ಡುದಾರರಿಗೆ ಅಕ್ಕಿ ವಿತರಣೆಗಾಗಿ ಒತ್ತಾಯಿಸುವ ನಿರ್ಣಯ ಅಂಗೀಕರಿಸಿತು.

ಶಾಖೆಯ ಕಾರ್ಯದರ್ಶಿಯಾಗಿ ನಾಗಪ್ಪ ಸಂಗೊಳ್ಳಿ ಪುನರಾಯ್ಕೆ ಯಾದರು.

ನಗರ ಸಮ್ಮೇಳನ

ನಗರ ಸಮ್ಮೇಳನವು ಡಿಸೆಂಬರ್ 2 ರಂದು ನಡೆಯಿತು. ಜಿಲ್ಲಾ ಸಮಿತಿ ಸದಸ್ಯರಾದ ಕಾಂ. ಎಫ್.ಎಮ್. ನದಾಫ್ ಸಮ್ಮೇಳನವನ್ನು ಉದ್ಘಾಟಿಸಿದರು. ನಾಗಪ್ಪ ಸಂಗೊಳ್ಳಿ ಅಧ್ಯಕ್ಷತೆ ವಹಿಸಿದ್ದರು.

ತಾಲೂಕಿಗೆ ಸಂಬಂಧಿಸಿದಂತೆ ಹಲವು ತೀರ್ಮಾನಗಳನ್ನು ಸಮ್ಮೇಳನ ಅಂಗೀಕರಿಸಿ, ತಾಲೂಕಿನ ಅಂಗನವಾಡಿ ಕೇಂದ್ರಗಳಿಗೆ ಸರಿಯಾಗಿ ಆಹಾರ ಪೂರೈಕೆಯಾಗಬೇಕು. ಮಲಪ್ರಭಾ ನದಿಯಲ್ಲಿ ಬೆಳೆದು ನಿಂತ ಆಫ್ ನ್ನು ಕೂಡಲೇ ತೆಗೆಯಬೇಕು. ತಾಲೂಕಿನ ರಸ್ತೆಗಳ ದುರಸ್ತಿ ನಡೆಯಬೇಕು. ಬಸ್ ಸಂಚಾರ ಕಲ್ಪಿಸಬೇಕು. ಬರಗಾಲ ಕಾಮಗಾರಿಯನ್ನು ತಕ್ಷಣ ಪ್ರಾರಂಭಿಸುವಂತೆ ಒತ್ತಾಯಿಸಿದೆ.

ಗೈಬು ಜೈನೆಖಾನ್ ಕಾರ್ಯದರ್ಶಿಯಾಗಿ ಪುನರಾಯ್ಕೆಯಾದರು.

ಕರ್ನಾಟಕ ರಾಜ್ಯ 16ನೇ ಸಮ್ಮೇಳನದತ್ತ ಸಾಗೋಣ.....

ಪಿ.ರಾಮಚಂದ್ರರಾವ್

ಕರ್ನಾಟಕದ ಎಲ್ಲಾ ಜಿಲ್ಲೆಗಳ ಜನತೆಯ ದೃಷ್ಟಿ 'ಕೋಲಾರ ನಗರ' ದೆಡೆಗೆ ಹರಿಯಲಿ.....

ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ 16ನೇ ಸಮ್ಮೇಳನವು ಇದೇ ಡಿಸೆಂಬರ್ 30-31, ಮತ್ತು ಜನವರಿ 1-2 ರಂದು ಕೋಲಾರ ಜಿಲ್ಲೆಯ ಕೋಲಾರ ನಗರದಲ್ಲಿ ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯರಾದ ಕಾಂ|| ಬಾಲಾನಂದನ್ ಮತ್ತು ಪಿ.ರಾಮಚಂದ್ರನ್ ಮಾರ್ಗದರ್ಶನದಲ್ಲಿ ನಡೆಯಲಿದೆ.

ಈಗಾಗಲೇ ಕೋಲಾರ ಜಿಲ್ಲೆಯ ಹಿರಿಯ ಕಾರ್ಯಕರ್ತರನ್ನು, ಗಣ್ಯ ನಾಗರೀಕರನ್ನೊಳಗೊಂಡ 101 ಮಂದಿಯ ಒಂದು ಸ್ವಾಗತ ಸಮಿತಿಯು ನಮ್ಮ ಪಕ್ಷದ ಶಾಸಕರಾದ ಕಾಂ|| ಶ್ರೀರಾಮರೆಡ್ಡಿಯವರ ಅಧ್ಯಕ್ಷತೆಯಲ್ಲಿ ರಚಿಸಲ್ಪಟ್ಟು ಸಮ್ಮೇಳನದ ಯಶಸ್ಸಿಗೆ ಅಹೋರಾತ್ರಿ ದುಡಿಯಲು ಆರಂಭಿಸಿದೆ.

ಸಮ್ಮೇಳನದ ಖರ್ಚು ನಿಭಾಯಿಸುವ ಸಲುವಾಗಿ ಸ್ವಾಗತ ಸಮಿತಿಯು ಕರೆಯ ಮೇಲೆ ಇಡೀ ಜಿಲ್ಲೆಯಲ್ಲಿ ನೂರಾರು ವಾರ್ಡುಗಳನ್ನು ರಚಿಸಿ ಒಂದು ದಿನ ಹುಂಡಿ ಸಂಗ್ರಹವನ್ನು ಮಾಡಿ ಅವರು ರೂ. 50,000 ಕ್ಕೂ ಅಧಿಕ ಹಣ ಸಂಗ್ರಹಿಸಿದ್ದಾರೆ. (ಇದು ರಾಷ್ಟ್ರದ ಎಲ್ಲಾ ಪಕ್ಷದ ಘಟಕಗಳಿಗೆ ಒಂದು ಮಾದರಿಯಾಗಿದೆ) ಜಿಲ್ಲೆಯಲ್ಲಿ ಎಲ್ಲಾ ಹೋರಾಟಗಳಲ್ಲಿ ಪಕ್ಷಕ್ಕೆ ಜನತೆಯ ವಿವಿಧ ವಿಭಾಗಗಳಿಂದ ಹಣ ಸಂಗ್ರಹಿಸಲು ಅವರು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಜಿಲ್ಲೆಯ ಪ್ರತಿಯೊಬ್ಬ ಪಕ್ಷದ ಸದಸ್ಯರೂ ತಮ್ಮ ತಮ್ಮ ಶಕ್ತಿಗನುಸಾರವಾಗಿ ವಂತಿಗೆ ತೆರಬೇಕೆಂಬ ಆದೇಶ ಕಾರ್ಯಕ್ಕೆ ಬರುತ್ತಿದೆ.

ಸಮ್ಮೇಳನದ ಪ್ರಚಾರಕ್ಕೆ ಸ್ವಾಗತ ಸಮಿತಿಯು ವಿಶೇಷ ಗಮನ ಕೊಡುತ್ತಿದೆ. ಬಣ್ಣಬಣ್ಣದ ಸಾವಿರಾರು ಪೋಸ್ಟರುಗಳನ್ನು ಜಿಲ್ಲೆಯ ಮೂಲೆಮೂಲೆಯಲ್ಲಿ ಅಂಟಿಸುವ, ಅದೇ ವೇಳೆ ರಾಜ್ಯದ ಮುಖ್ಯ ಸ್ಥಳಗಳಲ್ಲಿ ಪ್ರಕಟಿಸುವ ಕೆಲಸವು ಸಾಗುತ್ತಿದೆ. ಲಕ್ಷ ಸಂಖ್ಯೆಯಲ್ಲಿ ಸಿಪಿಐ(ಎಂ) ಪಕ್ಷದ ರಾಜಕೀಯ ಮಹತ್ವವನ್ನು ತಿಳಿಯಪಡಿಸುವ ಹಾಗೂ ಸಮ್ಮೇಳನದ ಕಾರ್ಯ ಕಲಾಪಗಳನ್ನು ವಿವರಿಸುವ ಕರಪತ್ರಗಳನ್ನು ವ್ಯಾಪಕವಾಗಿ ವಿತರಿಸಲಾಗುತ್ತಿದೆ. ಆಕರ್ಷಕ ಬಣ್ಣಬಣ್ಣಗಳಲ್ಲಿ ನುರಿತ ಕಾರ್ಯಕರ್ತರಿಂದ ಜಿಲ್ಲೆಯಾದ್ಯಂತ ಗೋಡೆ ಬರಹಗಳು, ವಿಶೇಷವಾಗಿ, ಹೆದ್ದಾರಿಗಳ ಉದ್ದಕ್ಕೂ ನಡೆಯುತ್ತಿದೆ.

ಕೋಲಾರ ಜಿಲ್ಲೆಯಲ್ಲಿ ಮೂರು ಭಾಷೆಗಳನ್ನಾಡುವ ಜನತೆ ಸಾಕಷ್ಟು ಸಂಖ್ಯೆಯಲ್ಲಿರುವುದರಿಂದ ಕನ್ನಡ, ತೆಲಗು ಮತ್ತು ತಮಿಳು ಭಾಷೆಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಾತ್ಯಾತೀತ, ಪ್ರಜಾಸತ್ತಾತ್ಮಕ ಮತ್ತು ಎಡ ಚಿಂತನೆಗಳ ನ್ನೊಳಗೊಂಡ ಗೀತೆಗಳನ್ನು ಹಾಡುವ ಹಾಡುಗಾರರ ತಂಡಗಳನ್ನು ಬೀದಿ ನಾಟಕಗಳ ತಂಡಗಳನ್ನು, ಜಿಲ್ಲೆಯಲ್ಲಿ ತರಬೇತಿಗೊಳಿಸ ಲಾಗಿದೆ ಮತ್ತು ಅವು ಈಗಾಗಲೇ ಜಿಲ್ಲೆಯ ನಾಲ್ಕು ದಿಕ್ಕುಗಳಿಂದ ಸಮ್ಮೇಳನದ ಸ್ಥಳಪತ್ತ ಗೀತೆಗಳನ್ನು ಹಾಡುತ್ತಾ, ಬೀದಿ ನಾಟಕಗಳನ್ನು ಹಾಡುತ್ತಾ ಸಮ್ಮೇಳನವು ವಿಮರ್ಶಿಸುವ ವಿಷಯಗಳನ್ನು ಪ್ರತಿಪಾದಿಸುತ್ತಾ ಜಾತಾ ಗಳನ್ನು ನಡೆಸಲಾರಂಭಿಸಿದ್ದಾರೆ. ಈ ಜಾತಾಗಳು ಸಾಮಾನ್ಯ ಜನರ ಮನಸ್ಸನ್ನು ಸೂರೆಗೊಳ್ಳುತ್ತಿವೆ.

ಕೋಲಾರ ನಗರವು ಜಿಲ್ಲೆಯ ಕೇಂದ್ರ. ಈ ಕೇಂದ್ರದಲ್ಲಿ ಈವರೆಗೆ ಯಾವುದೇ ಒಂದು ಪಕ್ಷವು ಅಣಿನೆರೆಸಲಾರದಷ್ಟು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಜಿಲ್ಲೆಯ ಎಲ್ಲಾ ತಾಲೂಕುಗಳಿಂದಲೂ ಕೂಲಿಗಾರರು, ಶ್ರಮ ಜೀವಿಗಳು, ರೈತರು, ಮಧ್ಯಮ ವರ್ಗದ ಜನರು, ಸಣ್ಣ ಕೈಗಾರಿಕೆ ನಡೆಸುವವರು, ವ್ಯಾಪಾರಸ್ಥರು ನೆರೆಯುವಂತೆ, ಬೃಹತ್ ಬಹಿರಂಗ ಸಭೆ ನಡೆಸುವ ಕುರಿತು ಎಲ್ಲಾ ತಯಾರಿ ಸಂಭ್ರಮದಿಂದ ನಡೆಯುತ್ತಿದೆ.

ಕೋಲಾರ ಜಿಲ್ಲೆಯಲ್ಲಿ ಮಾತ್ರವಲ್ಲ, ಕೋಲಾರ ಜಿಲ್ಲೆ ಯಲ್ಲಿ ನಡೆ ಯುವ ಸಿಪಿಐ(ಎಂ) 'ಕರ್ನಾಟಕ ರಾಜ್ಯದ ಘಟಕದ ಸಮ್ಮೇಳನ ವಾದುದರಿಂದ ಈ ಸಂದೇಶವಿರುವ ಪೋಸ್ಟರುಗಳನ್ನು ಇಡೀ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರಮುಖ ಸ್ಥಳಗಳಲ್ಲಿ ಅಂಟಿಸಿ ಪ್ರಕಟಿಸಲಾಗುವುದು. ಕೋಲಾರದ ಸಮ್ಮೇಳನಕ್ಕೆ ಕೋಲಾರ ಜಿಲ್ಲೆಯಿಂದ ಮಾತ್ರವಲ್ಲ ಮಂಡ್ಯ, ತುಮಕೂರು ಮತ್ತು ಬೆಂಗಳೂರು ಜಿಲ್ಲೆಯಿಂದಲೂ ಸಹಸ್ರ ಸಂಖ್ಯೆಯಲ್ಲಿ ಜನರು ನೆರೆಯುವಂತೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಎಲ್ಲಕ್ಕಿಂತಲೂ ಹೆಚ್ಚಾಗಿ, ಕೋಲಾರ ನಗರವಲ್ಲಿ ಡಿಸೆಂಬರ್ 30 ರಂದು ನಡೆಯುವ ಸಮ್ಮೇಳನದ ಬೃಹತ್ ಬಹಿರಂಗ ಸಭೆಯಲ್ಲಿ ಪೊಲಿಟ್ ಬ್ಯೂರೋ ಸದಸ್ಯರೂ, ಕೇರಳ ರಾಜ್ಯದ ಜನಪ್ರಿಯ ಮುಖ್ಯಮಂತ್ರಿ ಕಾಂ|| ಇ.ಕೆ.ನಾಯನಾರ್ ಇವರು ಮುಖ್ಯ ಭಾಷಣವನ್ನೀಯಲಿದ್ದಾರೆ. ಅವರು ಕೇರಳದಲ್ಲಿ ರಾಜ್ಯದ ಸೀಮಿತ ಅಧಿಕಾರ, ಹಣಕಾಸಿನ ಮಿತಿಯಲ್ಲಿ ಒಂದು ರಾಜ್ಯ ಸರಕಾರ ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಜನಸಾಮಾನ್ಯರ ಕೆಲಸ ಕಾರ್ಯಗಳನ್ನು ಮಾಡಲು ಸಾಧ್ಯ ಎಂಬುದನ್ನು ವಿವರಿಸಲಿದ್ದಾರೆ. ಕರ್ನಾಟಕ ರಾಜ್ಯದ ಜನತೆಗೆ ತುಲನಾತ್ಮಕ ಮಾನ ದಂಡವನ್ನು ನೀಡಲಿದ್ದಾರೆ.

ಪಕ್ಷದ ಹಿರಿಯ ಮುಖಂಡರಲ್ಲೊಬ್ಬರಾದ ಕಾಂ|| ಬಾಲಾನಂದನ್ ದೇಶದ ಸಿಐಟಿಯು ಕಾರ್ಮಿಕ ಸಂಘಟನೆಯ ಅಧ್ಯಕ್ಷರ ನೆಲೆಯಲ್ಲಿ 'ಭಾರತ ದೇಶದಲ್ಲಿ ವಿಶ್ವ ಬ್ಯಾಂಕ್. ವಿಶ್ವ ಹಣಕಾಸು ಸಂಸ್ಥೆ ಮತ್ತು ಜಾಗತಿಕ ವ್ಯಾಪಾರ ಸಂಘಟನೆಗಳಿಂದ ನಿರ್ದೇಶಿತ ನೂತನ ಆರ್ಥಿಕ ನೀತಿಗಳಿಂದ ಎಲ್ಲಾ ಪ್ರಮುಖ ಕ್ಷೇತ್ರಗಳಲ್ಲಿ ಅನಾಹುತಗಳುಂಟಾಗುತ್ತಿವೆ ಹಾಗಾಗಿ 50,000 ಕೋಟಿ ಗಿಂತಲೂ ಅಧಿಕ ಪ್ರಮಾಣದ ವಂಚನಾ ಪ್ರಕರಣಗಳು ಈ ಧೋರಣೆಗಳ 'ಬಳುವಳಿ' ಎಂಬಂತೆ ಹೇಗೆ ಎದ್ದುಬಂದಿವೆ ಎಂಬುದನ್ನು ವಿವರಿಸಲಿದ್ದಾರೆ. ಪೊಲಿಟ್ ಬ್ಯೂರೋ ಇನ್ನೊಬ್ಬ ಸದಸ್ಯರಾದ ಕಾಂ| ಪಿ.ರಾಮಚಂದ್ರನ್ ಕಳೆದ 18 ತಿಂಗಳುಗಳ ಸಂಯುಕ್ತ ರಂಗ ಸರಕಾರವು ತನ್ನ 5 ವರ್ಷಗಳ ಕಾಲದ ಆಡಳಿತೆ ಪೂರ್ತಿಗೊಳಿಸದಂತೆ ಮಾಡಲು ಅಧಿಕಾರ ದಾಹೀ ಕಾಂಗ್ರೆಸ್ ಪಕ್ಷವು ಏನೆಲ್ಲಾ ಹಂಚಿಕೆಗಳನ್ನು ಮಾಡಿತು ಎಂಬುದನ್ನು ವಿವರಿಸಲಿದ್ದಾರೆ.

ಈ ರಾಜ್ಯ ಸಮ್ಮೇಳನವು ಕರ್ನಾಟಕ ರಾಜ್ಯದ ಕೃಷಿ, ಕೈಗಾರಿಕೆ, ವಿದ್ಯುಚ್ಛಕ್ತಿ, ನೀರಾವರಿ, ಪಂಚಾಯತ್ ಮತ್ತು ಪುರ ಸಭಾ ಆಡಳಿತೆ, ರಾಜ್ಯ ಈ ಎಲ್ಲಾ ವಿಷಯಗಳಲ್ಲಿ ಅನುಸರಿಸುತ್ತಾ ಬಂದ ನೀತಿಗಳನ್ನು ಜನತೆಯ ಜೀವನದ ಶ್ರೀಮಂತ ಅನುಭವದ ಆಧಾರದಲ್ಲಿ ಚರ್ಚಿಸಿ ವಿಮರ್ಶಿಸಲಿದ್ದಾರೆ. ಇವುಗಳ ವಿಷಯದಲ್ಲಿ ಬದಲೀ ಪರ್ಯಾಯ ಧೋರಣೆಗಳನ್ನು ನಿರೂಪಿಸಲಿದ್ದಾರೆ.

ಕೊನೆಯದಾಗಿ, ಮುಂಬರುವ ದಿನಗಳಲ್ಲಿ ರಾಜ್ಯಾದ್ಯಂತ ಬಹುಜನ ವಿಭಾಗಗಳಿಂದ ಕೃಷಿ ಕೂಲಿಕಾರರು, ಬಡ ಮತ್ತು ಮಧ್ಯಮ ರೈತರು, ಕಾರ್ಮಿಕರು, ವಿವಿಧ ಮಧ್ಯಮ ವರ್ಗದ ವಿಭಾಗಗಳು ಹಾಗೂ ಸಣ್ಣ ಕೈಗಾರಿಕೆ ಸಂಸ್ಥೆಗಳನ್ನು ಈ ಸರಕಾರದ ನೂತನ ಆರ್ಥಿಕ ನೀತಿಗಳ ಬಾಧೆಗಳಿಂದ ತಪ್ಪಿಸಲು ಹೋರಾಟಗಳನ್ನು ಮಾಡುವ ದಿಕ್ಕಿನಲ್ಲಿ ನಿರ್ಧಾರಗಳನ್ನು ಸಮ್ಮೇಳನ ಕೈಗೊಳ್ಳಲಿದೆ.

ಗ್ರಾಮಾಂತರಗಳಲ್ಲಿ ಭೂಮಿ ಮತ್ತು ಕೂಲಿ ಪ್ರಶ್ನೆಗಳನ್ನು ಕೈಗೆತ್ತಿ ಸಮರಧೀರ ವರ್ಗ ಹೋರಾಟಗಳನ್ನು ಗಂಭೀರವಾಗಿ ಹಮ್ಮಿಕೊಂಡು ರಾಜ್ಯದ ಅರೆಪಾಳೆಯಗಾರಿ ಮತ್ತು ಪಾಳೆಯಗಾರಿ ಸಂಬಂಧಗಳನ್ನು ತೊಡೆದು ಹಾಕುವ ದಿಕ್ಕಿನಲ್ಲಿ ಜನತೆಯ ಚಳುವಳಿಯನ್ನು ಸಂಘಟಿಸಲು ಸೂಕ್ತ ತೀರ್ಮಾನಗಳನ್ನು ಕೈಗೊಳ್ಳಲಿದೆ.

ಸಿಪಿಐ(ಎಂ) ನ ಕರ್ನಾಟಕ ರಾಜ್ಯ ಘಟಕದ 16ನೇ ಸಮ್ಮೇಳನಕ್ಕೆ ಕೋಲಾರಕ್ಕೆ ನಡೆಯೋಣ, ಸಂಗಾತಿಗಳೇ, ನಡೆಯೋಣ ಮುಂದಕ್ಕೆ... ಕರ್ನಾಟಕ ಪ್ರಜಾಸತ್ತಾತ್ಮಕ ಚಳುವಳಿಯನ್ನು ವಿಸ್ತೃತವಾಗಿ ಬೆಳೆಸಿ ಕರ್ನಾಟಕದಲ್ಲಿ ಜನತೆಯ ಚಳುವಳಿ ಮುಂದಕ್ಕೆ ಎಡಕ್ಕೆ ಬಹುಭಾಗದ ಜನ ವಿಭಾಗಗಳ ಹಿತಗಳನ್ನು ಸಾಧಿಸುವ ಆಡಳಿತೆಯನ್ನು ಸಾಧಿಸುವವರೆಗೆ ಮುನ್ನಡೆಯೋಣ. ○

ಬೆಳೆಹಾನಿ ಪರಿಹಾರಕ್ಕಾಗಿ ಸಿಪಿಐ(ಎಂ) ಪ್ರತಿಭಟನೆ

ಮಂಡ್ಯ: ಮಳವಳ್ಳಿ ತಾಲೂಕಿನ ಭತ್ತದ ಬೆಳೆಗೆ ಕಂದು ಜಿಗಿಹುಳು, ಗಣಿಕೆ ರೋಗ, ತಗುಲಿ ಕೈಗೆ ಬಂದ ತುತ್ತು ಬಾಯಿಗ ಇಲ್ಲ ದಂತಾಗಿದೆ. ರೋಗ ತಗುಲಿ ಹಾಳಾಗಿರುವ ಬೆಳೆಗೆ ಪರಿಹಾರ ಕೋರಿ ಸಿಪಿಐ(ಎಂ) ತಾಲೂಕು ಸಮಿತಿಯ ನೇತೃತ್ವದಲ್ಲಿ ನೂರಾರು ರೈತರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ಸಹಾಯಕ ಕೃಷಿ ನಿರ್ದೇಶಕರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಿಪಿಐ(ಎಂ) ಕಾರ್ಯದರ್ಶಿ ಜಿ. ರಾಮಕೃಷ್ಣ ಮಾತನಾಡಿ ತಾಲೂಕಿನಲ್ಲಿ ಭತ್ತದ ಬೆಳೆಗೆ ಕಂದು ಜಿಗಿಹುಳು, ಗಣಿಕೆ, ಮುಂತಾದ ರೋಗ ತಗುಲಿ ಕಟಾವಿಗೆ ಬಂದಿರುವ ಬೆಳೆ ಹಾಳಾಗಿ ರೈತರು ಬಹಳ ಗಂಭೀರವಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕಳೆದ ಕೆಲವು ವರ್ಷಗಳಿಂದ ಜಿಲ್ಲೆಯ ರೈತರು ಅಂತಹದೇ ಸಮಸ್ಯೆ ಎಂದುರಿಸುತ್ತಿದ್ದು, ಕಬ್ಬು ಹಾಗೂ ಭತ್ತದ ಬೆಳೆಗಾರರು ದೊಡ್ಡ ನಷ್ಟ ಅನುಭವಿಸುತ್ತಿದ್ದಾರೆ. ಈ ಸಮಸ್ಯೆಗೆ ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡು ಪರಿಹಾರ ನೀಡುವ ಸುಳಿವು ಇಲ್ಲವಾಗಿದೆ ಎಂದರು.

ಈ ವರ್ಷವೂ ಕೂಡಾ ಬೆಳೆದ ಬೆಳೆ ನಷ್ಟವಾಗಿ ಹಿಂದಿನ ಪರಿಸ್ಥಿತಿಗಿಂತಲೂ ಕ್ರೂರವಾಗಿದೆ. ಆಡಳಿತ ನಡೆಸುತ್ತಿರುವ ಸರ್ಕಾರ ರೈತರ ಬಗ್ಗೆ ಕಿಂಚಿತ್ತು ಕಾಳಜಿ ವಹಿಸದಿರುವುದು ಖಂಡನೀಯವೆಂದರು. ಅತಿ ಶೀಘ್ರದಲ್ಲೇ ನಷ್ಟವಾಗಿರುವ ಬೆಳೆಯ ಪ್ರದೇಶವನ್ನು ಅಧಿಕಾರಿಗಳು ವೀಕ್ಷಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿ, ಪ್ರತಿ ಎಕರೆಗೆ 10 ಸಾವಿರ ರೂಗಳ ಪರಿಹಾರ ಕೊಡಿಸಬೇಕೆಂದು ಅಧಿಕಾರಿಗಳ ಮೂಲಕ ಸರ್ಕಾರವನ್ನು ಒತ್ತಾಯಿಸಿದರು.

ಈ ರೀತಿಯ ನಷ್ಟಕ್ಕೆ ಕೃಷಿ ಅಧಿಕಾರಿಗಳೇ ನೇರ ಹೊಣೆ. ಬೆಳೆಗೆ ರೋಗ ಬಂದಾಗ ಮುನ್ನೆಚ್ಚರಿಕೆ ಕ್ರಮವಾಗಿ ಸರಿಯಾದ ಸಲಹೆ ನೀಡದ ಬೇಜವಾಬ್ದಾರಿ ಯಿಂದ ವರ್ತಿಸಿದ್ದಾರೆ ಎಂದು ಆರೋಪಿಸಿದರು.

ರೈತರ ದುಃಖ ದುಮ್ಮಾನಗಳು ಅಧಿಕಾರಿಗಳಿಗೆ ನಗೆಯ ವಿಷಯವಾಗಿದೆ ಎಂದು ತಾಲೂಕು ಸಮಿತಿ ಸದಸ್ಯ ಎಂ. ಪುಟ್ಟ ಮಾದಯ್ಯ ವಿಷಾದಿಸಿದರು. ಪ್ರತಿಭಟನೆಗೆ ಬೆಂಬಲವಾಗಿ ಎಸ್‌ಎಫ್.ಐ ನ ಕೃಷ್ಣೇಗೌಡ, ಸಿಐಟಿಯುನ ಹನುಮಂತು ಮಾತನಾಡಿದರು.

ರೋಗಕ್ಕೆ ಒಳಗಾಗಿದ್ದ ಭತ್ತದ ಬೆಳೆಯನ್ನು ಜೊತೆಯಲ್ಲಿ ತಂದಿದ್ದ ರೈತರು ಕೃಷಿ ಕಛೇರಿಯ ಮುಂದೆ ಸುಟ್ಟು ಹಾಕಿ, ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಕೆ.ಪಿ.ಆರ್.ಎಸ್.ನ ಗ್ರಾಮ ಘಟಕ ರಚನೆ

ಶಹಾಪೂರ ತಾಲೂಕಿನ ಟೇಕಾಪುರ ಗ್ರಾಮದಲ್ಲಿ ನವೆಂಬರ್ 24 ರಂದು ಕರ್ನಾಟಕ ಪ್ರಾಂತ ರೈತ ಸಂಘದ ಗ್ರಾಮ ಘಟಕವನ್ನು ರಚಿಸಲಾಯಿತು. ಸಭೆಯನ್ನುದ್ದೇಶಿಸಿ ತಾಲೂಕ ರೈತ ಸಂಘದ ಕಾರ್ಯದರ್ಶಿ ದಾವಲಸಾಬ ಸಧಾಫ ಮಾತನಾಡಿ ಸಂಘಟನೆಯ ವಿಚಾರಗಳನ್ನು ಜನತೆಗೆ ತಿಳಿಸಿ, ಬಲಿಷ್ಠ ರೈತ ಸಂಘ ಕಟ್ಟಲು ಕರೆ ಕೊಟ್ಟರು.

ನಂತರ ಸಭೆಯಲ್ಲಿ ಗ್ರಾಮ ಘಟಕದ ಅಧ್ಯಕ್ಷರಾಗಿ ಭಾಗಪ್ಪ ಉಪ್ಪಾರ, ಉಪಾಧ್ಯಕ್ಷರಾಗಿ ಚಂದ್ರಪ್ಪ, ಸಲೀಮಸಾಬ ಕಾರ್ಯದರ್ಶಿಯಾಗಿ ಹೊನ್ನಪ್ಪಗೌಡ ಮತ್ತು ಖಜಾಂಚಿಯನಾಗಿ ಬಾಬು ಗಾದಿಮನಿಯವರನ್ನು ಆಯ್ಕೆ ಮಾಡಲಾಯಿತು. ಸಭೆಯಲ್ಲಿ ಮಲ್ಲಣ್ಣಗೌಡ, ಹಣಮಂತ ಸಾಹುಕಾರ ಮತ್ತು ಮಲ್ಲಪ್ಪ ಹಾಜರಿದ್ದರು.

ಎಂ.ಎಸ್.ಕೆ. ಮಿಲ್ ಪುನುರುಜ್ಜೀವನಕ್ಕೆ ಒತ್ತಾಯ

ವಿದ್ಯುತ್ ನಿಲುಗಡೆಯಿಂದ ಎಂ.ಎಸ್.ಕೆ. ಮಿಲ್‌ನ ಕೆಲಸ ಸ್ಥಗಿತಗೊಂಡಿರುವುದು ತೀವ್ರ ಆತಂಕಕಾರಿಯಾಗಿದೆ. ಕರ್ನಾಟಕದ ಬೆರಳೆಣಿಕೆಯಷ್ಟಿರುವ ರಾಷ್ಟ್ರೀಯ ಕಾರ್ಖಾನೆಗಳ ಪೈಕಿ ಒಂದಾದ ಎಂ.ಎಸ್.ಕೆ. ಮಿಲ್‌ನಲ್ಲಿ ಪ್ರತಿತಿಂಗಳ ವೇತನ ಸಿಗುತ್ತಿಲ್ಲ ಹಾಗೂ ಕಾರ್ಖಾನೆಯ ಹಲವಾರು ವಿಭಾಗಗಳು ಕೆಲಸ ನಿರ್ವಹಿಸುತ್ತಿಲ್ಲವೆಂದು ಸಿ.ಪಿ.ಐ.(ಎಂ) ಆಪಾದಿಸಿದೆ.

ಕ್ಯಾಜುವೆಲ್ ಮತ್ತು ಸಬ್‌ಸ್ಟಿಟ್ಯೂಟ್ ಕಾರ್ಮಿಕರಿಗೆ ಮಿನರ್ವಾ ಮಿಲ್‌ನಂತೆ ಎಲ್ಲ ಭತ್ಯೆಗಳನ್ನು ನೀಡಬೇಕೆಂದು ಹಾಗೂ ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸಿ ಕಾರ್ಮಿಕರ ಹಿತರಕ್ಷಣೆಗೆ ಮುಂದಾಗಬೇಕೆಂದು ಗುಲಬರ್ಗಾ ಸಿ.ಪಿ.ಐ(ಎಂ) ಜಿಲ್ಲಾ ಸಮಿತಿ ಸರ್ಕಾರಕ್ಕೆ ಒತ್ತೀಯಿಸಿದೆ.

ಮಹಿಳಾ ದೌರ್ಜನ್ಯ ಜೆ.ಎಂ.ಎಸ್. ಖಂಡನೆ

ಆಳಂದ ತಾಲೂಕಿನ ಸರಸಂಬಾ ಗ್ರಾಮದಿಂದ ಸಕ್ಕರಗಾ ಗ್ರಾಮಕ್ಕೆ ಹೊರಟಿದ್ದ ಚಾಂದಬಿ ಎಂಬ ಮಹಿಳೆಯ ಮೇಲೆ ಐದು ಜನ ದುಷ್ಕರ್ಮಿಗಳು ಹಿಂಬಾಲಿಸಿ ಅಮಾನುಷವಾಗಿ ದೌರ್ಜನ್ಯ ನಡೆಸಿರುವುದನ್ನು ಖಂಡಿಸಿ ನವೆಂಬರ್ 4 ರಂದು ಜೆ.ಎಂ.ಎಸ್.ನ ಹತ್ತು ಜನರ ನಿಯೋಗವೊಂದು ಪೋಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದೆ.

ಮನವಿ ಪತ್ರದಲ್ಲಿ ಮಾನಸಿಕವಾಗಿ, ದೈಹಿಕವಾಗಿ ಅಘಾತಕ್ಕೆ ಒಳಗಾದ ಚಾಂದ ಬಿಗೆ ರಕ್ಷಣೆ ಕೊಡಬೇಕು. ಆರೋಪಿಗಳನ್ನು ಕೂಡಲೇ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಜೆ.ಎಂ.ಎಸ್. ಒತ್ತಾಯಿಸಿದೆ.

ಗ್ರಾಮ ಸಹಾಯಕರ ಹೋರಾಟಕ್ಕೆ ಬೆಂಬಲ

ಸೇವೆ ಖಾಯಂಗಾಗಿ ಒತ್ತಾಯಿಸಿ ಕಂದಾಯ ಇಲಾಖೆಯ ಗ್ರಾಮ ಸಹಾಯಕರು ನಡೆಸುತ್ತಿರುವ ಅನಿರ್ದಿಷ್ಟ ಧರಣಿ ಸತ್ಯಾಗ್ರಹಕ್ಕೆ ಜೆ.ಎಂ.ಎಸ್. ಮತ್ತು ಎಸ್.ಎಫ್.ಐ. ಗುಲಬರ್ಗಾ ಜಿಲ್ಲಾ ಸಮಿತಿಗಳು ಬೆಂಬಲ ವ್ಯಕ್ತಪಡಿಸಿವೆ.

ಅತ್ಯಂತ ಕಡಿಮೆ ಸಂಬಳದಲ್ಲಿ ಜೀವನ ಸಾಗಿಸುತ್ತಿರುವ ಗ್ರಾಮ ಸೇವಕರ ಸೇವೆಯನ್ನು ಖಾಯಂಗೊಳಿಸಬೇಕು ಮತ್ತು ಗ್ರಾಮ ಸಹಾಯಕರ ಬೇಡಿಕೆಗಳನ್ನು ತಕ್ಷಣ ಈಡೇರಿಸಬೇಕೆಂದು ಜೆ.ಎಂ.ಎಸ್ ಮತ್ತು ಎಸ್.ಎಫ್.ಐ. ಸಂಘಟನೆಗಳು ಸರ್ಕಾರಕ್ಕೆ ಒತ್ತಾಯಿಸಿವೆ.

ಗ್ರಾಮ ಸಹಾಯಕರ ಧರಣಿ ಸ್ಥಳಕ್ಕೆ ಭೇಟಿ ನೀಡಿ ಬೆಂಬಲ ಸೂಚಿಸಿ ನೀಲಾ.ಕೆ. ಮತ್ತು ಅಪ್ಪಯ್ಯ ಹಿರೇಮಠ ಮಾತನಾಡಿ, ಸರ್ಕಾರದ ಜನವಿರೋಧಿ ನೀತಿಯನ್ನು ಖಂಡಿಸಿದರು.

ಕೃಷಿ ಇಲಾಖೆ ನಿಷ್ಕ್ರಿಯತೆ ಪರಿಹಾರಕ್ಕಾಗಿ ರೈತ ಸಂಘ ಒತ್ತಾಯ

ಕಳಪೆ ಕ್ರಿಮಿನಾಶಕಗಳ ಮಾರಾಟದಲ್ಲಿ ಅಧಿಕಾರಿಗಳು ಶಾಮೀಲಾಗಿದ್ದು, ಕೃಷಿ ಇಲಾಖೆಯ ನಿಷ್ಕ್ರಿಯತೆಯನ್ನು ಪ್ರತಿಭಟಿಸಿ ಮತ್ತು ನಷ್ಟ ಅನುಭವಿಸಿದ ರೈತರಿಗೆ ಪರಿಹಾರ ಒದಗಿಸಬೇಕೆಂದು ಒತ್ತಾಯಿಸಿ ನವೆಂಬರ್ 29 ರಂದು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಕರ್ನಾಟಕ ಪ್ರಾಂತ ರೈತ ಸಂಘ ಗುಲಬರ್ಗಾ ಜಿಲ್ಲಾ ಸಮಿತಿ ಒಂದು ದಿನದ ಧರಣಿ ಸತ್ಯಾಗ್ರಹ ನಡೆಸಿತು.

ಎರಡು ಲಕ್ಷ ನಲವತ್ತು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತಿದ ತೊಗರಿ ಬೆಳೆ ಕೀಟಗಳ ನಿಯಂತ್ರಣ ಸಾಧ್ಯವಾಗದೇ ಇಡೀ ಫಸಲು ರೈತರ ಕೈಗೆ ದಕ್ಕದೇ ಹಾಳಾಗಿದೆ. ಕಳಪೆ ಕ್ರಿಮಿನಾಶಕಗಳು ವ್ಯಾಪಕವಾಗಿ ರೈತರಿಗೆ ಪೂರೈಕೆಯಾಗಿದ್ದರಿಂದ ರೈತರ ತೊಗರಿ ಬೆಳೆ ರಕ್ಷಣೆಯಾಗಿಲ್ಲ.

ಕೃಷಿ ಇಲಾಖೆ ಅಧಿಕಾರಿಗಳು ಕಳಪೆ ಕ್ರಿಮಿನಾಶಕಗಳ ವಿತರಣೆಯಲ್ಲಿ ಶಾಮೀಲಾಗಿರುವುದೇ ಇದಕ್ಕೆ ಕಾರಣ ಎಂದು ಧರಣಿಯನ್ನುದ್ದೇಶಿಸಿ ಮಾತನಾಡಿದ ಮಾರುತಿ ಮಾನ್ಪಡೆ, ಮೇಘರಾಜ, ಬಾಬು ಮುಗಳಿ ಮತ್ತು ಶಿವಶರಣಪ್ಪ ಬುದ್ಧಿವಂತ ಇವರು ತಿಳಿಸಿದರು.

ಧರಣಿಯ ಮುಕ್ತಾಯದಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು. ಜಂಟಿ ನಿರ್ದೇಶಕರು ಮತ್ತು ಕೃಷಿ ಸ್ಥಾಯಿ ಸಮಿತಿ ಚೇರ್‌ಮನ್ ಧರಣಿ ಸ್ಥಳಕ್ಕೆ ಭೇಟಿ ನೀಡಿದ್ದರು.

ಯಶಸ್ವಿಯಾದ ಯುವಜನ ಶಿಬಿರ

ಮಾಗಡಿ ರಸ್ತೆಯ ತಿಪ್ಪಗೊಂಡನಹಳ್ಳಿಯಲ್ಲಿ ನವೆಂಬರ್ 16, 17 ರಂದು ಡಿ.ವೈ.ಎಫ್.ಐ. ನೇತೃತ್ವದಲ್ಲಿ ಯಶಸ್ವಿಯಾಗಿ ಯುವಜನ ಶಿಬಿರ ನಡೆಯಿತು. ನಾಲ್ಕು ಯುವತಿಯರನ್ನೊಳಗೊಂಡಂತೆ ಜಿಲ್ಲೆ, ತಾಲೂಕು ಹಾಗೂ ಘಟಕಗಳ ಪ್ರಮುಖ 50 ಪ್ರತಿನಿಧಿಗಳು ಭಾಗವಹಿಸಿದ್ದರು. ಧ್ವಜಾರೋಹಣವನ್ನು ಡಿ.ವೈ.ಎಫ್.ಐ ನ ರವಿಚಂದ್ರನ್ ನೆರವೇರಿಸಿದರು.

ಡಿ.ವೈ.ಎಫ್.ಐ ನ ಸಂಸ್ಥಾಪಕ ಸದಸ್ಯರು, ಶಾಸಕರೂ ಆದ ಸಂಗಾತಿ ಜಿ.ವಿ. ಶ್ರೀರಾಮರೆಡ್ಡಿಯವರು ಉದ್ಘಾಟಿಸಿದರು. ಸ್ವಾತಂತ್ರ್ಯ ಸಮರದಲ್ಲಿ ಯುವಜನರ ತ್ಯಾಗಮಯ ಕೊಡುಗೆಗಳನ್ನು ವಿವರಿಸಿದರು. ಭಗತ್ ಸಿಂಗ್, ರಾಜಗುರು, ಸುಖದೇವ್ ಮೊದಲಾದವರ ಹೋರಾಟ ಅವಿಸ್ಮರಣೀಯವೆಂದರು. ಭಗತ್‌ಸಿಂಗ್ ರ ಸ್ನೇಹಿತರಾದ ರಾವಿಲ್‌ಶರ್ಮರವರ ಹೋರಾಟದ ಬಗ್ಗೆ ತಿಳಿಸಿ, ಭಾಷಣ ಮುಗಿಸಿ, ಕುಳಿತಾಗ ಪಕ್ಕದಲ್ಲಿದ್ದ ವಯೋವೃದ್ಧರು ಆ ಶರ್ಮ ನಾನೇ ಎಂದಾಗ ಶ್ರೀರಾಮರೆಡ್ಡಿ ವಿಸ್ಮಿತರಾದರಂತೆ. ಇಂತಹ ಕ್ರಾಂತಿಕಾರಿಗಳ ಹೋರಾಟದ ಪರಂಪರೆ ನಮ್ಮದು. ಅಂಡೋಮನ್ ಜೈಲು ಇಂದು ನಮಗೆ ಸ್ಮಾರಕವಾಗಿದೆ ಎಂದರು.

ಜಿಲ್ಲಾ ಕಾರ್ಯದರ್ಶಿ ಗೋಪಾಲಕೃಷ್ಣ ಪ್ರಾಸ್ತಾವಿಕ ಭಾಷಣ ಮಾಡಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಖ್ಯಾತ ವಕೀಲರಾದ ಶಿವಶಂಕರಪ್ಪ ಮಾತನಾಡಿ ಇಂತಹ ಪ್ರಗತಿಪರ ಸಂಘಟನೆಯನ್ನು ಬೆಳೆಸಲು ಸದಸ್ಯರು ದುಡಿಯಬೇಕೆಂದು ಕರೆ ನೀಡಿದರು.

ಶಿಬಿರದಲ್ಲಿ ಪಿ. ರಾಮಚಂದ್ರರಾವ್, ರತ್ನಾಕರ್ ಶೆಟ್ಟಿ, ಎಸ್.ವೈ. ಗುರುಶಾಂತ್ ಪಾಲ್ಗೊಂಡು ಉಪನ್ಯಾಸ ನೀಡಿದರು. ಕಾರ್ಯದರ್ಶಿ ಮಂಡಿಸಿದ ವರದಿಯನ್ನು ಪ್ರತಿನಿಧಿಗಳು ಚರ್ಚಿಸಿ, ಸಂಘಟನೆಯ ಬೆಳವಣಿಗೆಗೆ ಉಪಯುಕ್ತ ಸಲಹೆಗಳನ್ನು ನೀಡಿದರು. ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಯ್ತು.

ಸಮಾರೋಪ: ಮುಖ್ಯ ಅತಿಥಿಗಳಾಗಿದ್ದ ಜಿಲ್ಲಾ ಸಿಐಟಿಯು ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಮಾತನಾಡಿ ದೇಶದಲ್ಲಿ ಬೆಳೆಯುತ್ತಿರುವ ನಿರುದ್ಯೋಗ ಹಾಗೂ ಕೋಮುವಾದದ ವಿರುದ್ಧ ಯುವಜನರು ಸಂಘಟಿತರಾಗಿ ಪ್ರಬಲವಾಗಿ ಹೋರಾಡಬೇಕಾಗಿದೆ ಎಂದರು. ಸ್ವಾಗತ ಸಮಿತಿ ಕಾರ್ಯದರ್ಶಿ, ಚಂದ್ರು, ರಮೇಶ, ಕುಮಾರ್, ಕೃಷ್ಣಮೋಹನ್, ಮಹಾದೇವ ಉಪಸ್ಥಿತರಿದ್ದರು. ಲಕ್ಷ್ಮಣ್ ಕುಮಾರ್ ವಂದನೆ ಸಲ್ಲಿಸಿದರು.



ಭಾರತೀಯ ವಿಮೋಚನಾ ಸಮರ

ಸುಮಾರು ಎರಡು ಶತಮಾನಗಳ (1757-1947) ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಏಪ್ರಿಲ್ 8, 1929 ದಿಲ್ಲಿಯಲ್ಲಿ ಕೇಂದ್ರೀಯ ಶಾಸನಸಭೆಯಲ್ಲಿ ಜನ-ವಿರೋಧಿ ಸಾರ್ವಜನಿಕ ಸುರಕ್ಷತೆ ಮಸೂದೆ ಮತ್ತು ಕಾರ್ಮಿಕ-ವಿರೋಧಿ ವ್ಯಾಪಾರ ವಿವಾದ ಮಸೂದೆಗಳು ಸೋತು ಹೋದವು. ಆದರೆ ವೈಸರಾಯ್ ತಕ್ಷಣ ತನ್ನ ವಿಶೇಷಧಿಕಾರ ಬಳಸಿ ಈ ಮಸೂದೆಗಳು ಕಾನೂನುಬದ್ಧ ಶಾಸನಗಳು ಎಂದು ಸಾರಿದ. ತಕ್ಷಣವೇ ಅಲ್ಲಿದ್ದ **ಭಗತ್ ಸಿಂಗ್** ಮತ್ತು **ಬಟುಕೇಶ್ವರ್ ದತ್** ಎರಡು ಬಾಂಬುಗಳನ್ನು ಶಾಸನ ಸಭೆಯತ್ತ ಎಸೆದರು.



ಎಸೆದು ಅವರು ಓಡಿಹೋಗಲಿಲ್ಲ. 'ಇಂಕ್ವಿಲಾಬ್ ಜಿಂದಾಬಾದ್'' 'ಸಾಮ್ರಾಜ್ಯಶಾಹಿಗೆ ಧಿಕ್ಕಾರ' ಕಾರ್ಮಿಕರೇ ಒಂದಾಗಿ ಎಂದು ಘೋಷಿಸುತ್ತಾ ಒಂದು ಕರಪತ್ರವನ್ನು ಹಂಚುತ್ತಾ ನಿಂತರು. ಹಿಂದೂಸ್ತಾನ್ ಸೋಶಲಿಸ್ಟ್ ರಿಪಬ್ಲಿಕ್ ಆರ್ಮಿ ಹೊರಡಿಸಿದ ಈ ಕರಪತ್ರದ ಆರಂಭದ ಪದಗಳು - **''ಕಿವುಡರಿಗೂ ಕೇಳಿಸುವಂತಾಗಬೇಕಾದರೆ ಸದ್ದು ಬಹಳ ಶಕ್ತಿಶಾಲಿಯಾಗಿರಬೇಕು''**

''ಇಬ್ಬರನ್ನೂ ಬಂಧಿಸಲಾಯಿತು. ಜೂನ್ 6, 1929 ರಂದು ಈ ಇಬ್ಬರು ಕ್ರಾಂತಿಕಾರಿಗಳು ನೀಡಿದ ಹೇಳಿಕೆ ಐತಿಹಾಸಿಕ ಹೇಳಿಕೆಯಾಯಿತು.'..... ಈ ಸಂದರ್ಭದಲ್ಲಿ ದೇಶಬಾಂಧವರಿಗೆ ಮನವಿ ಮಾಡುತ್ತೇವೆ. ಯುವಜನರೇ, ಕಾರ್ಮಿಕರೇ, ರೈತರೇ ಹಾಗೂ ಕ್ರಾಂತಿಕಾರಿ ಬುದ್ಧಿಜೀವಿಗಳೇ ಮುಂದೆ ಬಂದು ಸ್ವಾತಂತ್ರ್ಯದ ಬಾವುಟವನ್ನು ಮುಂದೊಯ್ಯುವಲ್ಲಿ ನಮ್ಮ ಜೊತೆಗೂಡಿ....ಹೇಡಿಗಳು ಹಿಂದೆ ಉಳಿದು ಸಂಧಾನ ಮತ್ತು ಶಾಂತಿಗಾಗಿ ಹಲ್ಲುಗಿಂಜಲಿ. ನಮಗೆ ಕರುಣೆ ಬೇಡ, ನಾವೂ ಕರುಣೆ ತೋರೆವು. ಕೊನೆಯವರೆಗೂ, ವಿಜಯ ಅಥವಾ ಮರಣದ ವರೆಗೂ ನಡೆಸುವ ಯುದ್ಧ ನಮ್ಮದು ಇಂಕ್ವಿಲಾಬ್ ಜಿಂದಾಬಾದ್''

ಭಗತ್ ಸಿಂಗ್ ಮತ್ತು ಬಟುಕೇಶ್ವರ ದತ್ತ ಇಬ್ಬರಿಗೂ ದೀರ್ಘ ಶಿಕ್ಷೆ ವಿಧಿಸಲಾಯಿತು.

ಈ ನಡುವೆ ಲಜಪತ್ ರಾಯರ ಸಾವಿಗೆ ಕಾರಣವಾದ ಪೋಲೀಸ್ ಅಧಿಕಾರಿ ಸ್ಯಾಂಡರ್ಸ್‌ನ ಕೊಲೆ ಮೊಕದ್ದಮೆ ಆರಂಭವಾಯಿತು. ಇದನ್ನು **ಲಾಹೋರ್ ಪಿತೂರಿ ಮೊಕದ್ದಮೆ** ಎನ್ನಲಾಯಿತು.

ವ್ಯಾಪಕ ಬಂಧನಗಳಾದವು. ಜೈಲಿನಲ್ಲಿದ್ದ ಭಗತ್ ಸಿಂಗ್ ಮತ್ತು ದತ್ತರನ್ನು ಈ ಮೊಕದ್ದಮೆಯಲ್ಲಿ ಆಪಾದಿತರನ್ನಾಗಿಸಲಾಯಿತು.



ಜೈಲಿನಲ್ಲಿಯೇ ಇನ್ನೊಂದು ಹೋರಾಟ ಆರಂಭವಾಯಿತು. ಸ್ವಾಭಿಮಾನ ಮತ್ತು ರಾಜಕೀಯ ಬಂಧಿಗಳ ಸರಿಯಾದ ಹಕ್ಕುಗಳಿಗಾಗಿ ಲಾಹೋರ್ ಪಿತೂರಿ ಮೊಕದ್ದಮೆಯ ಆಪಾದಿತರು ಒಂದು ಐತಿಹಾಸಿಕ ಉಪವಾಸ ಮುಷ್ಕರ ಆರಂಭಿಸಿದರು. ಈ ದೀರ್ಘ ಹೋರಾಟದಲ್ಲಿ 63 ದಿನಗಳ ಉಪವಾಸದ ನಂತರ ಸೆಪ್ಟೆಂಬರ್ 13, 1929 ರಂದು ಜತೀಂದ್ರ ನಾಥ್ ದಾಸ್ ಹುತಾತ್ಮನಾದ. ಆತನಿಗೆ ಬಲವಂತದಿಂದ ಉಣ್ಣಿಸುವಾಗ ಒಂದು ನಳಿಕೆ ಶ್ವಾಸಕೋಶದ ಒಳಗೆ ಹೋಗಿ ನ್ಯೂಮೋನಿಯಾ ಆಯಿತು. ಆದರೆ ಆತ ಕೊನೆಯುವರೆಗೂ ಯಾವುದೇ ಔಷದಿ ತೆಗೆದುಕೊಳ್ಳಲು ನಿರಾಕರಿಸಿದ. ಜತೀಂದ್ರ ನಾಥ್ ದಾಸ್‌ನ ಬಲಿದಾನ ಇಡೀ ದೇಶವನ್ನು ಬಡಿದೆಬ್ಬಿಸಿತು. ಆತನ ಶರೀರವನ್ನು ಸುಭಾಶ್ ಚಂದ್ರ ಬೋಸ್ ರೈಲಿನಲ್ಲಿ ಲಾಹೋರಿನಿಂದ ಕಲ್ಕತ್ತೆಗೆ ತಗೊಂಡು ಹೋದರು. ದಾರಿಯುದ್ದಕ್ಕೂ ಜನ ಅಪಾರ ಸಂಖ್ಯೆಯಲ್ಲಿ ನೆರೆದು ಶ್ರದ್ಧಾಂಜಲಿ ಅರ್ಪಿಸಿದರು. ಸ್ವಾತಂತ್ರ್ಯಕ್ಕಾಗಿ ಹೋರಾಟದ ಪಣ ತೊಟ್ಟರು. ಸೆಪ್ಟೆಂಬರ್ 17 ರಂದು ಆತನ ಅಂತಿಮ ಮೆರವಣಿಗೆಯಲ್ಲಿ ಕಲ್ಕತ್ತ ಅಭೂತಪೂರ್ವ ಮತ ಪ್ರದರ್ಶನವನ್ನು ಕಂಡಿತು.

1929 ರ ಆರಂಭದಲ್ಲಿ ಪಶ್ಚಿಮ ಬಂಗಾಳದಲ್ಲಿ ಸೆಣಬು ಕಾರ್ಮಿಕರ ಮೊತ್ತ ಮೊದಲ ಸಾರ್ವತ್ರಿಕ ಮುಷ್ಕರ ನಡೆಯಿತು. ಸುಮಾರು 2 ಲಕ್ಷ ಕಾರ್ಮಿಕರು 6 ತಿಂಗಳ ಕಾಲ ಮುಷ್ಕರ ನಡೆಸಿದರು. ತಮ್ಮ ಸಂಘಟನೆಯನ್ನು ಕಟ್ಟಬೇಕಾದ ಬಗ್ಗೆ ಪ್ರಜ್ಞೆ ಬೆಳೆಸಿದ ಹೋರಾಟವದು.


1928 ರಲ್ಲಿ ಕಲ್ಕತ್ತ ಅಧಿವೇಶನದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಬೇಕೆಂಬ ಕಾರ್ಮಿಕರ ಬೃಹತ್ ಮತಪ್ರದರ್ಶನದ ನಂತರ ಬ್ರಿಟಿಶರಿಗೆ 'ಒಂದು ವರ್ಷದ ಒಳಗೆ ಅಧೀನ ಸ್ಥಾನಮಾನ ಕೊಡುವಂತೆ' ಕಾಂಗ್ರೆಸ್ ಅಧಿವೇಶನ ಆಗ್ರಹಪಡಿಸಿದ್ದು ನಿಮಗೆ ನೆನಪಿರಬಹುದು. 1929 ರ ಡಿಸೆಂಬರ್‌ಗೆ ಅದಕ್ಕೆ ಒಂದು ವರ್ಷವಾಯಿತು. ಬ್ರಿಟಿಶ್ ಸರಕಾರ ಏನೂ ಮಾಡದ್ದನ್ನು ಕಂಡಾಗ 'ಅಧೀನ ಸ್ಥಾನಮಾನ' ಕೇಳುವವರೂ ಈಗ ಸಂಪೂರ್ಣ ಸ್ವಾತಂತ್ರ್ಯದ ಘೋಷಣೆಗೆ ದನಿಗೂಡಿಸಿದರು. ಕೊನೆಗೂ ಲಾಹೋರ್ ಕಾಂಗ್ರೆಸ್ ಅಧಿವೇಶನ ಡಿಸೆಂಬರ್ 31, 1929 ರ ಮಧ್ಯರಾತ್ರಿ 'ಸಂಪೂರ್ಣ ಸ್ವಾತಂತ್ರ್ಯ' ತನ್ನ ಗುರಿ ಎಂದು ಅಂಗೀಕರಿಸಿತು.




ಲಾಹೋರ್ ಅಧಿವೇಶನದಲ್ಲಿ ಅಧ್ಯಕ್ಷತೆ ವಹಿಸಿದ್ದ ಜವಾಹರಲಾಲ ನೆಹರು

ಬಹಳ ದಿನಗಳಿಂದ ಇದಕ್ಕಾಗಿ ಕಾಯುತ್ತಿದ್ದ ಹಲವರು ರಾವಿ ನದಿಯ ದಂಡೆಯತ್ತ ಧಾವಿಸಿ ಸ್ವಾತಂತ್ರ್ಯ ಯಾರೂ ಕಸಿದುಕೊಳ್ಳಲಾಗದ ನಮ್ಮ ಹಕ್ಕು ಎಂದು ಸಾರಿದರು. ಜನವರಿ 26, 1930 ರಂದು ದೇಶದ ಎಲ್ಲೆಡೆ ತ್ರಿವರ್ಣ ಧ್ವಜವನ್ನು ಹಾರಿಸಿ ಸ್ವಾತಂತ್ರ್ಯ ದಿನವನ್ನು ಆಚರಿಸಲಾಯಿತು. ಸ್ವಾತಂತ್ರ್ಯದ ಪ್ರತಿಜ್ಞೆಯನ್ನು ಕೈಗೊಳ್ಳಲಾಯಿತು.

ಕಾನೂನು ಭಂಗ ಚಳುವಳಿಯ ಮೊದಲ ಘಟ್ಟ ಆರಂಭವಾಯಿತು. ಉಪ್ಪು-ಕಾನೂನನ್ನು ಮುರಿಯಲು ಗಾಂಧೀಜಿ ಮಾರ್ಚ್ 12, 1930 ರಂದು 79 ಸತ್ಯಾಗ್ರಹಿಗಳೊಂದಿಗೆ ದಾಂಡಿ ಯಾತ್ರೆ ಹೊರಟರು. 200 ಮೈಲಿ ನಡೆದು ಏಪ್ರಿಲ್ 5 ರಂದು ದಾಂಡೀ ತಲುಪಿದರು. ಮರುದಿನ ಉಪ್ಪ ಕಾನೂನನ್ನು ಮುರಿದರು. ಅವರನ್ನು ಬಂಧಿಸಲಾಯಿತು. ಇದೇ ರೀತಿ ದೇಶದ ಹಲವೆಡೆ ಈ ಕಾನೂನು ಭಂಗ ಚಳುವಳಿ ನಡೆಯಿತು. ಹಲವು ಸತ್ಯಾಗ್ರಹಿಗಳು ಪೋಲೀಸರ ಲಾಠಿಗಳಿಗೆ ತಲೆಯೊಡ್ಡಿ ಹುತಾತ್ಮರಾದರು.



ಕಾನೂನು ಭಂಗ ಚಳುವಳಿಯಲ್ಲಿ ವಿದೇಶಿ ಬಟ್ಟೆಗಳಿಗೆ ಬಹಿಷ್ಕಾರ




ಇದೇ ವೇಳೆಗೆ ಪೂರ್ವದಲ್ಲಿ ಬಂಗಾಳದಲ್ಲಿ ಯುವಜನರ ಚಿತ್ತಗಾಂಗ್ ಬಂಡಾಯ ಹಾಗೂ ಪಶ್ಚಿಮ ಪೇಶಾವರದಲ್ಲಿ ಪಠಾಣ್ ಸತ್ಯಾಗ್ರಹಿಗಳ ಮೇಲೆ ಗುಂಡು ಹಾರಿಸಲು ಗಢ್‌ವಾಲೀ ಸೈನಿಕರ ನಿರಾಕರಣೆ ಗಮನ ಸೆಳೆದ ಪ್ರಮುಖ ಘಟನೆಗಳು.

(ಮುಂದುವರಿಯುವುದು)

1997 ರ ಡಿಸೆಂಬರ್ 19 ರಂದು ಕಾ॥ ಬಿ.ಟಿ.ರಣದಿವೆಯವರ 94ನೆಯ ಜನ್ಮದಿನ.

ಕಾ॥ ಬಿ.ಟಿ.ರಣದಿವೆ ಒಂದು ಸ್ಮರಣೆ

ಸಿ.ನಂಜುಂಡಪ್ಪ



ಮಹಾರಾಷ್ಟ್ರದ ಒಂದು ಪ್ರಗತಿಶೀಲ ಪ್ರಾರ್ಥನಾ ಸಮಾಜದ ಕುಟುಂಬದಲ್ಲಿ ಜನಿಸಿದ ಬಾಲ ಚಂದ್ರ ಟಿ.ರಣದಿವೆ ತಮ್ಮ ವಿದ್ಯಾರ್ಥಿ ಜೀವನದಲ್ಲಿಯೇ ಅಂದಿನ ಬ್ರಿಟಿಶ್ ವಸಾಹತುಶಾಹಿಯ ವಿರುದ್ಧ ನಡೆಯುತ್ತಿದ್ದ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಕ್ರಾಂತಿಕಾರಿ ಸ್ಫೂರ್ತಿಯಿಂದ ಭಾಗವಹಿಸಿದರು. ಅವರು ಮುಂಬಯಿ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರದ ಎಂ.ಎ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಚಿನ್ನದ ಪದಕದ ಪ್ರಶಸ್ತಿಯನ್ನು ಪಡೆದು ತೇರ್ಗಡೆಯಾದರು.

1928 ರಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದ ರಣದಿವೆ ಮಹಾರಾಷ್ಟ್ರದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸಂಘಟಿಸಲು, ಕಾರ್ಮಿಕರನ್ನು ಕಾರ್ಮಿಕ ಸಂಘಗಳಲ್ಲಿ ಸಂಘಟಿಸಲು ತೊಡಗಿದರು. ಅವರು ಮುಂಬಯಿಯ ಜವಳಿ ಕಾರ್ಮಿಕರ ಸಮರಶೀಲ ಕಾರ್ಮಿಕ ಸಂಘಗಳನ್ನು ರಚಿಸಿ ಕಾರ್ಮಿಕರಲ್ಲಿ ಮುಷ್ಕರದ ಹಕ್ಕಿನ ಪರಿಕಲ್ಪನೆಯನ್ನು ಮೂಡಿಸಿ 1928-29 ರಲ್ಲಿ ನಡೆದ ಜವಳಿ ಕಾರ್ಮಿಕರ ಚಾರಿತ್ರಿಕ ಮುಷ್ಕರದ ಅದ್ವಿತೀಯ ನಾಯಕರಾದವರು. 1929 ರ ಡಿಸೆಂಬರ್‌ನಲ್ಲಿ ಬ್ರಿಟಿಶ್ ಸರಕಾರವು ಅವರನ್ನು ಬಂಧಿಸಿ ಜೈಲಿನಲ್ಲಿಟ್ಟಿತು. ಜೈಲಿನಿಂದ ಹೊರಗೆ ಬಂದ ಬಿ.ಟಿ.ರಣದಿವೆ ರೈಲ್ವೆ ಕಾರ್ಮಿಕರನ್ನು ಸಂಘಟಿಸಿ 1930 ರ ಫೆಬ್ರವರಿ - ಮಾರ್ಚ್ ತಿಂಗಳುಗಳಲ್ಲಿ ನಡೆದ ರೈಲ್ವೆ ಕಾರ್ಮಿಕರ ಮುಷ್ಕರಕ್ಕೆ ನಾಯಕತ್ವ ಕೊಟ್ಟರು. ಯುವಕಾರ್ಮಿಕರನ್ನು ಸಂಘಟಿಸಲು ಅವರು ವಿಶೇಷ ಗಮನವನ್ನು ಕೊಟ್ಟು 1930 ರ ಜೂನಿನಲ್ಲಿ 'ಯಂಗ್ ವರ್ಕರ್ಸ್ ಲೀಗ್' ಅನ್ನು ರಚಿಸಿದರು.

1931 ರಲ್ಲಿ ಕಲ್ಕತ್ತದಲ್ಲಿ ಜರುಗಿದ ಎಐಟಿಯುಸಿ ಸಮ್ಮೇಳನದಲ್ಲಿ ಅವರು ಮುಂಬಯಿಯ ಗಿರಣಿ ಕಾರ್ಮಿಕರ ಕಾಮಗಾರ್ ಯೂನಿಯನ್ನಿನ ಪ್ರತಿನಿಧಿಯಾಗಿ ಭಾಗವಹಿಸಿದರು. ಆ ಕಾಲದ ಎಐಟಿಯುಸಿಯಲ್ಲಿ ಎಡ ಪಂಥೀಯ ಕಾರ್ಮಿಕ ಸಂಘಗಳ ವರ್ಚಸ್ಸನ್ನು ಬೆಳೆಸುವುದರಲ್ಲಿ ಅವರು ನಾಯಕ ಪಾತ್ರವನ್ನು ವಹಿಸಿದರು.

ಒಂದು ಸಮಾಜವಾದಿ ಪ್ರಭುತ್ವದ ಸ್ಥಾಪನೆಗಾಗಿ ಇಡೀ ಕಾರ್ಮಿಕರನ್ನು ವರ್ಗ ಹೋರಾಟಕ್ಕೆ ಇಳಿಸಲು ಸರಿಯಾದ ತಂತ್ರಗಳನ್ನು ಅನುಸರಿಸಿ ಕಾರ್ಮಿಕ ಸಂಘ ಐಕ್ಯತೆಯನ್ನು ಬೆಸೆಯುವ ರಾಜಕೀಯ ಕರ್ತವ್ಯವನ್ನು ಅವರು ವಹಿಸಿಕೊಂಡರು. ಈ ಉದ್ದೇಶದಿಂದ ಅವರು ಕಾರ್ಮಿಕ ಸಂಘಗಳಲ್ಲಿ 'ಅಧ್ಯಯನ ವೃತ್ತ' ಗಳನ್ನು ರಚಿಸಿ ಮಹಾರಾಷ್ಟ್ರದ ಕಾರ್ಮಿಕ ವರ್ಗದ ಹೋರಾಟಗಳ ಮುಂಚೂಣಿಯಲ್ಲಿದ್ದು ಮಹಾರಾಷ್ಟ್ರದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಿದರು. ಮರಾಠಿ ಭಾಷೆಯಲ್ಲಿ 'ಕ್ರಾಂತಿ' ಎಂಬ ಕಮ್ಯುನಿಸ್ಟ್ ಪತ್ರಿಕೆಯನ್ನು, 'ಮುಂಬಯಿ ಕಾಮಗಾರ್' ಎಂಬ ಪತ್ರಿಕೆಯನ್ನು ಪ್ರಕಟಿಸುವುದರಲ್ಲಿ ನಾಯಕ ಪಾತ್ರವನ್ನು ವಹಿಸಿದರು.

1934 ರಲ್ಲಿ ಕಮ್ಯುನಿಸ್ಟ್ ಪಕ್ಷದ ಅಖಿಲ ಭಾರತ ಕೇಂದ್ರದ ರಚನೆಯಾಗಿ ಬಿ.ಟಿ.ರಣದಿವೆ ಕೇಂದ್ರ ಸಮಿತಿ ಸದಸ್ಯರಾದರು. 1940 ರಲ್ಲಿ ಎರಡನೆಯ ಜಾಗತಿಕ ಮಹಾಯುದ್ಧದ ಸಮಯದಲ್ಲಿ ಮಾರ್ಚ್ 4 ರಂದು ಮುಂಬಯಿಯಲ್ಲಿ ಒಂದು ಐತಿಹಾಸಿಕ ಮುಷ್ಕರವು ನಡೆಯಿತು. ಬಿ.ಟಿ.ರಣದಿವೆ ಈ ಮುಷ್ಕರದ ಪ್ರಮುಖ ಸಂಘಟಕರಾಗಿದ್ದರು. ಬ್ರಿಟಿಶ್ ಸರಕಾರವು ಅವರನ್ನು ಮತ್ತೆ ದಸ್ತಗಿರಿ ಮಾಡಿ ಎರಡು ವರ್ಷಗಳ ಕಾಲ ದವ್ಲೋಲಿ ಜೈಲಿನಲ್ಲಿಟ್ಟಿತು.

1943 ರಲ್ಲಿ ಮುಂಬಯಿಯಲ್ಲಿ ನಡೆದ ಕಮ್ಯುನಿಸ್ಟ್ ಪಕ್ಷದ ಮೊದಲನೆಯ ಅಧಿವೇಶನದಲ್ಲಿ ಕೇಂದ್ರ ಸಮಿತಿಯ ಪರವಾಗಿ ಪಿ.ಸಿ.ಜೋಶಿಯವರು ಮಂಡಿಸಿದ ಮುಖ್ಯ ವರದಿಯಲ್ಲದೆ, ಕಾರ್ಮಿಕ ವರ್ಗದ ಚಳುವಳಿಯ ಕುರಿತು ಒಂದು ಪ್ರತ್ಯೇಕ ವರದಿಯನ್ನು ಮಂಡಿಸಿದರು. ಈ ಅಧಿವೇಶನದಲ್ಲಿ ಅವರು ಕಮ್ಯುನಿಸ್ಟ್ ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರಾಗಿ ಚುನಾಯಿತರಾದರು. ಇದರ ನಂತರ ಬಿ.ಟಿ.ರಣದಿವೆಯವರ ಕಾರ್ಯಚಟುವಟಿಕೆಗಳು ದೇಶಾದ್ಯಂತ ಹರಡಿ ಕಾರ್ಮಿಕ ವರ್ಗದ ಮತ್ತು ಕಮ್ಯುನಿಸ್ಟ್ ಪಕ್ಷದ ಚಳುವಳಿಗಳನ್ನು ಮೇಲೆ ಎತ್ತಿದವು.

1946 ರ ಫೆಬ್ರವರಿ 18 ರಂದು ಮುಂಬಯಿಯಲ್ಲಿ ನೌಕಾದಳದ ಚಾರಿತ್ರಿಕ ಮುಷ್ಕರವು ನಡೆಯಿತು. ಗೋಲೀಬಾರಿನಲ್ಲಿ ಕೆಲವು ಸಂಗಾತಿಗಳು, ಕಾರ್ಮಿಕರು ಪ್ರಾಣಾರ್ಪಣೆ ಮಾಡಿದರು. ಬಿ.ಟಿ.ರಣದಿವೆಯವರ ಧುರೀಣತ್ವದಲ್ಲಿ ಮುಂಬಯಿಯ ಕಾರ್ಮಿಕ ವರ್ಗವು ದಳದ ಮುಷ್ಕರಕ್ಕೆ ಬೆಂಬಲ ಕೊಟ್ಟು, ಮುಷ್ಕರ ಮಾಡಿತು. ಬ್ರಿಟಿಶ್ ಸರ್ಕಾರದ ಪಾಶವೀ ದಬ್ಬಾಳಿಕೆಗೆ ಎದೆಗುಂದದೆ ಬ್ರಿಟಿಸ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟವನ್ನು ಮುಂದುವರಿಸಲು ಬಿ.ಟಿ.ರಣದಿವೆ ಕಾರ್ಮಿಕ ವರ್ಗಕ್ಕೆ ಕರೆಕೊಟ್ಟರು.

ಕಲ್ಕತ್ತದಲ್ಲಿ 1948 ರಲ್ಲಿ ಜರುಗಿದ ಕಮ್ಯುನಿಸ್ಟ್ ಪಕ್ಷದ ಎರಡನೆಯ ಅಧಿವೇಶನದಲ್ಲಿ ಬಿ.ಟಿ.ರಣದಿವೆ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾದರು. 1950 ರವರೆಗೆ ಅವರು ಆ ಸ್ಥಾನದಲ್ಲಿದ್ದರು. ಈ ಅವಧಿಯಲ್ಲಿ ಕಮ್ಯುನಿಸ್ಟ್ ಪಕ್ಷವು ತೆಲಂಗಾಣ ರೈತರ ಸಶಸ್ತ್ರ ಹೋರಾಟಕ್ಕೂ ನೇತೃತ್ವ ಕೊಟ್ಟಿತು.

1956 ರಲ್ಲಿ ಪಾಲ್ಘಾಟಿನಲ್ಲಿ ನಡೆದ ಕಮ್ಯುನಿಸ್ಟ್ ಪಕ್ಷದ ನಾಲ್ಕನೆಯ ಅಧಿವೇಶನದಲ್ಲಿ ಪರಿಷ್ಕರಣವಾದದ ವಿರುದ್ಧ ಅವರು ದೃಢವಾದ ಹೋರಾಟವನ್ನು ನಡೆಸಿದರು. ಮಾರ್ಕ್ಸ್‌ವಾದ-ಲೆನಿನ್‌ವಾದದ ತತ್ವಗಳಿಗೆ ದೃಢವಾಗಿ ಅಂಟಿಕೊಂಡು ಭಾರತದ ಸ್ಥಿತಿಗತಿಗಳಿಗೆ ಅವುಗಳನ್ನು ಅನ್ವಯಿಸಿ ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗಕ್ಕೆ ವಿರುದ್ಧವಾಗಿ ಜನತಾ ಪ್ರಜಾಪ್ರಭುತ್ವ ರಂಗದ ಒಂದು ದಸ್ತಾವೇಜನ್ನು ಅವರು ತಯಾರಿಸಿದರು.

ಸಿಪಿಐ(ಎಂ) ರಚನೆಯಲ್ಲಿ ಅವರು ಮುಖ್ಯಪಾತ್ರ ವಹಿಸಿದರು. ಭಾರತ-ಚೀನ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಭಾರತದ ರಕ್ಷಣಾ ಕಾಯಿದೆಯನ್ವಯ ಕಾಂಗ್ರೆಸ್ ಸರ್ಕಾರವು ಅವರನ್ನು 1962 ರಲ್ಲಿ ಬಂಧಿಸಿದ್ದುದರಿಂದ 1964 ರಲ್ಲಿ ಕಮ್ಯುನಿಸ್ಟ್ ಪಕ್ಷದ ಏಳನೆಯ ಅಧಿವೇಶನವು ಕಲ್ಕತ್ತದಲ್ಲಿ ಜರುಗಿದಾಗ ಅದರಲ್ಲಿ ದೈಹಿಕವಾಗಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಪರಿಷ್ಕರಣವಾದಿಗಳನ್ನು ದೂರ ಮಾಡಿದ ಈ ಅಧಿವೇಶನವು ಬಿ.ಟಿ.ರಣದಿವೆಯವರನ್ನು ಸಿ.ಪಿ.ಐ.(ಎಂ) ನ ಕೇಂದ್ರ ಸಮಿತಿಯ ಸದಸ್ಯರನ್ನಾಗಿ, ಪೊಲಿಟ್‌ಬ್ಯೂರೋ ಸದಸ್ಯರನ್ನಾಗಿ ಚುನಾಯಿಸಿತು. ಆ ತರುವಾಯ 1988 ರ ಡಿಸೆಂಬರಿನಲ್ಲಿ ತಿರುವನಂತಪುರದಲ್ಲಿ ನಡೆದ 13ನೆಯ ಅಧಿವೇಶನದವರೆಗೆ ಪ್ರತಿಯೊಂದು ಅಧಿವೇಶನದಲ್ಲಿ ಅವರು ಆ ಸ್ಥಾನಗಳಿಗೆ ಪುನರಾಯ್ಕೆಯಾಗಿ ಕೊನೆಯುಸಿರೆಳೆಯುವವರೆಗೆ ಅವರು ಆ ಸ್ಥಾನಗಳಲ್ಲಿದ್ದರು.

ಕಾರ್ಮಿಕ ಸಂಘ ಚಳುವಳಿಯಲ್ಲಿದ್ದ ಆರ್ಥಿಕವಾದ, ಸುಧಾರಣಾವಾದ, ಪಂಥವಾದ, ಪ್ರಜೆಯನ್ನು ಸಮಾಜವಾದ ಪ್ರಜ್ಞೆಯ ಮಟ್ಟಕ್ಕೆ ಏರಿಸಲು ಅವರು ಶ್ರಮಿಸಿದರು. ಈ ಉದ್ದೇಶದಿಂದ 1970 ರಲ್ಲಿ ಸಿ.ಐ.ಟಿ.ಯು ಸ್ಥಾಪನೆಯಲ್ಲಿ ನಾಯಕ ಪಾತ್ರ ವಹಿಸಿದರು. ಸ್ಥಾಪನೆಯಾದ ಕೂಡಲೇ ಸಿ.ಐ.ಟಿ.ಯು ಕಾರ್ಮಿಕ ಸಂಘಗಳ ಐಕ್ಯತೆಗೆ, ಕಾರ್ಮಿಕ ವರ್ಗದ ಐಕ್ಯ ಹೋರಾಟಕ್ಕೆ ಕರೆಕೊಟ್ಟಿತು. ಸ್ಥಾಪನಾ ಸಮ್ಮೇಳನದಲ್ಲಿ ಸಿ.ಐ.ಟಿ.ಯು ಅಧ್ಯಕ್ಷರಾಗಿ ಚುನಾಯಿತರಾದ ಬಿ.ಟಿ.ರಣದಿವೆ ಬದುಕಿರುವಷ್ಟು ಕಾಲ ಆ ಸ್ಥಾನದಲ್ಲಿದ್ದರು. ಅವರ ನೇರ ಮಾರ್ಗದರ್ಶನದಲ್ಲಿ ಸಿ.ಐ.ಟಿ.ಯು ದೇಶದಲ್ಲಿ ಒಂದು ಸಮರಶೀಲ ಕೇಂದ್ರ ಕಾರ್ಮಿಕ ಸಂಘಟನೆಯಾಗಿ ಬೆಳೆಯಿತು. ರಾಜಕೀಯ ಸಿದ್ಧಾಂತದಿಂದ ಕೂಡಿದ ಸಮರಶೀಲತೆಗೆ, ಕಾರ್ಮಿಕ ಸಂಘಗಳನ್ನು ಪ್ರಜಾಸತ್ತಾತ್ಮಕ ರೀತಿಯಲ್ಲಿ ನಡೆಸುವುದಕ್ಕೆ, ತಿಳುವಳಿಕೆಯನ್ನು ಹಂಚಿಕೊಳ್ಳಲು, ಸಾಮೂಹಿಕ ನಾಯಕತ್ವಕ್ಕೆ, ಕಾರ್ಮಿಕಸಂಘ ಚಳುವಳಿಯನ್ನು ಆರ್ಥಿಕವಾದದ ಸಂಕುಚಿತ ಚೌ... ನಿಂದ ಹೊರತೆಗೆದು ಮೇಲೇರಿಸಲು ಅ... ಒತ್ತು ಕೊಟ್ಟರು.

ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಸಾಮ್ರಾಜ್ಯಶಾಹಿಗಳು ರಾಷ್ಟ್ರೀಯ ವಿಮೋಚನಾ ಸಮರಗಳನ್ನು ಬುಡ ಮೇಲು ಮಾಡಿ ಪ್ರಪಂಚದ ಮೇಲೆ ಸವಾರಿ ಮಾಡಲೆಳಸುವುದರ ವಿರುದ್ಧವಾಗಿ, ಯುದ್ಧದ ಅಪಾಯದ ವಿರುದ್ಧವಾಗಿ ಹೋರಾಡಲು ಕಾರ್ಮಿಕ ವರ್ಗಕ್ಕೆ ಅವರು ಕರೆಕೊಡುತ್ತಿದ್ದರು. ಸಾಮ್ರಾಜ್ಯಶಾಹಿ ಪ್ರೇರಿತ ವಿಭಜನಕಾರಿ ಶಕ್ತಿಗಳ ವಿರುದ್ಧವಾಗಿ, ದೇಶದ ಐಕ್ಯತೆ, ಸಮಗ್ರತೆಗಳ ರಕ್ಷಣೆಗಾಗಿ ಹೋರಾಡಲು ಅವರು ಕರೆಕೊಟ್ಟರು.

ಬಿ.ಟಿ. ರಣದಿವೆ ಮಹಾಚಿಂತಕರು. ಮೇಧಾವಿ, ಬರಹಗಾರ, ಭಾಷಣಕಾರ, ಹೋರಾಟಗಾರರಾಗಿದ್ದರು. ಅವರು ತಮ್ಮ ಇಡೀ ಕುಟುಂಬವನ್ನೇ ಸಮರ್ಪಿತ ಕಮ್ಯೂನಿಸ್ಟರನ್ನಾಗಿ ಮಾಡಿದರು. ಸಿಪಿಐ(ಎಂ) ಕೇಂದ್ರ ಸಮಿತಿಯ ಸದಸ್ಯೆಯಾಗಿರುವ ವಿಮಲ ರಣದಿವೆ ಅವರ ಮಡದಿ, ಅಹಲ್ಯಾ ರಾಂಗ್ನೇಕರ್ ಅವರ ತಂಗಿ. ಅವರು ಹಿಂದೆ 'ನ್ಯೂ ಏಜ್' ಮಾಸಿಕದ, ತದನಂತರ 'ಪೀಪಲ್ಸ್ ಡೆಮೋಕ್ರಸಿ' ವಾರಪತ್ರಿಕೆಯ 'ದಿ ಮಾರ್ಕ್ಸಿಸ್ಟ್' ತ್ರೈಮಾಸಿಕದ ಸಂಪಾದಕರಾಗಿದ್ದರು. ಕಾರ್ಮಿಕ ವರ್ಗ ಚಳುವಳಿ, ಮಾರ್ಕ್ಸ್‌ವಾದದ ಕುರಿತು ಹಲವು ಕಿರು ಹೊತ್ತಿಗೆಗಳನ್ನು ಬರೆದಿದ್ದಾರೆ.

ಆಳುವ ವರ್ಗಗಳ ರಾಜಕೀಯ ಪಕ್ಷಗಳ ನೀತಿಗೆ ಪರ್ಯಾಯವಾದ ನೀತಿಯನ್ನು ರೂಪಿಸಿ ಹೋರಾಡಲು ಕಾರ್ಮಿಕ ಸಂಘಗಳ ವಿಶಾಲ ತಳಹದಿಯ ಐಕ್ಯತೆಯನ್ನು ಬೆಸೆಯಬೇಕು, ಕಾರ್ಮಿಕ ಸಂಘಗಳ ಸಂಯುಕ್ತ ಕೂಟದ ರಚನೆಯಾಗಬೇಕೆಂಬುದು ಬಿ.ಟಿ.ರಣದಿವೆಯವರ ಕೊಡುಗೆ.

ಕಾರ್ಮಿಕ ವರ್ಗದ ಅಗ್ರನಾಯಕ, ಕಾರ್ಮಿಕ ವರ್ಗದ ಸರ್ವಾಧಿಕಾರ ಹಾಗೂ ಕಾರ್ಮಿಕ ವರ್ಗದ ನಾಯಕ ಪಾತ್ರ ಪರಿಕಲ್ಪನೆಗಳ ಅಗ್ರ ಪ್ರತಿಪಾದಕ ಬಿ.ಟಿ.ರಣದಿವೆ 1990 ಏಪ್ರಿಲ್ 6 ರಂದು ಮುಂಬೈಯಲ್ಲಿರುವ ಟಾಟಾ ಮೆಮೋರಿಯಲ್ ಆಸ್ಪತ್ರೆಯಲ್ಲಿ ಮೂಳೆಯ ಮಜ್ಜೆಯ ಅರ್ಬುದ ರೋಗದಿಂದ ನಿಧನರಾದರು.

ಅವರ ವಿಚಾರಧಾರೆಯ ಹೋರಾಟವು ಅವರ ನಿಧನದ ನಂತರವೂ ಮುಂದುವರಯುತ್ತಿದೆ.

ಐಎಂಎಫ್ ಕುಂಬಳಕಾಯಿ ಕದ್ದಿತ್ತೆ?

ಕುಂಬಳಕಾಯಿ ಕದ್ದವ ಹೆಗಲು ಮುಟ್ಟಿ ನೋಡಿಕೊಂಡ ಎಂದು ನಮ್ಮ ಗಾದೆಯೊಂದು ಹೇಳುತ್ತದೆ. ಕದ್ದವನಿಗೆ ತಪ್ಪಿನ ಪಾಪಪ್ರಜ್ಞೆ ಕಾಡುವುದರಿಂದ ಆತ ಹೀಗೆ ನಡೆದುಕೊಳ್ಳುತ್ತಾನೆ ಎಂಬುದು ಗಾದೆಯ ತಾತ್ಪರ್ಯ. ಐ.ಎಂ.ಎಫ್ ಸಹ ಹೀಗೇ ವರ್ತಿಸುತ್ತಿದೆ. ಇಲ್ಲಿ ಕಳ್ಳತನವಾದದ್ದು ಆಗ್ನೇಯ ಏಶೀಯ ದೇಶಗಳ ನಾಣ್ಯಗಳ ಸ್ಥಿರತೆ. ಒಂದಾದ ಮೇಲೊಂದರಂತೆ ಆಗ್ನೇಯ ಏಶಿಯಾ ದೇಶಗಳ ನಾಣ್ಯಗಳು ಕುಸಿದು ಬೀಳುತ್ತ ಬಿಕ್ಕಟ್ಟು ಎದುರಿಸಿದವು. ಕೊರಿಯಾ ಇಂಡೊನೇಶಿಯಾ, ಥಾಯ್‌ಲ್ಯಾಂಡ್‌ಗಳಲ್ಲೆಲ್ಲ ಇದೇ ಗೋಳು. ಅಲ್ಲಿಯ ನಾಣ್ಯಗಳ ಬೆಲೆ ಕುಸಿದು ಬಿದ್ದು ಅಮೇರಿಕನ್ ಡಾಲರ್ ತಾಂಡವವಾಡುತ್ತಿತ್ತು.

ಕಳೆದ ಹತ್ತು ವರ್ಷಗಳ ಕಾಲ ನಾವು ಸಾಧಿಸಿದ್ದೆಲ್ಲ ಮಣ್ಣು ಪಾಲಾಯಿತು ಎಂದು ಮಲೇಶಿಯಾದ ಮಹತೀರ್ ಮಹಮ್ಮದ್ 15 ದೇಶಗಳ ಶೃಂಗಸಭೆಯಲ್ಲಿ ಗೋಳಿಟ್ಟರು. ಏಶಿಯಾ ಖಂಡದ ಹುಲಿಗಳಾಗಿದ್ದವರು ಈಗ ಡಾಲರಿನ ಕಾಲು ಕಸವಾಗಿಬಿಟ್ಟಿದ್ದಾರೆ. ಹಾಗಿದ್ದರೆ ಇವೆಲ್ಲ ಸಹಜವಾಗಿ ಆದ ಬೆಳವಣಿಗೆಗಳೇ? ಏಶಿಯಾದ ಹುಲಿಗಳೆನಿಸಿಕೊಂಡ ದೇಶಗಳ ಔದ್ಯಮಿಕ ಪ್ರಗತಿ ಬರೀ ಭ್ರಮೆಯೇ?

ಆಗ್ನೇಯ ಏಶಿಯಾ ದೇಶಗಳ ಜನತೆ ಇಂದು ಕಂಗಾಲಾಗಿ ಹೋಗಿದ್ದಾರೆ. ಏನಾಗುತ್ತಿದೆ ಎಂದು ಅರಿವಾಗುವುದರೊಳಗೆ ಪ್ರಪಂಚವೇ ಅವರ ತಲೆಯ ಮೇಲೆ ಬಿದ್ದಂತಾಗಿದೆ. ಈ ದೇಶಗಳ ಜಾಗತಿಕ ವ್ಯಾಪಾರ, ವ್ಯವಹಾರವೇ ಕುಸಿದು ಬಿದ್ದಿದೆ. ಆ ದೇಶಗಳ ನಾಣ್ಯಗಳ ಬೆಲೆ ಪಾತಾಳಕ್ಕಿಳಿದಿದೆ.

ಇಂತಹ ಸಂದರ್ಭದಲ್ಲಿ ಐ.ಎಂ.ಎಫ್. ನಾಣ್ಯ ಬಿಕ್ಕಟ್ಟು ಎದುರಿಸುವ ದೇಶಗಳಿಗೆ ತಾನು ನೆರವು ನೀಡುವುದಾಗಿ ಘೋಷಿಸಿಕೊಂಡಿದೆ. ಇದರ ಜೊತೆಗೆ ಎಲ್ಲಾ ದೇಶಗಳು ಬಂಡವಾಳ ಖಾತೆಯ ಪರಿವರ್ತನೀಯತೆಯನ್ನು ತರಬೇಕೆಂದು ಸಹ ಅದು ಹೇಳಿದೆ. ಬಿಕ್ಕಟ್ಟಿನಲ್ಲಿರುವ ಕೊರಿಯಾ ಮತ್ತು ಇಂಡೋನೇಶಿಯಾಗಳಿಗೆ ಅಪಾರ ಪ್ರಮಾಣದ ಸಾಲವನ್ನು ನೀಡಲು ಐ.ಎಂ.ಎಫ್. ಮುಂದೆ ಬಂದಿದೆ.

ಆದರೆ ಐ.ಎಂ.ಎಫ್. ಸಾಲದೊಂದಿಗೆ ಅದರ ಷರತ್ತುಗಳೂ ಬರುತ್ತವೆ. ಈ ಷರತ್ತುಗಳು ಸಾಮ್ರಾಜ್ಯಶಾಹಿ ದೇಶಗಳಿಗೆ ಅನುಕೂಲವಾಗಿಯೇ ಇರುತ್ತವೆ. ಅಧಿಕಾರಗಳು ಅಮೇರಿಕ ಅಭಿಮುಖವಾಗುತ್ತಲೂ ಹೋಗುತ್ತವೆ. ಅವುಗಳ ದಿಕ್ಕು ಬದಲಾದರೆ ತಾಪತ್ರಯ ಖಂಡಿತ.

ಐ.ಎಂ.ಎಫ್. ಇನ್ನೊಂದು ದೊಡ್ಡ ಮಾತನ್ನು ಹೇಳಿಕೊಂಡಿದೆ. "ನಾನೇನೂ ಗಿರಾಕಿಗಳನ್ನು ಹುಡುಕುತ್ತಿಲ್ಲ" ಎಂಬುದೇ ಆ ಮಾತು.

ಐ.ಎಂ.ಎಫ್‌ನ ಗಿರಾಕಿ ಹುಡುಕಾಟದ ಕೂಸುಗಳಾಗಿ ಈ ಆಗ್ನೇಯ ಏಶಿಯಾ ದೇಶಗಳ ನಾಣ್ಯ ಬಿಕ್ಕಟ್ಟು ಉಂಟಾಗಿದೆಯೇ? ಬೇರೆ ಕಾರಣಗಳು ಒತ್ತಟ್ಟಿಗಿರಲಿ. ಐ.ಎಂ.ಎಫ್.ನ ವರ್ತನೆ ನೋಡಿದರೆ ಇರಬಹುದೆಂದೆನಿಸುತ್ತದೆ.

ಹಾಗಿದ್ದರೆ ಈ ಜಾಗತೀಕರಣದ ಉದ್ದೇಶವೇ ಅದೇ? ಜಾಗತೀಕರಣದ ಹೆಸರಿನಲ್ಲಿ ಆರ್ಥಿಕಗಳನ್ನು ತೆರೆಯುವಂತೆ ಮಾಡಿ ನಂತರ ಆ ಆರ್ಥಿಕಗಳಿಗೆ ಹೊಡೆತ ನೀಡಿ ಅವು ಕಷ್ಟದಲ್ಲಿರುವಾಗ ಆರ್ಥಿಕ ನೆರವಿನ ಹಸ್ತವನ್ನು ಮುಂದೆ ಚಾಚುವುದು ಈ ನೆರವಿನ ಆಸೆಗೆ ಬಂದ ದೇಶಗಳು ಪ್ರಪಾತದೊಳಗೆ ಖಾಯಮ್ಮಾಗಿ ಬೀಳುವುದು.

ಐ.ಎಂ.ಎಫ್.ನ ವರ್ತನೆ ಇಂತಹ ಸಾಧ್ಯತೆಯತ್ತವೇ ಕೈಯೆತ್ತಿ ತೋರಿಸುತ್ತಿದೆಯಲ್ಲವೆ?

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಎಲ್ಲ ಸರಿಯಾಗುತ್ತಿತ್ತು ಆದರೆ...............

ಕೇಂದ್ರದ ಜೊತೆ ಐ.ಕೆ. ಗುಜ್ರಾಲ್ ಸರ್ಕಾರದ ಹಣಕಾಸು ಮಂತ್ರಿ ಮಹಾಶಯ ಪಿ. ಚಿದಂಬರಂ ಆಡಿದ ಮಾತು ಇದು. ಸರ್ಕಾರ ಬಿದ್ದ ಮೇಲೆ ಈಗ ಆರ್ಥಿಕ ಬೆಳವಣಿಗೆ ಕುಂಠಿತವಾಗುತ್ತದೆ ಎಂಬ ಮಾತನ್ನು ವಿವಿಧ ರೇಟಿಂಗ್ ಕಂಪನಿಗಳು ಹೇಳುತ್ತಿವೆ. ರಾಜಕೀಯ ಅಸ್ಥಿರತೆ ದೇಶದ ಆರ್ಥಿಕಕ್ಕೆ ಒಳ್ಳೆಯದಲ್ಲ ಎಂದೂ ಹಲವು ಉದಾರೀಕರಣವಾದಿ ಅರ್ಥಶಾಸ್ತ್ರಜ್ಞರು ಹೇಳುತ್ತಿದ್ದಾರೆ.

ಇದೇ ಸಂದರ್ಭವೆಂದುಕೊಂಡು ಈ ಕೇಂದ್ರ ಹಣಕಾಸು ಮಂತ್ರಿ ಮಹೋದಯರು ಪತ್ರಿಕಾ ಸಮ್ಮೇಳನದಲ್ಲಿ ಅತ್ತಿದ್ದಾರೆ. ಮೊದಲು ದೇವೇಗೌಡರ ಸರ್ಕಾರ ಇತ್ತು. ಅನಂತರ ಏಳೇ ತಿಂಗಳುಗಳಲ್ಲಿ ಗುಜ್ರಾಲರ ಸರ್ಕಾರ ರಾಜಿನಾಮೆ ನೀಡಬೇಕಾಯಿತು. ಇಷ್ಟೊಂದು ಅಸ್ಥಿರತೆಯಿರುವಾಗ ತನಗೆ ಆರ್ಥಿಕವನ್ನು ಭದ್ರಪಡಿಸುವ ಅವಕಾಶವೇ ದೊರೆಯಲಿಲ್ಲ ಎಂಬುದೇ ಈ ಗೋಳಾಟದ ಒಳ ಇಂಗಿತ. ಅಂದರೆ ಈ ಸರ್ಕಾರಗಳು ಬೀಳದೇ ಹೋಗಿದ್ದಲ್ಲಿ ತಾನು ಅನುಸರಿಸಿದ ಆರ್ಥಿಕ ನೀತಿಗಳು ದೇಶದ ಆರ್ಥಿಕವನ್ನೇ ಸುಧಾರಿಸುತ್ತಿದ್ದವು ಎಂಬುದೇ ಅವರ ಮಾತಿನ ಅರ್ಥ. ಆದರೆ ಸಂಯುಕ್ತರಂಗದ ಸಮಾನ ಕನಿಷ್ಠ ಕಾರ್ಯಕ್ರಮವನ್ನು ಮೀರಿ ನಡೆದವರಲ್ಲಿ ಮೊದಲಿಗರು ಈ ಪಿ. ಚಿದಂಬರಂ. ಆಗಲೇ ಅವರು ಅನುಸರಿಸಿದ ಆರ್ಥಿಕ ನೀತಿಗಳ ಅಪಾಯಗಳು ಕಾಣತೊಡಗಿದ್ದವು.

ನಿರೀಕ್ಷಿಸಿದ ಮಟ್ಟದಲ್ಲಿ ತೆರಿಗೆ ಸಂಗ್ರಹಣೆ ಆಗದೇ ಇರುವುದು, ರಫ್ತು ಬೆಳವಣಿಗೆ ಮರೀಚಿಕೆ ಆಗಿರುವುದು ಇವೆಲ್ಲ ಆರ್ಥಿಕ ಪರಿಸ್ಥಿತಿಯನ್ನೇ ಅಪಾಯದತ್ತ ಕೊಂಡೊಯ್ಯುತ್ತಿವೆ. ಈಗ ಧೀರತನದಿಂದ ಹೇಳಬಹುದಲ್ಲವೆ -"ನಾನೇ ಮುಂದುವರೆದಿದ್ದರೆ ಪರಿಸ್ಥಿತಿಯೇ ಬೇರೆಯಾಗುತ್ತಿತ್ತು" ಎಂದು. ಹೇಗಿದೆ ಈ ಕರಾಮತ್ತು?

ಸುಝುಕಿಯ ಸಮರ

ಯಾರ ವಿರುದ್ಧ ಎಂದಿರಾ? ಭಾರತ ಸರ್ಕಾರದ ವಿರುದ್ಧ. ಸುಝುಕಿ ಎಂಬ ಈ ಜಪಾನೀ ಬಹುರಾಷ್ಟ್ರೀಯ ಕಂಪನಿ ಭಾರತ ಸರ್ಕಾರ ಮತ್ತು ಸುಝುಕಿ ಕಂಪನಿ ಸಮಭಾಗಿತ್ವದಲ್ಲಿ ನಡೆಸುವ ಮಾರುತಿ ಉದ್ಯೋಗ್ ನಿಯಮಿತದಲ್ಲಿ ಶೇ.50 ಭಾಗ ಹೊಂದಿರುವ ಕಂಪನಿ. ಈಗಾಗಲೇ ವ್ಯವಸ್ಥಾಪಕ ನಿರ್ದೇಶಕರ ನೇಮಕಾತಿಯ ವಿಷಯದಲ್ಲಿ ಭಾರತ ಸರ್ಕಾರ ಮತ್ತು ಸುಝುಕಿಯ ನಡುವೆ ಜಟಾಪಟಿ ನಡೆದಿದೆ. ಬಹು ರಾಷ್ಟ್ರೀಯ ಕಂಪನಿಯೊಂದು ಹೇಗೆ ಸಾರ್ವಭೌಮ ದೇಶದ ಸರ್ಕಾರದ ವಿರುದ್ಧವೇ ಸಮರ ಸಾರಬಹುದು ಎಂಬುದಕ್ಕೆ ಇದೊಂದು ಒಳ್ಳೆಯ ಉದಾಹರಣೆ.

ಈಗ ಸುಝುಕಿ ಇತ್ತೀಚೆಗೆ ಪೇಪರುಗಳಲ್ಲಿ ದೊಡ್ಡ ಅಡ್ವರ್ಟೈಸ್‌ಮೆಂಟೊಂದನ್ನು ನೀಡಿ ತನ್ನ ನಡೆವಳಿಕೆಯನ್ನು ಸಮರ್ಥಿಸಿಕೊಂಡು ಭಾರತ ಸರ್ಕಾರದ ನಿಲುವನ್ನು ಖಂಡಿಸಿದೆ. ಈ ವಿಷಯದಲ್ಲಿ ವಿವಿಧ ಪತ್ರಿಕೆಗಳನ್ನು ಸುಝುಕಿ ಸಂಪರ್ಕಿಸಿದೆಯಂತೆ.

ಭಾರತ ಸರ್ಕಾರ ಇದಕ್ಕೆ ಆಕ್ಷೇಪವೆತ್ತಿದೆ. ಸುಝುಕಿ ಇಂದಿನ ಪ್ರಮಾಣದಲ್ಲಿ ಬೆಳೆಯುವುದಕ್ಕೆ ಸರ್ಕಾರ ಅದಕ್ಕೆ ನೀಡಿರುವ ನೆರವು ಮತ್ತು ಪರೋಕ್ಷ ಬೆಂಬಲಗಳೇ ಕಾರಣ. ಆದ್ದರಿಂದ ಸುಝುಕಿ ಈ ಎಲ್ಲ ಯಶಸ್ಸುಗಳಿಗೆ ತಾನೇ ಕಾರಣ ಎಂದು ಹೊಗಳಿಕೊಳ್ಳುವುದು ತಪ್ಪು ಎಂದಿದೆ.. ಅದು. ಮನಸ್ತಾಪವುಂಟಾದ ಮೇಲೆ ಪತ್ರಿಕೆಗಳಲ್ಲಿ ಹೇಳಿಕೆ ನೀಡುವ ಸುಝುಕಿಯ ಏಕಪಕ್ಷೀಯ ನಿರ್ಧಾರ ಸರಿಯಾದದ್ದಲ್ಲ. ಹಾಗೇ ಪತ್ರಿಕೆಗಳಿಗೆ ಹೇಳಿಕೆ ನೀಡುವುದಿದ್ದರೆ ಅದನ್ನು ಎರಡೂ ಪಕ್ಷಗಳು ಸೇರಿ ನೀಡಬಹುದಾಗಿತ್ತು ಎಂದಿದೆ ಭಾರತ ಸರ್ಕಾರ. ಆದರೆ ಲಾಭಕ್ಕಾಗಿ ಬಂದ ಸುಝುಕಿ ಎಂಬ ಬಹುರಾಷ್ಟ್ರೀಯ ಕಂಪನಿಗೆ ಅಷ್ಟೊಂದು ನೈತಿಕ ಪ್ರಜ್ಞೆ ಇರಲು ಸಾಧ್ಯವೇ?

ಕುಶಲ ಕೈಗಾರಿಕೆಗಳ ಕೊಡುಗೆ

ಉದಾರೀಕರಣ ಮಾಡುವಾಗ ಸರ್ಕಾರ ಹೂಡಿದ ವಾದ 'ಉತ್ತಮ ತಂತ್ರಜ್ಞಾನವನ್ನು ಆಮದು ಮಾಡಿಕೊಂಡು ದೇಶದ ರಫ್ತನ್ನು ಹೆಚ್ಚಿಸಬಹುದು. ವಿದೇಶಿ ವಿನಿಮಯವನ್ನು ಗಳಿಸಬಹುದು. ಇದು ದೇಶವನ್ನು ಬಲಗೊಳಿಸುತ್ತದೆ'. ಆದರೆ ತೀವ್ರವಾದ ಉದಾರೀಕರಣ ಜಾರಿಗೆ ಬಂದು ಆರು ವರ್ಷಗಳಿಗೂ ಹೆಚ್ಚಾಗಿದೆ, ಉತ್ತಮ ತಂತ್ರಜ್ಞಾನ ಬಳಸಿ ತಯಾರಿಸಿದ ಸರಕುಗಳ ರಫ್ತು ಬೆಳೆದಿಲ್ಲ.

ಬದಲಿಗೆ ಸಾಂಪ್ರದಾಯಿ ಸರಕುಗಳದ್ದೇ ಇಂದೂ ಮೇಲುಗೈ. ಸಾಂಬಾರ ಜಿನಸುಗಳು, ಆಭರಣಗಳು, ಗೇರುಬೀಜ, ಕರಕುಶಲ ವಸ್ತುಗಳೇ ಈ ಸಾಂಪ್ರದಾಯಿಕ ಸರಕುಗಳು. ಕರಕುಶಲ ವಸ್ತುಗಳ ರಫ್ತು 1996-97 ರ ಏಪ್ರಿಲ್‌ನಿಂದ ಸೆಪ್ಟೆಂಬರ್ ವರೆಗೆ 2156. 82 ಕೋಟಿ ರೂಪಾಯಿಗಳಿಗೇರಿದವು. ಕಳೆದ ವರ್ಷದ ಇದೇ ಅವಧಿಗೆ ಇದು 1923.33 ಕೋಟಿ ರೂಪಾಯಿಗಳಷ್ಟಿತ್ತು. ಈ ಸಾಂಪ್ರದಾಯಿಕ ವಸ್ತುಗಳ ರಫ್ತು ಹೆಚ್ಚಿಸಲು ಉದಾರೀಕರಣದ ಅವಶ್ಯಕತೆ ಖಂಡಿತ ಇರಲಿಲ್ಲ ಅಲ್ಲವೇ?

ಭಾರತೀಯ ರಿಸರ್ವ್ ಬ್ಯಾಂಕಿನ ತಿಪ್ಪರಲಾಗ

ರೂಪಾಯಿ ಕುಸಿಯುತ್ತಲೇ ಇದ್ದದ್ದನ್ನು ಕಂಡು ಭಾರತೀಯ ರಿಸರ್ವ್ ಬ್ಯಾಂಕ್ ಮಧ್ಯ ಪ್ರವೇಶಿಸಿ ಡಾಲರನ್ನು ಮಾರಿ ರೂಪಾಯಿಗೆ ಬೆಂಬಲ ನೀಡಿತು. ಆದರೂ ರೂಪಾಯಿ ಕುಸಿಯುತ್ತಲೇ ಇತ್ತು. ಇಂತಹ ನಿರಂತರ ಕುಸಿತ ಕಂಡ ಭಾರತೀಯ ರಿಸರ್ವ್ ಬ್ಯಾಂಕ್ ಕಂಗಾಲಾಗಿ ದಿಕ್ಕು ತೋಚದೇ ಕುಳಿತಿತು. ಕೊನೆಯ ಅಸ್ತ್ರವಾಗಿ ಅದು ತಾನು ಹಿಂದಿನ ಹಣಕಾಸು ಮತ್ತು ಸಾಲ ನೀತಿಯಲ್ಲಿ ಮಾಡಿದ ಮಾರ್ಪಾಡುಗಳಲ್ಲಿ ಕೆಲವನ್ನು ತಿರುವು ಮುರುವು ಮಾಡಿತು. ಈ ಕ್ರಮಗಳೆಂದರೆ

- 'ಬ್ಯಾಂಕುಗಳ ನಗದು ಶಿಲ್ಕು ಅನುಪಾತವನ್ನು ಶೇ 0.5 ರಷ್ಟು ಹೆಚ್ಚಿಸಿರುವುದು.
- ಅನಿವಾಸಿಯರ ರೂಪಾಯಿ ಠೇವಣಿ ಮೇಲಿನ ನಗದು ಶಿಲ್ಕನ್ನು ತೆಗೆದುಹಾಕಿರುವುದು.
- ಇನ್ನು ಕೆಲವು ತರಹದ ವಿದೇಶಿ ಹಣಕಾಸು ವ್ಯವಹಾರಗಳ ಮೇಲೆ ನಿರ್ಬಂಧ ಹೇರಿರುವುದು.

ಉದಾರೀಕರಣದಿಂದ ಆರ್ಥಿಕ ಬಹಳ ಭದ್ರವಾಗಿದೆ, ಎಂತಹ ಪರಿಸ್ಥಿತಿಯನ್ನೂ ಎದುರಿಸುವ ಸಾಮರ್ಥ್ಯವನ್ನು ಹೊಂದಿದ್ದೇವೆ ಎಂದೆಲ್ಲ ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕುಗಳು ಹೇಳಿ ಕೊಂಡಿದ್ದವು. ಆದರೆ ಈಗ ಭಾರತೀಯ ರಿಸರ್ವ್ ಬ್ಯಾಂಕು ತನ್ನ ಹಿಂದಿನ ಕ್ರಮಗಳನ್ನೇ ತಿರುವು ಮುರುವುಗೊಳಿಸಬೇಕಾಗಿ ಬಂದಿದೆಯೆಂದರೆ ಈ ಸಾಧನೆಗಳ ಪೊಳ್ಳುತನ ಗೊತ್ತಾಗುತ್ತದೆ. ಆದರ ಇವೆಲ್ಲವುಗಳ ಪರಿಣಾಮಗಳನ್ನೂ ದೇಶದ ಜನ ಸಾಮಾನ್ಯರೇ ಹೊರಬೇಕು.

ಬಾಕಿಯುಳಿದಿರುವ ಅವರ ಬಯಕೆಗಳು

ಕೇಂದ್ರದಲ್ಲಿ ಐ.ಕೆ. ಗುಜ್ರಾಲರ ಸರ್ಕಾರ ರಾಜಿನಾಮೆ ನೀಡಿರುವುದರಿಂದ ಉದಾರೀಕರಣವಾದಿಗಳ ಹಲವು ಬಯಕೆಗಳು ಬಾಕಿಯುಳಿದು ಹೋಗಿವೆ. ಅದೇ ಅವರ ಕೊರಗು . ಉದಾರೀಕರಣದ ಹಲವು ಕ್ರಮಗಳು ಬಾಕಿಯುಳಿದು ಹೋಗಿರುವುದರಿಂದಲೇ ದೇಶದ ಆರ್ಥಿಕ ಸ್ಪರ್ಧಾತ್ಮಕತೆ ಪಡೆಯುವಲ್ಲಿ ಹಿಂದೆ ಬಿದ್ದಿದೆ ಎನ್ನುತ್ತಾರೆ ಅವರು. ಅವರ ಪ್ರಕಾರ ಈ ಬಾಕಿಯುಳಿದಿರುವ ಕ್ರಮಗಳೆಂದರೆ

- ಹಣಕಾಸು ಕೊರತೆಯನ್ನು ಒಟ್ಟು ಉತ್ಪಾದನೆಯಲ್ಲಿ ಶೇ 4.5 ರಷ್ಟಕ್ಕೆ ಇಳಿಸಬೇಕಾಗಿತ್ತು. ಅದು ಈಗ ಶೇ. 4.5 ಕ್ಕಿಂತ ಹೆಚ್ಚಿಗಿಯೆ ಆಗಿದೆ.
- ಕೃಷಿ ವಲಯವನ್ನು ಸುಧಾರಿಸಬೇಕು ಎಂಬ ಬಯಕೆ ಈಡೇರಿಲ್ಲ. ವ್ಯಾಪಾರ ನಿರ್ಬಂಧಿತವಾಗಿದೆ. ಬೆಲೆಗಳು ಕಡಿಮೆ ಇವೆ. ಲಾಗುವಾಡುಗಳಿಗೆ ಇನ್ನೂ ಸಹಾಯಧನ ನೀಡಲಾಗುತ್ತಿದೆ.
- ಉದ್ದಿಮೆಗಳ ಪುನರ್ರಚನೆಯಾಗದೆ ಅವುಗಳ ಸ್ಪರ್ಧಾತ್ಮಕತೆ ಕಡಿಮೆಯೇ ಇದೆ.
- ಸಾರ್ವಜನಿಕ ವಲಯಕ್ಕೆ ಸ್ವಾಯತ್ತತೆಯ ಭರವಸೆ ಹಾಗೆಯೇ ಉಳಿದಿದೆ.
- ಹೂಡಿಕೆ ದರ ಕಡಿಮೆಯಾಗಿದೆ (ಹೆಚ್ಚಾಗಬೇಕಿತ್ತು)
- ಹಣಕಾಸು ವಲಯದ ಉದಾರೀಕರಣ ಅಷ್ಟಕ್ಕೇ ನಿಂತಿದೆ(ಮುಖ್ಯವಾಗಿ ವಿಮಾ ವಲಯವನ್ನು ತೆರೆಯಲಾಗಿಲ್ಲ)
- ವಿದ್ಯುತ್ ವಲಯ ದಿವಾಳಿಯೆದ್ದು ಹೋಗಿದೆ
- ನಾಲ್ಕೇ ಮೂಲಭೂತ ಟೆಲಿಕಾಮ್ ಸೇವೆಗಳನ್ನು ನೀಡಲು ಸಾಧ್ಯವಾಗಿದೆ.

ರಫ್ತೆಂಬ ಹೆಸರಿನ ಕರ್ಮಕಾಂಡ

ರಫ್ತಿನ ಹೆಸರಿನಲ್ಲಿ ದೇಶದ ಬಂಡವಾಳಿಗರು ಕೊಳ್ಳೆ ಹೊಡೆಯುತ್ತಿರುವ ಪ್ರಮಾಣ ಎಂತಹದ್ದೆಂದು ಗೊತ್ತೇ?

ಪಬ್ಲಿಕ್ ಎಕೌಂಟ್ಸ್ ಕಮಿಟಿ(ಪಿಎಸಿ)ಯ ಪ್ರಕಾರ ಸರ್ಕಾರೀ ಖಜಾನೆಗೆ ಇದರಿಂದ 3800 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ರಫ್ತಿಗಾಗಿ ಇರುವ ಪ್ರೋತ್ಸಾಹಧನಗಳ ಮೇಲುಸ್ತುವಾರಿ ಪದ್ಧತಿ ಪೂರ್ತಿಯಾಗಿ ಕುಸಿದು ಬಿದ್ದಿದೆ ಎಂದಿದೆ ಅದು.

ರಫ್ತುದಾರರಿಂದ ವಸೂಲಿ ಮಾಡಬೇಕಾದ ಆಮದು ಸುಂಕ 5900 ಕೋಟಿ ರೂಪಾಯಿಗಳಾದರೆ ರಫ್ತುಗುರಿಯನ್ನು ಮುಟ್ಟದೇ ಇರುವ ಮೊತ್ತ ರೂ. 32,805 ಕೋಟಿ ರೂಪಾಯಿಗಳಷ್ಟು.

ಆದ್ದರಿಂದ ಸಮಿತಿ ಇಂತಹ ಪ್ರೋತ್ಸಾಹಧನವನ್ನು ರಫ್ತಿನ ನಂತರವೇ ಕೊಡುವ ಯೋಜನೆಗಳನ್ನು ಹಮ್ಮಿಕೊಳ್ಳಬೇಕು ಮತ್ತು ರಫ್ತಿಗೆ ಮೊದಲೇ ನೀಡುವ ನೆರವನ್ನು ಹಿಂತೆಗೆದುಕೊಳ್ಳಬೇಕೆಂದಿದೆ.

ರಫ್ತು ಮಾಡುತ್ತೇವೆಂದು ಅನುಕೂಲ ಪಡೆದು ಅನಂತರ ರಫ್ತನ್ನೇ ಮಾಡದಿರುವವರ ಸಂಖ್ಯೆ ದೊಡ್ಡದು ಎಂದು ಆತಂಕ ವ್ಯಕ್ತ ಪಡಿಸಿರುವ ಇದರ ಉಸ್ತುವಾರಿ ಪದ್ಧತಿಯ ದೌರ್ಬಲ್ಯಗಳ ಬಗೆಗೂ ಹೇಳಿದೆ.

ಇದಲ್ಲದೆ ಈ ವಿಷಯದಲ್ಲಿ ಲೈಸೆನ್ಸ್ ನೀಡಿದ ಮತ್ತು ಇತರ ವಿಷಯಗಳ ಬಗೆಗಿನ ಅಂಕಿ ಸಂಖ್ಯೆಗಳ ಸತ್ಯಾಸತ್ಯತೆಯ ಬಗ್ಗೆಯೇ ತನ್ನ ಸಂದೇಹವನ್ನು ಅದು ವ್ಯಕ್ತಪಡಿಸಿದೆ. ಈ ಬಗ್ಗೆ ಕೇಂದ್ರ ಹಣಕಾಸು ಸಮಿತಿ ನಿಗಾ ವಹಿಸಬೇಕೆಂದು ಅದು ಹೇಳಿದೆ.

ಭೋಪಾಲ್ ಅನಿಲ ದುರಂತದ 13ನೇ ವಾರ್ಷಿಕ

"ಮರೆವಿನ ವಿರುದ್ಧ ಸ್ಮರಣೆಯ ಸಮರ"

13 ವರ್ಷಗಳ ಹಿಂದೆ ಡಿಸೆಂಬರ್ 2-3, 1989 ರಂದು ಇಡೀ ದೇಶವನ್ನು ತಲ್ಲಣಗೊಳಿಸಿದ ಭೋಪಾಲ್ ಅನಿಲ ದುರಂತವನ್ನು ನಮ್ಮ ಸರಕಾರಗಳು ಮರೆತೇಬಿಟ್ಟಂತಿದೆ. ಆದರೆ ಈ ದುರಂತವನ್ನು ಎದುರಿಸಬೇಕಾದವರ ಕಷ್ಟ-ಕಾರ್ಪಣ್ಯಗಳು ಇನ್ನು ನಿವಾರಣೆಗೊಂಡಿಲ್ಲ. ಅದರಿಂದಾಗಿ ಅವರ ಹೋರಾಟವೂ ನಿಂತಿಲ್ಲ.

ಮಧ್ಯಪ್ರದೇಶ ಸರಕಾರ ಆರು ತಿಂಗಳ ಹಿಂದೆಯೇ ಅನಿಲ ಪರಿಹಾರ ಇಲಾಖೆಯನ್ನು ಮುಚ್ಚಿದೆಯೆಂದು ತಿಳಿದುಬಂದಿದೆ. ಕೇಂದ್ರವೂ ತನ್ನ ಹಣನೀಡಿಕೆಯಲ್ಲಿ 20ಶೇ. ಕಡಿತ ಮಾಡಿದೆ. ಸರಕಾರೀ ಆಸ್ಪತ್ರೆಗಳಲ್ಲಿ ಅನಿಲ ಪೀಡಿತರಿಗೆ ಬೇಕಾದ ವಿಶೇಷ ಔಷಧಿಗಳು ಕಳೆದ ಆರು ತಿಂಗಳಿಂದ ಸಿಗುತ್ತಲೇ ಇಲ್ಲ. ವೈದ್ಯಕೀಯ ಉಪಕರಣಗಳು ಹಾಳುಸುರಿಯುತ್ತಿವೆ. ಇನ್ನೂ ಅಸಹ್ಯಕರಸಂಗತಿಯೆಂದರೆ ಅನಿಲ ದುರಂತದ ದೀರ್ಘ ಕಾಯಿಲೆಗಳಿಗೆ ತುತ್ತಾಗಿರುವವರ ದೀರ್ಘಾವಧಿಯ ಶುಶ್ರೂಷೆಯ ಜವಾಬ್ದಾರಿಯಿಂದ ಸರಕಾರ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಈ ಜವಾಬ್ದಾರಿಯನ್ನು ಈ ಅನಿಲ ದುರಂತಕ್ಕೆ ಕಾರಣವಾದ ಯೂನಿಯನ್ ಕಾರ್ಬೈಡ್ ಕಂಪನಿಗೇ ವಹಿಸಿಕೊಡುವ ಯೋಚನೆಯಲ್ಲಿ ಸರಕಾರವಿದೆ. ಯೂನಿಯನ್ ಕಾರ್ಬೈಡ್ ಕಂಪನಿ ರಚಿಸಿದ ಭೋಪಾಲ್ ಹಾಸ್ಪಿಟಲ್ ಟ್ರಸ್ಟ್‌ಗೆ ಈ ಶುಶ್ರೂಷೆಯ ಜವಾಬ್ದಾರಿ ವಹಿಸಲಾಗಿದೆ. ಇನ್ನೂ ಆತಂಕಕಾರಿ ಸಂಗತಿಯೆಂದರೆ ಈ ಟ್ರಸ್ಟಿನ ಉಸ್ತುವಾರಿಯನ್ನು ಸರ್ ಇಯಾನ್ ಪರ್ಸಿವಲ್ ಎಂಬ ಬ್ರಿಟಿಶ್ ವಕೀಲನಿಗೆ ವಹಿಸಲಾಗಿದೆ.



ಯೂನಿಯನ್ ಕಾರ್ಬೈಡ್‌ನ ಶೇರುಗಳನ್ನು ನ್ಯಾಯಾಂಗ ಆದೇಶದ ಪ್ರಕಾರ ಮುಟ್ಟುಗೋಲು ಹಾಕಿ ಕೊಂಡು ಈ ಟ್ರಸ್ಟನ್ನು ರಚಿಸಲಾಗಿತ್ತು. ಆ ಕಂಪನಿ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳದಿರಲಿ ಎಂದು. ಈ ಕಂಪನಿಯ ವಿರುದ್ಧ ಕ್ರಿಮಿನಲ್ ಆಪಾದನೆಯಲ್ಲಿ ಕಂಪನಿಯ ಪರವಾಗಿ ವಾದಿಸಿದ್ದ ವಕೀಲ ಈತ. ಕಂಪನಿಯ ಮೇಲಿನ ಕ್ರಿಮಿನಲ್ ಕೇಸುಗಳನ್ನು ಹಿಂತೆಗೆದುಕೊಂಡರೆ ಈ ಶೇರುಗಳ ಮೌಲ್ಯ ಏರಿ ಅನಿಲ ಪೀಡಿತರ ಶುಶ್ರೂಷೆಗೆ ಹೆಚ್ಚಿನ ಹಣ ದೊರೆಯುತ್ತದೆ ಎಂದು ವಾದಿಸಿ ಆ ಶೇರುಗಳ ಮುಟ್ಟುಗೋಲನ್ನು ತೆರವು ಮಾಡಿಸಿದಾತ ಈ ಇಯಾನ್ ಪೆರ್ಸಿವಾಲ್

ಅತ್ತ ಕಾರ್ಬೈಡ್ ಕಂಪನಿ ಈ ಟ್ರಸ್ಟಿನಿಂದ ನಿರ್ಮಾಣವಾಗುತ್ತಿರುವ 260 ಹಾಸಿಗೆಗಳ ಆಸ್ಪತ್ರೆ ತನ್ನ ಮಾನವೀಯ ಪ್ರಜ್ಞೆಯ ಪ್ರತೀಕವೆಂಬಂತೆ ಪ್ರಚಾರ ಮಾಡುತ್ತಿದೆ. ಇದುವರೆಗೆ ಕಳೆದ ಎರಡು ವರ್ಷಗಳಲ್ಲಿ ಖರ್ಚು ಮಾಡಿರುವ 7 ಕೋಟಿ ರೂ. ಗಳಲ್ಲಿ 5 ಕೋಟಿ ರೂ. ಈ ವಕೀಲನಿಗೆ ಶುಲ್ಕ, ಪ್ರವಾಸ ಭತ್ಯೆ ಇತ್ಯಾದಿಗಳಿಗೆ ಹೋಗಿದೆ ಎನ್ನುತ್ತಾರೆ 'ಭೋಪಾಲ್ ಗ್ಯಾಸ್ ಪೀಡಿತ್ ಮಹಿಳಾ ಉದ್ಯೋಗ್ ಸಂಘಟನಾ'ದ ಸಂಚಾಲಕ ಅಬ್ದುಲ್ ಜಬ್ಬಾರ್. ಈ ವಕೀಲ ಆಸ್ಪತ್ರೆ ಆಡಳಿತದ ಬಗ್ಗೆ ಮಾಡಿರುವ ಯೋಜನೆಗಳನ್ನು 11 'ದೇಶಗಳ 15 ವಿಶೇಷಜ್ಞರ ಗುಂಪೊಂದು ತೀವ್ರವಾಗಿ ಟೀಕಿಸಿದೆ'

ಈ ನಡುವೆ ಯೂನಿಯನ್ ಕಾರ್ಬೈಡ್‌ನ ಅಮೆರಿಕನ್ ಸಂಸ್ಥೆಯ ಅಧ್ಯಕ್ಷ ವಾರನ್ ಆಂಡರ್ಸನ್ ಮೇಲೆ ಕ್ರಮ ಕೈಗೊಳ್ಳುವಲ್ಲಿ ಹಿಂದೇಟು ಹಾಕುತ್ತಲೇ ಇದೆ. ಸಿಬಿಐ ಕೂಡಾ ಕಾಲೆಳೆಯುತ್ತಿದೆ.

ಈ ದುರಂತದ 13 ವರ್ಷಗಳ ನಂತರ ಪ್ರತಿತಿಂಗಳು 10-15 ಮಂದಿ ಈ ದುರಂತಕ್ಕೆ ಸಂಬಂಧಪಟ್ಟ ಕಾಯಿಲೆಗಳಿಂದ ಸಾಯುತ್ತಿದ್ದಾರೆ. 1 ಲಕ್ಷ 50 ಸಾವಿರ ಮಂದಿ ದೇಹದ ಪ್ರತಿಯೊಂದು ಅಂಗಕ್ಕೂ ಆಗಿರುವ ಗಾಯಗಳಿಂದ ಈಗಲೂ ನರಳುತ್ತಿದ್ದಾರೆ. ಆದರೆ ಮಧ್ಯಪ್ರದೇಶ ಸರಕಾರ 1992 ರಿಂದಲೇ ಇಂತಹ ಸಾವುಗಳ, ನೋವುಗಳ ದಾಖಲೆಯಿಡುವ ಕೆಲಸವನ್ನೇ ನಿಲ್ಲಿಸಿಬಿಟ್ಟಿದೆ. ಇದರಿಂದ ಅನಿಲ ಪೀಡಿತರ ಆರೋಗ್ಯ - ಶುಶ್ರೂಷೆಯ ಬಗ್ಗೆ ಈಗ ಅಧಿಕೃತ ದಾಖಲೆಗಳೇ ಇಲ್ಲದಂತಾಗಿದೆ.

ಈ ದುರಂತವನ್ನೆದುರಿಸಿ ಹೇಗೋ ಬದುಕುಳಿದವರಲ್ಲಿ 80ಶೇ. ಕ್ಕೂ ಹೆಚ್ಚುಮಂದಿ ಕೂಲಿ-ನಾಲಿ ಮಾಡಿ ಬದುಕುವವರು. ಬದುಕು ಸಾಗಿಸಲು ಅವರು ತಮ್ಮ ಕೆಲಸಗಳನ್ನು ಮುಂದುವರಿಸಲೇ ಬೇಕಾಗಿದೆ. ಅದು ಅವರ ಆರೋಗ್ಯವನ್ನು ಇನ್ನಷ್ಟು ಹದಗೆಡಿಸುತ್ತಿದೆ. ಇವರ ಬದುಕಿನ ಪರಿಸರದಲ್ಲಿ ಏನೇನೂ ಬದಲಾವಣೆಯಾಗಿಲ್ಲ. ಹಿಂದಿನಂತೆಯೇ

ಪುಟ 6 ನೋಡಿ

ದೇಶದೊಳಗೆ



\- ವಿಶ್ವ

ಹತ್ಯಾಕಾಂಡ ವಿರೋಧಿಸಿ ಬಿಹಾರ ಬಂದ್

ಜೆಹಾನಾಬಾದ್ ಜಿಲ್ಲೆಯ ಲಕ್ಷ್ಮಣಪುರ ಬಾಥೆಯಲ್ಲಿ ಭೂಮಾಲೀಕರ ಗೂಂಡಾಗಳು ನಡೆಸಿದ ನರಮೇಧವನ್ನು ಪ್ರತಿಭಟಿಸಿ ಡಿಸೆಂಬರ್ ಐದರಂದು ಬಿಹಾರ ಬಂದ್ ಆಚರಿಸಲಾಯಿತು.

ಪಾಳೇಗಾರಿ ವ್ಯವಸ್ಥೆ ಇನ್ನೂ ಪ್ರಬಲವಾಗಿರುವ ಬಿಹಾರದಲ್ಲಿ ಭೂಮಾಲಕರು ತಮ್ಮ ಖಾಸಗಿ ಸೇನೆಗಳನ್ನೇ ರಚಿಸಿ ಕೊಂಡಿದ್ದಾರೆ. ರಣವೀರ ಸೇನೆ ಅಂಥವುಗಳಲ್ಲಿ ಒಂದು. ಆದರ ದುಷ್ಕರ್ಮಿಗಳು ಡಿಸೆಂಬರ್ ಒಂದರಂದು ಲಕ್ಷ್ಮಣಪುರ ಬಾಥೆ ಗ್ರಾಮಕ್ಕೆ ನುಗ್ಗಿ ಮಕ್ಕಳು, ಮಹಿಳೆಯರು ಎನ್ನದೆ 61 ಜನರ ನರಮೇಧ ನಡೆಸಿದ್ದರು.

ಈ ಘೋರ ಕೃತ್ಯಕ್ಕೆ ಬಿಹಾರ ಮಾತ್ರವಲ್ಲದೆ ಇಡೀ ದೇಶದಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ಹತ್ಯಾಕಾಂಡವನ್ನು ಪ್ರತಿಭಟಿಸಿ - ಹಂತಕರನ್ನು ಬಂಧಿಸುವಂತೆ ಆಗ್ರಹಿಸಲು ಪ್ರತಿಪಕ್ಷಗಳು ಬಂದ್‌ಗೆ ಕರೆ ಕೊಟ್ಟಿದ್ದವು.

ಜನತಾದಳ, ಸಿಪಿಐ, ಸಿಪಿಐ(ಎಂ) ಸಿಪಿಐ (ಎಂಎಲ್), ಆರ್.ಎಸ್.ಪಿ., ಫಾರ್ವರ್ಡ್ ಬ್ಲಾಕ್, ಸಮಾಜವಾದಿ ಪಕ್ಷ ಮುಂತಾದ ಪಕ್ಷಗಳ ಕರೆಯ ಮೇರೆಗೆ ಬಿಹಾರ ಬಂದ್ ಯಶಸ್ವಿಯಾಗಿ ನಡೆಯಿತು. ನರಮೇಧವನ್ನು ತಪ್ಪಿಸಲು ವಿಫಲರಾದ ಆರ್‌ಜೆಡಿ ಸರಕಾರದ ಮುಖ್ಯಮಂತ್ರಿ ರಾಬ್ಡಿದೇವಿ ರಾಜಿನಾಮೆ ನೀಡುವಂತೆ ಈ ಪಕ್ಷಗಳು ಆಗ್ರಹಿಸಿದ್ದವು.

ಬಂದ್‌ನಿಂದಾಗಿ ರಾಜ್ಯದಲ್ಲಿ ದೂರ ಪ್ರಯಾಣದ ಬಸ್‌ಗಳು ಹಾಗೂ ರೈಲ್ವೆ ಸಂಚಾರ ಪೂರ್ಣ ಸ್ಥಗಿತಗೊಂಡಿತ್ತು. ರಾಜಧಾನಿ ಪಾಟ್ನಾದಲ್ಲೂ ವಾಹನಗಳ ಸಂಚಾರ ಅಷ್ಟೇನೂ ಇರಲಿಲ್ಲ. ಬ್ಯಾಂಕ್, ವಿಮೆ ಕಚೇರಿಗಳಲ್ಲಿ ಕೂಡ ವ್ಯವಹಾರ ಹೆಚ್ಚಾಗಿ ನಡೆಯಲಿಲ್ಲ. ಹೋಟೇಲುಗಳು, ಚಿತ್ರಮಂದಿರಗಳು ಮುಚ್ಚಿದ್ದವು.

ಸಿಪಿಐ(ಎಂ) ಭೇಟಿ

ಮೆಹಾದಿಯಾ ಪೋಲಿಸ್ ಠಾಣೆ ಹತ್ಯಾಕಾಂಡ ನಡೆದ ಸ್ಥಳದಿಂದ ಕೇವಲ 4.ಕಿ.ಮಿ. ದೂರದಲ್ಲಿದ್ದರೂ ಘೋರ ಪ್ರಕರಣದ 14 ಗಂಟೆಗಳ ನಂತರ ಪೋಲೀಸರು ಸ್ಥಳವನ್ನು ತಲುಪಿದ್ದಾರೆ.

ನರಮೇಧ ನಡೆದ ಗ್ರಾಮಕ್ಕೆ ಭೇಟಿ ನೀಡಿದ ಸಿಪಿಐ(ಎಂ) ಬಿಹಾರ ರಾಜ್ಯ ಸಮಿತಿ ಕಾರ್ಯದರ್ಶಿ ಕಾಮ್ರೇಡ್ ಗಣೇಶ ಶಂಕರ್ ವಿದ್ಯಾರ್ಥಿ ತಯಾರಿಸಿದ ವರದಿಯಲ್ಲಿ ಈ ಅಂಶವನ್ನು ಉಲ್ಲೇಖಿಸಲಾಗಿದೆ.

ಡಿಸೆಂಬರ್ 2 ರಂದು ಕಾಂ|| ವಿದ್ಯಾರ್ಥಿ 61 ಜನರು ಮೃತಪಟ್ಟ ಮನೆಗಳಿಗೆ ಭೇಟಿ ನೀಡಿದ್ದರು.

ಲಕ್ಷ್ಮಣ್‌ಪುರ ಬಾಥೆ ಗ್ರಾಮದಿಂದ ಐದು ಕಿ.ಮಿ. ದೂರವಿರುವ ಗ್ರಾಮಸ್ಥರು ಕೂಡ ಡಿಸೆಂಬರ್ ಒಂದರ ಗುಂಡಿನ ಸದ್ದನ್ನು ಸ್ಪಷ್ಟವಾಗಿ ಕೇಳಿದ್ದಾರೆ. (ಆ ದಿನ ರಾತ್ರಿ 9 ರಿಂದ ರಾತ್ರಿ 11 ವರೆಗೆ ರಣವೀರ ಸೇನೆಯವರು ಅವ್ಯಾಹತವಾಗಿ ಗುಂಡು ಹಾರಿಸಿದ್ದರು) ಆದರೆ ಪೋಲೀಸರು ತಮಗೆ ಏನೂ ಗೊತ್ತಾಗಲಿಲ್ಲ ಎಂದು ನಟಿಸುತ್ತಿದ್ದಾರೆ ಎಂದು ಕಾಂ|| ವಿದ್ಯಾರ್ಥಿ ತಮ್ಮ ವರದಿಯಲ್ಲಿ ಹೇಳಿದ್ದಾರೆ.

ಡಿಸೆಂಬರ್ ಒಂದರ ರಾತ್ರಿ ನಡೆದ ಘೋರ ಹತ್ಯಾಕಾಂಡದ ಬಗ್ಗೆ ಪೋಲೀಸರಿಗೆ ಮರುದಿನ ಬೆಳಿಗ್ಗೆ ಒಂಭತ್ತು ಗಂಟೆಗೆ ಗ್ರಾಮಸ್ಥರಿಂದ ಮಾಹಿತಿ ಸಿಕ್ಕಿತು. ಅಷ್ಟರೊಳಗೆ ಪಾಟ್ನಾದಲ್ಲಿದ್ದ ನಮಗೆ ಕೂಡ ವಿಷಯ ಗೊತ್ತಾಯಿತು. ಉನ್ನತ ಪೋಲೀಸ್ ಅಧಿಕಾರಿಗಳು ಮತ್ತು ಕೇಂದ್ರದ ಬೇಹುಗಾರಿಕೆ ಅಧಿಕಾರಿಗಳನ್ನು ನಾವು ವಿಚಾರಿಸಿದೆವು. ಆದರೆ ಘಟನೆ ಬಗ್ಗೆ ಏನನ್ನೂ ಹೇಳುವ ಸ್ಥಿತಿಯಲ್ಲಿ ಅವರಿರಲಿಲ್ಲ ಎಂದು ವಿದ್ಯಾರ್ಥಿ ತಿಳಿಸಿದ್ದಾರೆ.

ಭೂಮಾಲಕರ ಸೇನೆ ನಡೆಸಿದ ಹತ್ಯಾಕಾಂಡಕ್ಕೆ ಹಿನ್ನೆಲೆಯಾದ ಭೂ ವಿವಾದದ ಬಗ್ಗೆ ಕಾಂ|| ವಿದ್ಯಾರ್ಥಿ ತಮ್ಮ ವರದಿಯಲ್ಲಿ ವಿವರವಾದ ಮಾಹಿತಿಯನ್ನು ನೀಡಿದ್ದಾರೆ.

ಇನ್ನೂ ಐವರ ಹತ್ಯೆ

ರಣವೀರ ಸೇನೆಯವರು ಲಕ್ಷ್ಮಣ ಪುರ ಬಾಥೆಯಲ್ಲಿ 61 ಜನರ ಹತ್ಯಾಕಾಂಡ ನಡೆಸಿರುವರಾದರೂ ವಾಸ್ತವವಾಗಿ ಅದಕ್ಕೆ ಇನ್ನೂ ಐವರನ್ನು ಸೇರಿಸಿಕೊಳ್ಳಬೇಕಾಗುತ್ತದೆ. ಯಾಕೆಂದರೆ ಆ ಗ್ರಾಮಕ್ಕೆ ಬರಲು ಸೋನೆ ನದಿಯಲ್ಲಿ ಗೂಂಡಾಗಳು ದೋಣಿಯಲ್ಲಿ ಬರುತ್ತಿದ್ದಾಗ ಅವರನ್ನು ಐವರು ಮೀನುಗಾರರು ಗಮನಿಸಿದ್ದರು. ಅವರು ಕೂಗಿ ಜನರನ್ನು ಎಚ್ಚರಗೊಳಿಸಬಹುದೆಂದು ಮನಗಂಡು ಗೂಂಡಾಗಳು ಈ ಐದೂ ಜನರ ಕುತ್ತಿಗೆ ಕುಯ್ದು ಸಾಯಿಸಿಬಿಟ್ಟರು. ಸಿಪಿಐ(ಎಂ) ಮುಖಂಡರ ವರದಿಯಿಂದ ಈ ಅಂಶ ಬೆಳಕಿಗೆ ಬಂದಿದೆ.

ಈ ಘೋರ ನರಮೇಧದಲ್ಲಿ ಸತ್ತ 61 ಜನರಲ್ಲಿ 27 ಮಹಿಳೆಯರು ಮತ್ತು 16 ಮಕ್ಕಳು ಇದ್ದಾರೆ.

ಪರಿಸ್ಥಿತಿಯನ್ನು ನಿಯಂತ್ರಿಸಲು ಹಾಗೂ ಸಹಜ ಸ್ಥಿತಿಯನ್ನು ಮರಳಿ ಸ್ಥಾಪಿಸಲು ರಾಬ್ಡಿ ದೇವಿ ಸರಕಾರ ಪೂರ್ಣ ವಿಫಲವಾಗಿದೆ. ಉಗ್ರಗಾಮಿಗಳು ಮತ್ತು ರಣವೀರ ಸೇನೆಯು ನಡೆಸಿದ ಹಿಂಸಾಚಾರದಲ್ಲಿ 1997 ರಲ್ಲಿ 168 ಜನರು ಮೃತಪಟ್ಟಿದ್ದಾರೆ.

ಬಿಜೆಪಿ ನಾಯಕತ್ವ

ಹೀಗಾಗಿ, ಅಧಿಕಾರದಲ್ಲಿ ಮುಂದುವರಿಯಲು ಆರ್‌ಜೆಡಿ ಸರಕಾರಕ್ಕೆ ನೈತಿಕ ಹಕ್ಕಿಲ್ಲ ಎಂದಿರುವ ವಿದ್ಯಾರ್ಥಿ ಉಗ್ರಗಾಮಿ ಗುಂಪುಗಳಿಗೆ ಆಶ್ರಯ - ಬೆಂಬಲ ನೀಡದವರು ರಾಜ್ಯ ಸರಕಾರದಲ್ಲಿ ಆಳುವ ಪಕ್ಷದಲ್ಲೂ ಇದ್ದಾರೆ ಎಂದಿದ್ದಾರೆ. ಈ ನರಮೇಧಕ್ಕೆ ಬಿಜೆಪಿ ಕೂಡ ಹೊಣೆ ಎಂದು ಅವರು ಹೇಳಿದ್ದಾರೆ. ಯಾಕೆಂದರೆ ರಣವೀರ ಸೇನೆಯನ್ನು ಬಿಜೆಪಿ ಬೆಂಬಲಿಸುತ್ತಿರುವುದು ಮಾತ್ರವಲ್ಲದೆ ಸೇನೆಯ ಒಂದು ವಿಭಾಗಕ್ಕೆ ಅದು ನಾಯಕತ್ವವನ್ನು ನೀಡುತ್ತಿದೆ ಎಂಬ ಅಂಶವನ್ನು ಅವರು ಬಯಲಿಗೆಳೆದಿದ್ದಾರೆ.

ಕಂದಾಯ ನ್ಯಾಯಾಲಯ ಸ್ಥಾಪನೆಗೆ ಸಲಹೆ

ಭೂರಹಿತರು ಹಾಗೂ ಬಡರೈತರ ಭೂ ವಿವಾದಗಳನ್ನು ಇತ್ಯರ್ಥ ಪಡಿಸಲು ಕಂದಾಯ ನ್ಯಾಯಾಲಯವೊಂದನ್ನು ತಕ್ಷಣ ಸ್ಥಾಪಿಸು ವಂತೆ ಸಿಪಿಐ(ಎಂ) ಬಿಹಾರ ರಾಜ್ಯ ಸಮಿತಿ ರಾಜ್ಯ ಸರಕಾರವನ್ನು ಒತ್ತಾಯಿಸಿದೆ.

ಗೈರಮಜರುವಾ (ಅಂದರೆ ಯಾರೂ ಮಾಲಿಕತ್ವ ಹೊಂದಿರದ ಜಮೀನು) ಭೂದಾನ ಮತ್ತು ಪರಿಮಿತಿಗಿಂತ ಹೆಚ್ಚಿನ ಜಮೀನಿಗಾಗಿ ಎಡ ಪಕ್ಷಗಳು ಹೋರಾಟವನ್ನು ತೀಕ್ಷ್ಣಗೊಳಿಸಬೇಕು. ಭೂ ರಹಿತರು ಹಾಗೂ ಬಡ ರೈತರನ್ನು ಸಂಘಟಿಸಬೇಕು ಎಂದು ಅದು ಹೇಳಿದ. ತಮ್ಮ ತಮ್ಮ ನಡುವೆ ಹಾಗೂ ರಣವೀರ ಸೇನೆಯ ಮೇಲೆ ಮೇಲುಗೈ ಸಾಧಿಸುವುದಷ್ಟೇ ಮುಖ್ಯ ಗುರಿಯಾಗಿಟ್ಟು ಕೊಂಡಿರುವ ಉಗ್ರಗಾಮಿ ಶಕ್ತಿಗಳನ್ನು ಈ ಮೂಲಕ ಪ್ರತ್ಯೇಕಗೊಳಿಸಬೇಕು ಎಂದು ಸಿಪಿಐ(ಎಂ) ಪ್ರತಿಪಾದಿಸಿದೆ.

ಕಿಸಾನ್ ಸಭಾ ಆಘಾತ

ಲಕ್ಷ್ಮಣಪುರ ಬಾಥೆ ಹತ್ಯಾಕಾಂಡಕ್ಕೆ ಅಖಿಲ ಭಾರತ ಕಿಸಾನ್ ಸಭಾ ತೀವ್ರ ಆಘಾತ ವ್ಯಕ್ತಪಡಿಸಿ ಅದನ್ನು ಕಟುವಾಗಿ ಖಂಡಿಸಿದೆ.

ಬಿಹಾರದಲ್ಲಿ ಬಡ ರೈತರು ಮತ್ತು ಕೃಷಿ ಕೂಲಿಗಾರರ ಮೇಲೆ ಈಚೆಗೆ ಭೂಮಾಲಕ ಗೂಂಡಾಗಳು ತಮ್ಮ ಆಕ್ರಮಣಗಳನ್ನು ಹೆಚ್ಚಿಸಿದ್ದಾರೆ. ಭೂಮಾಲಕರ ಕ್ರಿಮಿನಲ್ ಗ್ಯಾಂಗ್‌ಗಳನ್ನು ನಿಯಂತ್ರಿಸಲು ಸರಕಾರ ಯಾವುದೇ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ ಎಂದು ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಕಾಂ|| ಎಸ್.ರಾಮಚಂದ್ರನ್ ಪಿಳ್ಳೆ ಹೇಳಿದ್ದಾರೆ.

ಹರ್ಯಾಣ ರೈತರ ಚಳುವಳಿ : ಒಬ್ಬನ ಸಾವು

ಹರ್ಯಾಣದಲ್ಲಿ ಕಳೆದ ಎರಡು ವರ್ಷಗಳಿಂದ ನಡೆಯುತ್ತಿರುವ ರೈತರ ಚಳುವಳಿಯಲ್ಲಿ ಇನ್ನೊಬ್ಬ ರೈತನ ಬಲಿದಾನ ಆಗಿದೆ.

ಭಿವಾನಿ ಸಮೀಪದ ಲೋಹಾರು ಎಂಬಲ್ಲಿ ಡಿಸೆಂಬರ್ 8 ರಂದು ರೈತರು ರ್‍ಯಾಲಿಯೊಂದನ್ನು ನಡೆಸಲು ಯತ್ನಿಸಿದಾಗ ಅದನ್ನು ತಡೆಯಲು ಪೋಲೀಸರು ಮುಂದಾದರು. ಆಗ ಸಂಭವಿಸಿದ ಗೊಂದಲ - ಕಾಲ್ತುಳಿತದಲ್ಲಿ ಒಬ್ಬ ರೈತ ಮೃತಪಟ್ಟ.

ಮುಖ್ಯಮಂತ್ರಿ ಬನ್ಸಿಲಾಲರ ರ್‍ಯಾಲಿಯೊಂದಕ್ಕೆ ಪರ್ಯಾಯವಾಗಿ ಈ ರ್‍ಯಾಲಿಯನ್ನು ನಡೆಸಲು ಕಿಸಾನ್ ಸಂಘರ್ಷ ಸಮಿತಿ ಆಲೋಚಿಸಿತ್ತು. ಮುಖ್ಯಮಂತ್ರಿ ರ್‍ಯಾಲಿಗೆ ಅಡ್ಡಿಪಡಿಸದೇ ರ್‍ಯಾಲಿ ನಡೆಸುವುದು ಅದರ ಉದ್ದೇಶವಾಗಿತ್ತು.

ಆದರೆ ಪ್ರದರ್ಶನಕಾರ ರೈತರನ್ನು ಚದುರಿಸಲು ಪೋಲೀಸರು ವಿನಾಕಾರಣ, ಯಾವುದೇ ಪ್ರಚೋದನೆ ಇಲ್ಲದೆ, ಲಾಠಿ ಪ್ರಹಾರ ಆರಂಭಿಸಿದರು. ಆಗ ಗೊಂದಲ ಉಂಟಾಯಿತು. ಆ ವೇಳೆ ಅಮರಚಂದ ಎಂಬ ರೈತ ಟ್ರಾಕ್ಟರ್ ಟ್ರಾಲಿಯಿಂದ ಬಿದ್ದು ಮೃತಪಟ್ಟರು.

ಕೆಟ್ಟು ಹೋಗಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸುವಂತೆ ಒತ್ತಾಯಿಸಿ ರೈತರು ಕಳೆದ ಸುಮಾರು ಎರಡು ವರ್ಷಗಳಿಂದ ಚಳುವಳಿ ನಡೆಸುತ್ತಿದ್ದಾರೆ. ಕೃಷಿ ಕಾರ್ಯಗಳಿಗೆ ತಕ್ಷಣ ವಿದ್ಯುತ್ ಸರಬರಾಜು ಮಾಡಬೇಕೆಂಬುದು ರೈತರ ಒಕ್ಕೂರಲಿನ ಪ್ರಮುಖ ಬೇಡಿಕೆಯಾಗಿದೆ.

ಆದರೆ ಹಠಮಾರಿ ಧೋರಣೆ ತಳೆದಿರುವ ಬನ್ಸಿಲಾಲ್ ನೇತೃತ್ವದ ಹರ್ಯಾಣ ವಿಕಾಸಪಕ್ಷ - ಬಿಜೆಪಿ ಸರಕಾರ ರೈತರ ಮೇಲೆ ದೌರ್ಜನ್ಯ ನಡೆಸುತ್ತಿದೆ. ಅವರ ಆಂದೋಲನ ವನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದೆ.

ರಾಜಸ್ಥಾನದಲ್ಲಿ ಬಸ್ ಪ್ರಯಾಣ ದರ ಏರಿಕೆ

ರಾಜಸ್ಥಾನದ ಭಾರತೀಯ ಜನತಾ ಪಕ್ಷದ ಸರಕಾರ ರಾಜ್ಯ ಸರಕಾರಿ ಬಸ್‌ಗಳ ಪ್ರಯಾಣದರವನ್ನು ಶೇಕಡ 30 ರಷ್ಟು ಹೆಚ್ಚಿಸಿ ಜನರ ತಲೆ ಮೇಲೆ ಭಾರಿ ಹೊರೆಯನ್ನು ಹೇರಿದೆ. ಕೇವಲ ಒಂದು ವರ್ಷದ ಅವಧಿಯಲ್ಲಿ ಭಾರಿ ಪ್ರಮಾಣದಲ್ಲಿ ಬಸ್ ಪ್ರಯಾಣದರವನ್ನು ಏರಿಸಿರುವುದು ಇದು ಎರಡನೇ ಸಲವಾಗಿದೆ.

1996 ರ ನವೆಂಬರ್‌ನಲ್ಲಿ ಶೇಖಾವತ್ ಸರಕಾರ ಸರಕಾರಿ ಬಸ್‌ಗಳ ಪ್ರಯಾಣ ದರವನ್ನು ಶೇಕಡ 18 ರಷ್ಟು ದುಬಾರಿಗೊಳಿಸಿತ್ತು.

ಸಾರಿಗೆ ಕ್ಷೇತ್ರದಲ್ಲಿನ ನಷ್ಟವನ್ನು ಕಡಿಮೆ ಮಾಡಲು ಪ್ರಯಾಣದರ ಏರಿಸುವ ನಿರ್ಧಾರವನ್ನು ಕೈಗೊಂಡಿರುವುದಾಗಿ ಸರ್ಕಾರ ಹೇಳಿದೆ. ಡಿಸೆಂಬರ್ ಎರಡರ ಮಧ್ಯ ರಾತ್ರಿಯಿಂದಲೇ ಜಾರಿಗೆ ಬಂದಿರುವಂತೆ ನಗರ ಸಾರಿಗೆ ಬಸ್ ಪ್ರಯಾಣದರವನ್ನು ಏರಿಸಲಾಗಿದೆ.

ಪ್ರಯಾಣದರದಲ್ಲಿ ಸರಿಸುಮಾರು ಮೂರನೇ ಒಂದುಭಾಗದಷ್ಟು ಏರಿಕೆ ಮಾಡಿರುವುದು ಬಿಜೆಪಿ ಸರಕಾರದ ಜನ ವಿರೋಧಿ ಧೋರಣೆಗೆ ಹಿಡಿದ ಕನ್ನಡಿಯಾಗಿದೆ.

ರಾಜಸ್ಥಾನದಲ್ಲಿ ಅಧಿಕಾರಿಗೆ ಹೊಡೆದ ಮಂತ್ರಿ ರಾಜಿನಾಮೆ

ರಾಜಸ್ಥಾನದ ಬಿಜೆಪಿ ಸರಕಾರದ ನೀರಾವರಿ ಮಂತ್ರಿ ದೇವಿಸಿಂಗ್ ಭಾಟಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಅಧಿಕಾರಿಯೊಬ್ಬರಿಗೆ ಹೊಡೆದದ್ದರಿಂದ ಅದಕ್ಕೆ ಭಾರೀ ವಿರೋಧ ವ್ಯಕ್ತವಾಗುವ ಭೀತಿಯ ಹಿನ್ನೆಲೆಯಲ್ಲಿ ಭಾಟಿ ಮಂತ್ರಿ ಪದವಿಯಿಂದ ಕೆಳಗಿಳಿದಿದ್ದಾರೆ.

ನೀರಾವರಿ ಖಾತೆಯ ಕಾರ್ಯದರ್ಶಿ ಪಿ.ಕೆ.ದೇವ್ ಅವರನ್ನು ಸಮಾಲೋಚನೆಗಾಗಿ ತಮ್ಮ ಕೋಣೆಗೆ ಕರೆಸಿಕೊಂಡ ಮಂತ್ರಿ ದೇವಿಸಿಂಗ್ ಭಾಟಿ, ಚರ್ಚೆ ನಡೆಯುತ್ತಿದ್ದಾಗ ಸಿಟ್ಟಿಗೆದ್ದು ಅಧಿಕಾರಿಗೆ ಹೊಡೆದರು. ಈ ಬಗ್ಗೆ ದೇವ್ ಪೋಲೀಸರಿಗೆ ದೂರು ನೀಡಿದ್ದರು.

"ಮರೆವಿನ ವಿರುದ್ಧ ಸ್ಮರಣೆಯ ಸಮರ"

ಪುಟ 5 ರಿಂದ

ಕೊಳೆಗೇರಿಗಳಲ್ಲಿ ಸುರಕ್ಷಿತ ಕುಡಿಯುವ ನೀರು, ಗಾಳಿ, ಬೆಳಕುಗಳ ವ್ಯವಸ್ಥೆಯಿಲ್ಲದೆ ಬದುಕು ಸಾಗಿಸುತ್ತಿದ್ದಾರೆ ಎನ್ನುತ್ತಾರೆ ಅಬ್ದುಲ್ ಜಬ್ಬಾರ್. 12ಶೇ. ಪೀಡಿತರಿಗೆ ಸಿಕ್ಕಿರುವ ಪರಿಹಾರ 15000 ರೂ. ಅಥವಾ ಅದಕ್ಕೂ ಕಮ್ಮಿ. ಇದುವರೆಗೆ ಶುಶ್ರೂಷೆಗೆ ಮಾಡಿದ ಸಾಲ ತೀರಿಸಲೂ ಇದು ಸಾಲದು. 4 ಲಕ್ಷ ಅರ್ಜಿಗಳು ಇನ್ನೂ ಇತ್ಯರ್ಥವಾಗಿಲ್ಲ. ಸಾವು ಸಂಭವಿಸಿದ 11267 ಕೇಸುಗಳಲ್ಲಿ ಸರಾಸರಿ 67267 ರೂ. ಪರಿಹಾರ ನೀಡಲಾಗಿದೆ. 3891 ಕೇಸುಗಳನ್ನು ತಿರಸ್ಕರಿಸಲಾಗಿದೆ.

ಒಂದೆಡೆ ಯೂನಿಯನ್ ಕಾರ್ಬೈಡ್ ಕೊಟ್ಟಿರುವ ಅಲ್ಪ ಹಣದಿಂದ ಸರಿಯಾದ ಪರಿಹಾರ ಕೊಡಲು ಸಾಧ್ಯವಾಗುತ್ತಿಲ್ಲವಾದರೆ ಇನ್ನೊಂದೆಡೆ ದಾವೆ ಟ್ರಿಬ್ಯೂನಲ್‌ಗಳ ನ್ಯಾಯಾಧೀಶರಿಗೆ ಈ ದುರಂತದ ವ್ಯಾಪ್ತಿಯ ಸರಿಯಾದ ಜ್ಞಾನ ಇಲ್ಲದಿರುವುದರಿಂದ ಪೀಡಿತರಿಗೆ ನ್ಯಾಯ ದೊರಕುತ್ತಿಲ್ಲ ಎನ್ನುತ್ತಾರೆ ಅಬ್ದುಲ್ ಜಬ್ಬಾರ್. ಪರಿಹಾರವನ್ನು ನಿರಾಕರಿಸುತ್ತಿರುವುದು, ಎಲ್ಲಾ ಹಂತಗಳಲ್ಲಿ ಭ್ರಷ್ಟಾಚಾರ, ಪರಿಹಾರ ಪಡೆಯಲು ಪಡಬೇಕಾದ ಅಸಹನೀಯ ಕಷ್ಟಗಳು ಇವೆಲ್ಲದರಿಂದಾಗಿ ಪರಿಹಾರ ಕ್ರಮ ಎಂಬುದು ಪೀಡಿತರಿಗೊಂದು ದುಸ್ವಪ್ನದಂತಾಗಿದೆ.

ಸರಕಾರ ಕಳೆದ 12 ವರ್ಷಗಳಲ್ಲಿ ಅನಿಲ ಪೀಡಿತರಿಗೆ ಉದ್ಯೋಗ ಕಲ್ಪಿಸಲೆಂದು 60 ಕೋಟಿ ರೂ. ಖರ್ಚು ಮಾಡಿದೆಯೆನ್ನುತ್ತಿದೆ. ಆದರೆ ಕೆಲಸ ಸಿಕ್ಕಿದ್ದು 100 ಜನಕ್ಕೆ ಮಾತ್ರ. 200 ಮಹಿಳೆಯರನ್ನು ಇತ್ತೀಚೆಗೆ ತರಬೇತಿಗೆ ಆರಿಸಲಾಗಿದೆ. ಅನಿಲ ಪೀಡಿತ ಮಹಿಳೆಯರಿಗೆಂದು ಆರಂಭಿಸಿದ 2300 ಹೊಲಿಗೆ ಕೇಂದ್ರಗಳು 1992 ರಿಂದ ಮುಚ್ಚಿವೆ - ಈ ಮಹಿಳೆಯರು ಬೀದಿ ಪಾಲಾಗಿದ್ದಾರೆ. ವಿಶೇಷ ಕೈಗಾರಿಕಾ ಪ್ರದೇಶ ಸ್ಥಾಪಿಸಿ 10,000 ಪೀಡಿತರಿಗೆ ಉದ್ಯೋಗವಕಾಶ ಕಲ್ಪಿಸಲೆಂದು ರಚಿಸಿದ್ದ 152 ಶೆಡ್ಡುಗಳು ಹಾಳು ಸುರಿಯುತ್ತಿವೆ. ಇತ್ತೀಚೆಗೆ ಅದರಲ್ಲಿ ಅರ್ಧದಷ್ಟನ್ನು ಆರ್.ಎ.ಎಫ್.ನ ಪೋಲೀಸ್ ಸಿಬ್ಬಂದಿಗೆ ಬ್ಯಾರಕುಗಳಾಗಿ ಪರಿವರ್ತಿಸಲಾಗಿದೆ. ಪರಿಸರ ಸುಧಾರಣೆ ಹಾಗೂ ಮರುವಸತಿಗೆಂದು 70 ಕೋಟಿ ರೂ. ಖರ್ಚು ಮಾಡಿದ್ದರೂ ಅನಿಲ ದುರಂತ ಪೀಡಿತರು ಹಳೆಯ ಕೊಳೆಗೇರಿಗಳಿಂದ ಹೊರ ಬರಲಾಗಿಲ್ಲ.

ಅನಿಲ ದುರಂತ ಪೀಡಿತರ ಹೋರಾಟವೂ ನಿಂತಿಲ್ಲ "ನಮ್ಮ ಹೋರಾಟಗಳಿಂದಾಗಿ ಯೂನಿಯನ್ ಕಾರ್ಬೈಡ್ ಮತ್ತು ಅದರ ಅಧಿಕಾರಿಗಳು ಕ್ರಿಮಿನಲ್ ಹೊಣೆಯಿಂದ ತಪ್ಪಿಸಿಕೊಳ್ಳಲು ಆಗಿಲ್ಲ, ಸರಕಾರಕ್ಕೆ ತನ್ನ ಹೊಣೆ ಜಾರಿಸಿಕೊಳ್ಳಲು ಸಾಧ್ಯವಾಗಿಲ್ಲ" ಎನ್ನುತ್ತಾರೆ ಈ ಹೋರಾಟಗಾರರು. ಎಲ್ಲಕ್ಕೂ ಮಿಗಿಲಾಗಿ ಜನ ಈ ದುರಂತವನ್ನು ಅದರ ಕಾರಣಗಳನ್ನು ಮರೆಯದಂತೆ ಮಾಡುವಲ್ಲಿ ಯಶಸ್ವಿಯಾಗಿದ್ದೇವೆ, 'ಮರೆವಿನ ವಿರುದ್ಧ ಸ್ಮರಣೆಯ ಸಮರದಲ್ಲಿ ಗೆಲ್ಲುತ್ತಲೇ ಇದ್ದೇವೆ' ಎನ್ನುತ್ತಾರೆ. ಅವರು.

'ವಿಷಕಾರಿ ಬಂಡವಾಳದ ಜಾಗತೀಕರಣದ ಈ ದಿನಗಳಲ್ಲಿ ನಮ್ಮ ಹೋರಾಟಕ್ಕೆ ವಿಶೇಷ ಮಹತ್ವವಿದೆ' ಎನ್ನುವ ಇವರು ಸರಕಾರದ ಹೊಸ ಆರ್ಥಿಕ-ಕೈಗಾರಿಕಾ ನೀತಿಗಳು ಭೂಪಾಲ ಮಾದರಿಯ ವಿನಾಶಗಳಿಗೆ ದೇಶಾದ್ಯಂತ ಅವಕಾಶ ಕಲ್ಪಿಸುತ್ತದೆ ಎಂದು ಆಪಾದಿಸಿದ್ದಾರೆ. ಆದ್ದರಿಂದ ತಮ್ಮ ಈ ಕೆಳಗಿನ 13 ಅಂಶಗಳ ಬೇಡಿಕೆಯನ್ನು ಬೆಂಬಲಿಸಬೇಕೆಂದು ಪ್ರಜಾಪ್ರಭುತ್ವವಾದಿ ಜನ ವಿಭಾಗಗಳಿಗೆ ಕರೆ ನೀಡಿದ್ದಾರೆ -

1. ವಾರನ್ ಆಂಡರ್ಸನ್ ಭೋಪಾಲದ ಸಾಮೂಹಿಕ ಹತ್ಯಾಕಾಂಡದಲ್ಲಿ ವಹಿಸಿದ ಪ್ರಧಾನ ಪಾತ್ರಕ್ಕಾಗಿ ಆತ ವಿಚಾರಣೆ ಎದುರಿಸುವಂತೆ ಮಾಡುವಲ್ಲಿ ಭಾರತ ಸರಕಾರ ಹಿಂಜರಿಕೆಯನ್ನು ಬಿಡಬೇಕು.
2. ಅದೇ ರೀತಿ ಆಪಾದಿತ ವಿದೇಶಿ ಬೃಹತ್ ಕಂಪನಿಗಳಾದ ಅಮೆರಿಕಾದ ಯೂನಿಯನ್ ಕಾರ್ಬೈಡ್ ಮತ್ತು ಹಾಂಕಾಂಗ್‌ನ ಯೂನಿಯನ್ ಕಾರ್ಬೈಡ್ ಈಸ್ಟರ್ನ್‌ನ ಅಧಿಕೃತ ಪ್ರತಿನಿಧಿಗಳು ಭೋಪಾಲ್ ಜಿಲ್ಲಾ ನ್ಯಾಯಾಲಯದಲ್ಲಿ ಹಾಜರಿರುವಂತೆ ಭಾರತ ಸರಕಾರ ಮಾಡಬೇಕು.
3. ಸಿಬಿಐನಲ್ಲಿ ಈಗಿರುವ ಮಂದಿ ಇದರ ವಿಚಾರಣೆಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ಇದನ್ನು ಭಾರತ ಸರ್ಕಾರ ತಡೆಯಬೇಕು. ಸಾಕಷ್ಟು ಕಾನೂನು, ತಾಂತ್ರಿಕ ಹಾಗೂ ವೈಜ್ಞಾನಿಕ ಸಾಮರ್ಥ್ಯವಿರುವ ಒಂದು ವಿಶೇಷ ಸೆಲ್‌ಅನ್ನು ರಚಿಸಬೇಕು. ಇದರಲ್ಲಿ ದುರಂತದಲ್ಲಿ ಬದುಕುಳಿದಿರುವವರ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಲು ಅವಕಾಶವಿರಬೇಕು.
4. ದೀರ್ಘಕಾಲದ ಶುಶ್ರೂಷೆ, ಆರೋಗ್ಯ ಉಸ್ತುವಾರಿ ಹಾಗೂ ಪುನರ್ವಸತಿಗಾಗಿ ಒಂದು ಭೋಪಾಲ್ ಕುರಿತ ರಾಷ್ಟ್ರೀಯ ವೈದ್ಯಕೀಯ ಆಯೋಗವನ್ನು ರಚಿಸಬೇಕು. ಇದಕ್ಕೆ ಸಾಕಷ್ಟು ಅಧಿಕಾರ, ಹಣ ಒದಗಿಸಬೇಕು. ಸರಕಾರಿಯೇತರ ವಿಶೇಷಜ್ಞರು ಹಾಗೂ ದುರಂತದಲ್ಲಿ ಬದುಕುಳಿದವರ ಸಂಘಟನೆಗಳ ಪ್ರತಿನಿಧಿಗಳೂ ಇದರಲ್ಲಿರಬೇಕು.
5. ಅನಿಲ ಪೀಡಿತ ಸಮುದಾಯಗಳಲ್ಲಿ ಅನಿಲದಿಂದಾಗಿ ಉಂಟಾಗುತ್ತಿರುವ ಸಾವುಗಳ ಬಗ್ಗೆ ಅಧಿಕೃತವಾಗಿ ಮಾಹಿತಿ ಸಂಗ್ರಹಿಸುವ ವ್ಯವಸ್ಥೆಯನ್ನು ಭಾರತ ಸರ್ಕಾರ ಪುನರಾರಂಭಿಸಬೇಕು. ಈ ಅನಾಹುತದ ದೀರ್ಘಕಾಲದ ಆರೋಗ್ಯ ದುಷ್ಪರಿಣಾಮಗಳ ಕುರಿತ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ ಅಂತಿಮ ವರದಿಗಳನ್ನು ಪ್ರಕಟಿಸಬೇಕು.
6. ಭೋಪಾಲ್ ಹಾಸ್ಪಿಟಲ್ ಟ್ರಸ್ಟ್‌ನ ನಿಧಿಯ ಹತೋಟಿಗೆ ಹಾಗೂ ಇಡೀ ಶುಶ್ರೂಷೆಯ ಉಸ್ತುವಾರಿಗೆ ಒಂದು ಸ್ವಾಯತ್ತ ಮಂಡಳಿಯನ್ನು ರಚಿಸಬೇಕು. ಇದರಲ್ಲಿ ವಿಶೇಷಜ್ಞರು, ಅನಿಲ ಪೀಡಿತರ ಪ್ರತಿನಿಧಿಗಳಿರಬೇಕು.
7. ಭೋಪಾಲ್‌ನಲ್ಲಿ ಪರಿಹಾರ ಹಾಗೂ ಮರುವಸತಿಯ ಸರ್ಕಾರಿ ಕಾರ್ಯಕ್ರಮಗಳಲ್ಲಿ ಭ್ರಷ್ಟಾಚಾರ, ದುರಾಡಳಿತ, ಸರಕಾರೀ ಹಣದ ಅಪವ್ಯಯ ಇತ್ಯಾದಿಗಳ ವಿಚಾರಣೆಗೆ ಒಂದು ವಿಚಾರಣಾ ಆಯೋಗ ನೇಮಿಸಬೇಕು.
8. ರಾಜ್ಯ ಸರಕಾರ ಪರಿಹಾರ ಹಾಗೂ ಮರುವಸತಿಗೆ ಸಂಬಂಧಪಟ್ಟಂತೆ ಸಲ್ಲಿಸಿದ ಕಾರ್ಯಾಚರಣೆ ಯೋಜನೆಗೆ ಹಣ ಮಂಜೂರು ಮಾಡುವ ಮೊದಲು ವಿಮರ್ಶೆ ನಡೆಸಬೇಕು. ಇದರಲ್ಲಿ ಅನಿಲ ಪೀಡಿತರ ಪ್ರತಿನಿಧಿಗಳನ್ನು ಆಹ್ವಾನಿಸಬೇಕು.
9. ಅನಿಲ ಪೀಡಿತ ಮಹಿಳೆಯರಿಗಾಗಿ ಆರಂಭಿಸಿದ್ದ ಹಾಗೂ 1992 ರಿಂದ ಮುಚ್ಚಿರುವ ಹೊಲಿಗೆ ಕೇಂದ್ರಗಳನ್ನು ತೆರೆಯಬೇಕು. ಅನಿಲ ದುರಂತದಿಂದ ಬದುಕುಳಿದಿರುವವರಿಗೆ ವಿಶೇಷ ಕೈಗಾರಿಕಾ ಪ್ರದೇಶಗಳಲ್ಲಿ ಉದ್ಯೋಗವಕಾಶ ಒದಗಿಸಬೇಕು. ಎಲ್ಲಾ ಶುಶ್ರೂಷೆ ಹಾಗೂ ಮರುವಸತಿ ಕಾರ್ಯಕ್ರಮಗಳಿಗೆ ಸಿಬ್ಬಂದಿ ನೇಮಕದಲ್ಲಿ ದುರಂತದಿಂದ ಬದುಕುಳಿದವರಿಗೆ ಆದ್ಯತೆ ನೀಡಬೇಕು. ಭೋಪಾಲ ರೈಲ್ವೇ ಕೋಚ್ ರಿಪೇರಿ ಕಾರ್ಖಾನೆಯಲ್ಲಿ ಅನಿಲ ಪೀಡಿತ ವ್ಯಕ್ತಿಗಳಿಗೆ 50ಶೇ. ಮೀಸಲಾತಿಯ ಪರಿಣಾಮಕಾರಿ ಜಾರಿಯಾಗಬೇಕು.
10. ಪರಿಹಾರದ ಹಂಚಿಕೆಯಲ್ಲಿ ಸಾಮಾನ್ಯವಾಗಿ ನಡೆಯುವ ಅನ್ಯಾಯ, ವಿಳಂಬ ಭ್ರಷ್ಟಾಚಾರ ತಡೆಯಲು ಕ್ರಮಗಳನ್ನು ಭಾರತ ಸರ್ಕಾರ ಕೈಗೊಳ್ಳಬೇಕು. ವೈಯುಕ್ತಿಕ ಗಾಯ ಹಾಗೂ ಸಾವಿನ ಪ್ರಕರಣಗಳಲ್ಲೂ ಪರಿಹಾರ ನಿರಾಕರಿಸುವಲ್ಲಿ ಎದ್ದು ಕಾಣುವಂತಹ ಅನ್ಯಾಯಗಳಿರುವಲ್ಲಿ ಸೂಕ್ತ ನ್ಯಾಯಾಂಗ ವಿಮರ್ಶೆ ನಡೆಸಬೇಕು.
11. ಈ ಅನಾಹುತದಿಂದ ವಿಧವೆಯಾದವರಿಗೆ, ಅನಾಥರಾದವರಿಗೆ ಹಾಗೂ ಸಂಪೂರ್ಣ ಅಂಗವಿಕಲರಾದವರಿಗೆ ಜೀವನ ಪರ್ಯಂತ ಪೆನ್ಶನ್ ಒದಗಿಸಬೇಕು, ಅನಿಲ ಪೀಡಿತ ಕುಟುಂಬಗಳಲ್ಲಿ ಹುಟ್ಟಿದ ಮಕ್ಕಳ ಆಹಾರ ಪೋಷಣೆ ಮತ್ತು ಶಿಕ್ಷಣವನ್ನು ಪುಕ್ಕಟೆಯಾಗಿ ನೋಡಿಕೊಳ್ಳಬೇಕು.
12. ಯೂನಿಯನ್ ಕಾರ್ಬೈಡ್ ಫ್ಯಾಕ್ಟರಿಯ ಸುತ್ತ ಆಡಳಿತ ಉಂಟುಮಾಡಿರುವ ಪರಿಸರ ಹಾನಿಯನ್ನು ಅಂದಾಜು ಮಾಡಲು ಹಾಗೂ ಸುತ್ತಮುತ್ತಲು ಬದುಕುಳಿದವರಿಗೆ ಈ ವಿಷಯುಕ್ತ ಪರಿಸರ ಮಲಿನಕಾರಿಗಳಿಂದ ರಕ್ಷಣೆ ಒದಗಿಸಲು ಕ್ರಮಗಳನ್ನು ಕೈಗೊಳ್ಳಬೇಕು.
13. ಡಿಸೆಂಬರ್ 3 ನ್ನು ರಾಷ್ಟ್ರೀಯ ಶೋಕದಿನವಾಗಿ ಘೋಷಿಸಬೇಕು. ಈ ಕಾರ್ಖಾನೆಯ ಸ್ಥಳದಲ್ಲಿ ವಿಶ್ವದ ಈ ಅತ್ಯಂತ ಕೆಟ್ಟ ಕೈಗಾರಿಕಾ ಅನಾಹುತದ ನೆನಪಿನಲ್ಲಿ ಒಂದು ಸಂಗ್ರಹಾಲಯ ಕಟ್ಟಲು ಕ್ರಮ ವಹಿಸಬೇಕು.

ಲ್ಯಾಂಡ್-ಮೈನ್ ನಿಷೇಧ ಒಪ್ಪಂದಕ್ಕೆ 121 ದೇಶಗಳ ಸಹಿ

ಲೋಕ ಸಂಚಾರ



ಶರತ್ ಚಂದ್ರ

ಕೆನಾಡದ ಒಟ್ಟಾವಾದಲ್ಲಿ ನಡೆದ ಲ್ಯಾಂಡ್-ಮೈನ್ ನಿಷೇಧದ ಬಗ್ಗೆ ನಡೆಯುತ್ತಿರುವ ಸಮ್ಮೇಳನಕ್ಕೆ ಬಂದ 121 ದೇಶಗಳು ನಿಷೇದ ಒಪ್ಪಂದಕ್ಕೆ ಸಹಿ ಹಾಕಿವೆ. ಆದರೆ ಪ್ರಮುಖ ದೇಶಗಳಾದ ಅಮೇರಿಕ, ರಶ್ಯಾ, ಚೀನಾ, ಭಾರತ ಇತ್ಯಾದಿ ದೇಶಗಳು ಇದಕ್ಕೆ ಸಹಿ ಹಾಕಲು ಒಪ್ಪಿಲ್ಲ. ಕೆನಡಾ ಆರಂಭಿಸಿದ ಈ ಪ್ರಯತ್ನ ಮೂಲೆಗುಂಪಾಗುತ್ತದೆ ಎಂದು ಕೊಂಡಿದ್ದ ಅಮೇರಿಕ ಈಗ ಈ ಸಮ್ಮೇಳನದ ನಿಯಂತ್ರಣವನ್ನು ಕಸಿದು ಕೊಳ್ಳಲು ಪ್ರಯತ್ನಿಸುತ್ತಿದೆ. ಮುಂದಿನ ವರ್ಷ ಜನವರಿಯಲ್ಲಿ ಲ್ಯಾಂಡ್-ಮೈನ್ ಗಳನ್ನು ನಾಶ ಮಾಡುವ ತಂತ್ರಜ್ಞಾನದ ಬಗ್ಗೆ ಸಮ್ಮೇಳನವನ್ನು ಸಂಘಟಿಸಲು ಅಮೇರಿಕ ಮುಂದಾಗಿದೆ. ಕೊರಿಯಾದಲ್ಲಿ ತನ್ನ ಪಡೆಗಳಿಗೆ ಅಪಾಯವಿರುವುದರಿಂದ, ಕೊರಿಯಾದಲ್ಲಿ ಲ್ಯಾಂಡ್-ಮೈನ್‌ಗಳ ಬಗೆಗೂ ತನಗೆ ವಿನಾಯಿತಿ ಕೊಟ್ಟರೆ ಮಾತ್ರ ತಾನು ಸಹಿ ಹಾಕುವುದಾಗಿ ಅಮೇರಿಕ ಈ ಒಪ್ಪಂದಕ್ಕೆ ಅಡ್ಡಗಾಲು ಹಾಕಲು ಪ್ರಯತ್ನಿಸುತ್ತಿದೆ. ಅಮೇರಿಕದ ಈ ಕಾಲ್ತೊಡರು ನೀತಿಯಿಂದ ಇತರ ಪ್ರಮುಖ ದೇಶಗಳು ಒಪ್ಪಂದದಿಂದ ಹೊರಗುಳಿದವು ಎಂಬುದು ಸಮ್ಮೇಳನದ ಸಂಘಟಕರ ಅಭಿಪ್ರಾಯ. ಈ ನಡುವೆ ಚೀನಾ ಈ ಒಪ್ಪಂದಕ್ಕೆ ಸಹಿ ಹಾಕದಿದ್ದರೂ, ಚೀನಾ-ವಿಯಾಟ್ನಾಂ ಗಡಿಯಲ್ಲಿ ಹಿಂದೆ ಹಾಕಲಾಗಿದ್ದ ಲ್ಯಾಂಡ್-ಮೈನ್ ಗಳನ್ನು ತೆಗೆದು ಹಾಕಲು ನಿರ್ಧರಿಸಿದೆ ಹಾಗೂ ಆ ಬಗ್ಗೆ ಕೆಲಸ ಆರಂಭಿಸಿದೆ ಈ ಲ್ಯಾಂಡ್-ಮೈನ್ ನಿಷೇಧದ ಬಗೆಗಿನ ಪ್ರಯತ್ನ ವಿಶ್ವ ಸಂಸ್ಥೆಯ ಯಾವುದೇ ಬೆಂಬಲ, ಸಹಾಯವಿಲ್ಲದೆ ಸಫಲವಾಗಿದ್ದು, ಶಾಂತಿ ಪ್ರಯತ್ನದಲ್ಲಿ ವಿಶ್ವ ಸಂಸ್ಥೆಯ ಪ್ರಸ್ತುತತೆ ಬಗ್ಗೆ ಹಲವು ವೀಕ್ಷಕರು ಸಂಶಯ ವ್ಯಕ್ತಪಡಿಸುತ್ತಿದ್ದಾರೆ. ಈ ಒಪ್ಪಂದಕ್ಕೆ ವಿಶ್ವ ಸಂಸ್ಥೆಯ ಬೆಂಬಲ ದೊರತಿದ್ದು ಹಾಗೂ ಅಮೇರಿಕ ಈ ಒಪ್ಪಂದವನ್ನು ಮೊದಲಿಗೆ ವಿರೋಧಿಸಿದ್ದು ಕಾಕತಾಳೀಯವೇ? ಎಂದೂ ಹಲವರು ಪ್ರಶ್ನಿಸುತ್ತಿದ್ದಾರೆ.

ಬಾಂಗ್ಲಾದೇಶ ಸರ್ಕಾರ - ಚಕ್ಮಾ ಉಗ್ರರ ನಡುವೆ ಶಾಂತಿ ಒಪ್ಪಂದ

ಇಪ್ಪತ್ತೆರಡು ವರ್ಷದಿಂದ ಬಾಂಗ್ಲಾದೇಶ ಸರ್ಕಾರದ ವಿರುದ್ಧ ದಂಗೆ ಎದ್ದು ಸಶಸ್ತ್ರ ಹೋರಾಟ ನಡೆಸುತ್ತಿದ್ದ ಚಕ್ಮಾ ಉಗ್ರರು ಹಾಗೂ ಸರ್ಕಾರದ ನಡುವೆ ಶಾಂತಿ ಒಪ್ಪಂದ ಏರ್ಪಟ್ಟಿದೆ. ಈ ಒಪ್ಪಂದದ ಬಗ್ಗೆ ಸುದ್ದಿ ಕೇಳುತ್ತಲೆ ದೇಶದ ದಕ್ಷಿಣ-ಪೂರ್ವಭಾಗದ ಚಿತ್ತಗಾಂಗ್ ಗುಡ್ಡ ಪ್ರದೇಶಗಳಲ್ಲಿರುವ ಸಾವಿರಾರು ಚಕ್ಮ ಆದಿವಾಸಿಗಳು ಖುಷಿಯಿಂದ ರಸ್ತೆಗಳಲ್ಲಿ ಕುಣಿದಾಡಿದರು. ಈ ಒಪ್ಪಂದದ ಪ್ರಕಾರ ಚಕ್ಮಾ ಉಗ್ರವಾದಿಗಳು 45 ದಿನಗಳೊಳಗಾಗಿ ಶಸ್ತ್ರ ತ್ಯಾಗ ಮಾಡುವುದಾಗಿ ಹೇಳಿದ್ದಾರೆ. ಈ ಪ್ರದೇಶದಲ್ಲಿ ಸೈನ್ಯ ನಿರ್ಮಿಸಿರುವ ಕಾವಲು ಠಾಣೆಗಳನ್ನು ಮುಚ್ಚಲಾಗುವುದು. ಬಾಂಗ್ಲಾದೇಶದ ಪತ್ರಿಕೆಗಳು ಈ ಒಪ್ಪಂದ ದೇಶದ ಹಿತಾಸಕ್ತಿಯಲ್ಲಿದೆ ಎಂದು ಪ್ರಶಂಸಿಸಿವೆ. ಮುಖ್ಯ ವಿರೋಧ ಪಕ್ಷ ಮಾತ್ರ ಈ ಒಪ್ಪಂದವನ್ನು ವಿರೋಧಿಸಿದೆ. ಬೇಗಂ ಖಲಿದಾ ಜಿಯಾರ ನಾಯಕತ್ವದ ಬಾಂಗ್ಲಾದೇಶ ನ್ಯಾಶನಲ್ ಪಾರ್ಟಿ ನಾಲ್ಕು ದಿನಗಳ ರಾಷ್ಟ್ರೀಯ ಪ್ರತಿಭಟನಾ ರ್‍ಯಾಲಿಗಳು ಹಾಗೂ ಒಂದು ದಿನದ ಸಾರ್ವತ್ರಿಕ ಮುಷ್ಕರಕ್ಕೆ ಕರೆಕೊಟ್ಟಿದೆ. ಈ ಒಪ್ಪಂದದ ಪ್ರಕಾರ ಚಿತ್ತಗಾಂಗ್ ಪ್ರದೇಶದ ಮೂರು ಜಿಲ್ಲೆಗಳು ಚಕ್ಮ ಮುಂತಾದ ಆದಿವಾಸಿಗಳು ಪ್ರಧಾನವಾಗಿರುವ ಜಿಲ್ಲಾ ಕೌನ್ಸಿಲ್‌ಗಳ ಸ್ವಯಂ ಆಡಳಿತ ಪಡೆಯುತ್ತಾರೆ. ಈ ಜಿಲ್ಲೆಗಳ ಭೂಮಿ, ಸ್ಥಳೀಯ ಪೋಲಿಸ್ ಈ ಕೌನ್ಸಿಲ್ ಗಳ ಆಡಳಿತಕ್ಕೆ ಒಳಪಡುತ್ತಾರೆ. 8 ಲಕ್ಷ ಜನ ಸಂಖ್ಯೆ ಇರುವ ಪ್ರದೇಶದಲ್ಲಿ ಮೂರರಲ್ಲಿ ಎರಡು ಭಾಗ ಜನ ಆದಿವಾಸಿಗಳು. ಚಕ್ಮಾ ಆದಿವಾಸಿಗಳೇ ಅದರಲ್ಲಿ ಪ್ರಮುಖರು. ಚಿತ್ತಗಾಂಗ್‌ನ ಆದಿವಾಸಿಗಳು ಸ್ವಯಂ ಆಡಳಿತಕ್ಕೆ ಪ್ರದೇಶದ ಬೆಳವಣಿಗೆಗೆ ಹೋರಾಡುತ್ತಿದ್ದಾರೆ. ಈ ಆಂತರಿಕ ಕಲಹದಿಂದ, ಪ್ರದೇಶದ ಆರ್ಥಿಕ ಬೆಳವಣಿಗೆ ಹೆಚ್ಚು ಕಡಿಮೆ ನಿಂತೇ ಹೋಗಿತ್ತು. ಮರಮಟ್ಟು, ಪ್ರಾಕೃತಿಕ ಅನಿಲ ಹಾಗೂ ತೈಲ ಸಂಪನ್ಮೂಲಗಳು ಸಮೃದ್ಧ ವಾಗಿರುವ ಈ ಪ್ರದೇಶ ಈ ಶಾಂತಿ ಒಪ್ಪಂದದಿಂದ ಬೆಳವಣಿಗೆ ಕಾಣಬಹುದು. 22 ವರ್ಷಗಳಿಂದ ಇಪ್ಪತ್ತು ಸಾವಿರ ಜನರನ್ನು ಬಲಿ ತೆಗೆದು ಕೊಂಡಿರುವ ಈ ರಕ್ತಪಾತ ನಿಂತರ, ಅದೇ ಅದರಷ್ಟಕ್ಕೆ ದೊಡ್ಡ ಸಾಧನೆ.

ಇಟಲಿಯ ಮಾಜಿ ಪ್ರಧಾನಿ ಜೈಲಿಗೆ

ಇಟಲಿಯ ಮಾಜಿ ಪ್ರಧಾನಿ ಬೆಲೂಕಸ್ಕೊನಿಯವರು ಆರ್ಥಿಕ ಅಪರಾಧ ಒಂದರಲ್ಲಿ 16 ತಿಂಗಳ ಜೈಲುವಾಸಕ್ಕೆ ಗುರಿಯಾಗಿದ್ದಾರೆ. ಈಗಿನ ಎಡ-ಮಧ್ಯಮ ಕೂಟದ ಮೊದಲಿದ್ದ ಸರ್ಕಾರದಲ್ಲಿ ಪ್ರಧಾನಿಯಾಗಿದ್ದ ಅವರು ೧೯೮೯ರಲ್ಲಿ ಸ್ವಂತ ಕಂಪನಿಗಳ ವ್ಯವಹಾರದಲ್ಲಿ ಮಾಡಿದ ಅಕ್ರಮದ ಬಗ್ಗೆ ಈ ಶಿಕ್ಷೆ. ಬೆಲೂಕಸ್ಕೊನಿಯವರ ಫಿನ್ ಎಂಬ ಸಂಸ್ಥೆ ಮೆದೂಸಾ ಎಂಬ ಸಿನಿಮಾ ಮಂದಿರಗಳ ಗುಂಪನ್ನು ಖರೀದಿ ಮಾಡುವುದರಲ್ಲಿ ಲೆಕ್ಕಪತ್ರದಲ್ಲಿನ ಅಪರಾಧಕ್ಕೆ ಈ ಕ್ರಮ. ಮಾಫಿಯಾ - ಸಂಬಂಧವಿರುವ ಕ್ರಿಶ್ಚಿಯನ್ ಡೆಮಾಕ್ರಾಟಿಕ್ ಪಕ್ಷ ಹಾಗೂ ಸೋಶಲಿಸ್ಟ್ ಪಾರ್ಟಿಯ ಕೂಟವನ್ನು ಸೋಲಿಸಿ, ಅವರ ಮಧ್ಯಮ- ಬಲಪಂಥೀಯ ಕೂಟ ಅಧಿಕಾರಕ್ಕೆ ಬಂದಾಗ, ಅವರನ್ನು ಮಿಸ್ಟರ್ ಕ್ಲೀನ್ ಎಂದೆಲ್ಲಾ ಸುದ್ದಿ ಮಾಧ್ಯಮಗಳು ಹಾಡಿಹೊಗಳಿದ್ದವು ಎಂದು ನೆನಪಿಸಿಕೊಂಡು ನಗಬಹುದು.

ನಾಜಿ ಲೂಟಿಯನ್ನು ನುಂಗಿ ನೀರು ಕುಡಿದವರು

ಕಳೆದ ಹಲವು ತಿಂಗಳುಗಳಿಂದ ಹಿಟ್ಲರ್‌ನ ಎರಡನೇ ಮಹಾಯುದ್ಧ ಕಾಲದ ಲೂಟಿಯನ್ನು ರಹಸ್ಯವಾಗಿ ಇರಿಸುವಲ್ಲಿ, ಆ ಆಧಾರದ ಮೇಲೆ ನಾಜಿ ಯುದ್ಧ ಯಂತ್ರಕ್ಕೆ ಹಣ ಒದಗಿಸುವಲ್ಲಿ ಸ್ವಿಸ್ ಬ್ಯಾಂಕ್‌ಗಳ ಪಾತ್ರದ ಮೇಲೆ ಬೆಳಕು ಚೆಲ್ಲಿತ್ತು. ಈ ಬಗ್ಗೆ ಹಲವು ವರದಿಗಳು ಪ್ರಕಟವಾಗಿ, ಸಾಕಷ್ಟು ಒತ್ತಡ ಬಂದ ಮೇಲೆ ಸ್ವಿಸ್ ಸರ್ಕಾರ ತನಿಖೆ ನಡೆಸಿದಾಗ ಯುದ್ಧಕಾಲದಲ್ಲಿ ಹಿಟ್ಲರ್‌ನ ಲೂಟಿ ಮಾಡಿದ ಚಿನ್ನದ ವಹಿವಾಟಿನ ಮುಕ್ಕಾಲು ಭಾಗ ಸ್ವಿಸ್ ಬ್ಯಾಂಕ್‌ಗಳ ಮೂಲಕ ನಡೆಯಿತು. ಈ ಚಿನ್ನ ನಾಜಿ ಪಡೆಗಳು ಇತರ ಯುರೋಪಿಯನ್ ದೇಶಗಳ ಮೇಲೆ ದಾಳಿ ಮಾಡಿದಾಗ, ದೇಶಗಳ ಕೇಂದ್ರೀಯ ಬ್ಯಾಂಕ್ ಅನ್ನು ಲೂಟಿ ಮಾಡಿ ಚಿನ್ನ ಸಾಗಿಸಿದ್ದೂ ಅಲ್ಲದೆ, ಯಹೂದಿ ಕುಟುಂಬಗಳಿಂದ ಲೂಟಿ ಮಾಡಿದ ಚಿನ್ನ ಸಹ ಸೇರಿದೆ. ಸುಮಾರು (ಈಗಿನ ಬೆಲೆಯಲ್ಲಿ) ಐದು ಶತಕೋಟಿ ಡಾಲರಿನಷ್ಟು ಬೆಲೆ ಬಾಳುವ ಚಿನ್ನ ಸ್ವಿಸ್ ಬ್ಯಾಂಕ್‌ಗಳಲ್ಲಿ ಇತ್ತು ಎಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಒಂದು ಭಾಗ ಚಿನ್ನವನ್ನು ನಾಜಿ-ವಿರೋಧಿ ಕೂಟದ ದೇಶಗಳ ಮೇಲ್ವಿಚಾರಣೆಗೆ ವಹಿಸಲಾಗಿತ್ತು. ಆದರೆ ದೊಡ್ಡಭಾಗ ಸ್ವಿಸ್ ಬ್ಯಾಂಕ್‌ಗಳಲ್ಲೆ ಇದ್ದವು. ಇತ್ತೀಚಿಗೆ ನಾಜಿ ಅತ್ಯಾಚಾರಕ್ಕೆ ಒಳಗಾದ ಯೆಹೂದಿ ಕುಟುಂಬಗಳ ಸಾವಿರಾರು ದೂರುಗಳಿಂದ ವ್ಯಕ್ತವಾಗಿತ್ತು. ಈ ದೂರುಗಳ ಹಿನ್ನಲೆಯಲ್ಲಿ ಬ್ರಿಟನ್ 40 ದೇಶಗಳ ಕಮಿಶನ್ ಒಂದನ್ನು ಕರೆದಿತ್ತು. ಯುದ್ಧ ಸಮಯದಲ್ಲಿ ತಟಸ್ಥ ದೇಶಗಳಾಗಿದ್ದ ಇತರ ಯುರೋಪಿಯನ್ ದೇಶಗಳಲ್ಲೂ ಇದೇ ರೀತಿ ನಾಜಿ ಲೂಟಿ ಇವೆ ಎಂದೂ ಸ್ವಿಸ್ ಸರ್ಕಾರ ಹೇಳಿತ್ತು. ಈ ಬಗ್ಗೆ ಈ 40 ದೇಶಗಳ ಕಮಿಶನ್ ಚರ್ಚೆ ನಡೆಸಿತು

ಆಗ ಬೆಳಕಿಗೆ ಬಂದ ಅಂಶಗಳು ದಂಗು ಬಡಿಸುವಂತಹವು. ಸ್ವೀಡನ್, ಪೋರ್ಚುಗಲ್, ಸ್ಪೈನ್, ತುರ್ಕಿ, ಅರ್ಜೆಂಟೆನಾಗಳಲ್ಲೂ ನಾಜಿಲೂಟಿಯ ಅಂಶಗಳಿದ್ದು ಬಹಳ ಸಣ್ಣ ಅಂಶ ಹೊಂದಿದ್ದು ಅದನ್ನು ಹಿಂದಿರುಗಿಸುವಲ್ಲಿ ಯಾವುದೇ ಕಾಳಜಿ ವಹಿಸಲಿಲ್ಲವಂತೆ. ಈ ದೇಶಗಳೂ ಸ್ವಿಜರ್‌ಲ್ಯಾಂಡ್‌ನಂತೆ ನಾಜಿ ಲೂಟಿಯ ಶೇಕಡಾ 80 ರಷ್ಟು ಭಾಗವನ್ನು ನುಂಗಿ ನೀರು ಕುಡಿದಿದ್ದವು. ಈ ಚರ್ಚೆ ವೇಳೆಯಲ್ಲಿ ಆಗ ನಾಜಿ-ನಿಯಂತ್ರಿತವಾಗಿದ್ದ ಕ್ರೋಶಿಯಾ ವ್ಯಾಟಿಕನ್‌ಲ್ಲೂ ನಾಜಿ ಲೂಟಿಯನ್ನು ಇಟ್ಟಿತ್ತು ಎಂದು ಬೆಳಕಿಗೆ ಬಂದಿತು. (ಕ್ಯಾಥೋಲಿಕ್ ಕೇಂದ್ರವಾದ ವ್ಯಾಟಿಕನ್ ರೋಮ್‌ನ ಭಾಗವಾಗಿದ್ದರೂ ಬೇರೆ ದೇಶ ಎಂದು ಪರಿಗಣಿಸಲ್ಪಡುತ್ತದೆ). ವ್ಯಾಟಿಕನ್ ಈ ಬಗ್ಗೆ ಮೌನವಾಗಿದ್ದು ಸಂಶಯವನ್ನು ಬಲಪಡಿಸಿದೆ. 40 ದೇಶಗಳ ಕಮಿಷನ್ ವ್ಯಾಟಿಕನ್ ಮತ್ತು ಇತರೆಲ್ಲಾ ಸಂಬಂಧಿತ ದೇಶಗಳು ತಮ್ಮ ಹಳೆ ರೆಕಾರ್ಡುಗಳನ್ನು ತೆರೆದು, ಈ ಬಗ್ಗೆ ತನಿಖೆಗೆ ಅನುವು ಮಾಡಿಕೊಡಬೇಕೆಂದು ಒತ್ತಾಯಿಸಿವೆ.

ಮಹಾಯುದ್ಧದಲ್ಲಿ ಲಕ್ಷಾಂತರ ಸಾವು, ನೋವುಗಳನ್ನು ಅನುಭವಿಸುತ್ತಿದ್ದಾಗ ಎರಡೂ ಕಡೆಯವರು ಮಾತ್ರವಲ್ಲ ತಟಸ್ಥರಾಗಿದ್ದ ದೇಶಗಳ ಬಂಡವಾಳ ಶಾಹಿಗಳು ಅಪಾರ ಲಾಭ, ನೇರವಾಗಿ ಲೂಟಿಯನ್ನು ಪಡೆದು ಕೊಬ್ಬುತ್ತಿದ್ದರು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ತಂಬಾಕು ಜಾಹೀರಾತಿನ ಮೇಲೆ ಯುರೋಪಿಯನ್ ಒಕ್ಕೂಟದ ನಿಷೇಧ

ಯೂರೋಪಿಯನ್ ಒಕ್ಕೂಟದ 15 ದೇಶಗಳ ಆರೋಗ್ಯ ಮಂತ್ರಿಗಳ ಸಭೆಯಲ್ಲಿ ತಂಬಾಕು ಜಾಹೀರಾತಿನ ಮೇಲೆ ಸಮಗ್ರ ನಿಷೇಧ ಹೇರುವ ನಿರ್ಧಾರ ಮಾಡಿವೆ. ಈಗಾಗಲೇ ರೇಡಿಯೋ, ಟಿ.ವಿ.ಗಳ ಮೇಲೆ ತಂಬಾಕು ಜಾಹೀರಾತು ನಿಷೇಧಿತವಾಗಿವೆ. ಈಗಿನ ಒಪ್ಪಂದದ ಪ್ರಕಾರ ಹಂತ ಹಂತವಾಗಿ ಎಲ್ಲಾ ಮುದ್ರಿತ ಮಾಧ್ಯಮಗಳಲ್ಲಿ(ಪೇಪರ್, ಮ್ಯಾಗಜಿನ್ ಇತ್ಯಾದಿ) ತಂಬಾಕು ಜಾಹೀರಾತುಗಳನ್ನು ನಿಷೇಧಿಸಲಾಗುವುದು. ಇದಲ್ಲದೆ ಟೀಶರ್ಟ್‌ಗಳಲ್ಲಿ, ಬಟ್ಟೆ, ಸುವಾಸನೆ ಬಾಟ್ಲಿಗಳಲ್ಲಿ, ಬ್ಯಾಗುಗಳಲ್ಲೂ ತಂಬಾಕು ಜಾಹೀರಾತು ನಿಷೇಧ ತರಲಾಗುವುದು. ತಂಬಾಕು ಜಾಹೀರಾತು ಇರುವ ತಂಬಾಕು ಕಂಪನಿಗಳ ಪ್ರಾಯೋಜಿತ ಸಾಂಸ್ಕೃತಿಕ, ಕ್ರೀಡಾ ಸಮಾರಂಭಗಳಿಗೂ ಇದು ಅನ್ವಯಿಸಲಿದೆ - ಹಂತ ಹಂತವಾಗಿ ಹೊಟೇಲು, ರೆಸ್ಟೋರೆಂಟ್ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲಾ ಕಡೆ ತಂಬಾಕು - ನಿಷೇಧಿತ ಸ್ಥಳದ ಆಯ್ಕೆ ಕಡ್ಡಾಯವಾಗಿರುತ್ತದೆ. ಆದರೆ ಕೆಲವು ದೇಶಗಳ ಒತ್ತಡದಿಂದ ಈ ನಿಷೇಧ ಒಂಬತ್ತು ವರ್ಷಗಳಲ್ಲಿ ಹಂತಹಂತವಾಗಿ ಬರಲಿದೆ. ರಾಷ್ಟ್ರೀಯ ಸರ್ಕಾರಗಳಿಗೆ ಈ ಬಗ್ಗೆ ಅಗತ್ಯವಾದ ಕಾನೂನು ಮಾಡಲು ಮೂರು ವರ್ಷಗಳ ಗರಿಷ್ಠ ಅವಧಿ ಕೊಡಲಾಗಿದೆ. ದೀರ್ಘ ಅವಧಿಯಲ್ಲಿ ಜಾರಿಗೆ ಬರುವುದಾದರೂ, ತಂಬಾಕು ಜಾಹೀರಾತಿನ ಮೇಲಿನ ಈ ಸಮಗ್ರ ನಿಷೇಧ ಜಗತ್ತಿನಲ್ಲೇ ಅತ್ಯಂತ ಕಠಿಣವಾದ ನಿಷೇಧ.

ಪರ್ವತ ಕೊರೆದು ಮರುಭೂಮಿಗೆ ನದಿ ನೀರು ಹರಿಸಲು ಯೋಜನೆ

ಬೀಜಿಂಗ್ : ದಕ್ಷಿಣ ಕೋರಿಯಾದಷ್ಟು ಭೂ ವಿಸ್ತಾರ ಹೊಂದಿರುವ ಚೀನದ ಲೋಪ್ ನುರ್ ಮರಳುಗಾಡನ್ನು ಮತ್ತೆ ಹಚ್ಚಹಸಿರಾಗಿಸುವ ಪ್ರಯತ್ನ ನಡೆದಿದೆ.

ದೇಶದ ವಾಯುವ್ಯ ಭಾಗಕ್ಕಿರುವ ಕ್ಸಿನ್ ಜಿಯಾಂಗ್ ಪ್ರಾಂತಕ್ಕೆ ಸೇರಿದ ಈ ಮರುಭೂಮಿ ಒಂದು ಕಾಲಕ್ಕೆ ಅಪಾರ ಗಿಡಮರಗಳಿಂದ ಕೂಡಿದ ಹಸಿರು ಪ್ರದೇಶವಾಗಿತ್ತು. ತಾರಿಮ್ ನದಿ ತನ್ನ ಪಾತ್ರವನ್ನು ಬದಲಿಸಿ ಹರಿಯತೊಡಗಿದ ಬಳಿಕ 2000 ವರ್ಷಗಳ ಹಿಂದೆ ಇಡೀ ಭೂ ಪ್ರದೇಶ ಮರಳುಗಾಡಾಗಿ ಪರಿವರ್ತನೆಗೊಂಡಿತ್ತು.

ಚೀನ ಸರ್ಕಾರ ಯಾಂಗ್ಟೆ, ಜಾಂಗ್ಬೋ, ಯಾರ್ಲುಂಗ್ ನದಿಗಳಿಂದ ಲೋಸ್ ನುರ್ ಮರುಭೂಮಿಗೆ ನೀರು ಹರಿಬಿಡಲು ಒಂದು ಬೃಹತ್ ಯೋಜನೆಯೊಂದನ್ನು ರೂಪಿಸಿದೆ. ಈ ಯೋಜನೆಯನ್ನು ಚೀನಿ ವಿಜ್ಞಾನ ಅಕಾಡೆಮಿಯ ಪ್ರೊ. ಹೀ ಚುಕ್ಸಿಯು ಸಿದ್ಧಪಡಿಸಿದ್ದಾರೆ. ಚುಕ್ಸಿಯು ಅವರು ಈ ಯೋಜನೆಗಾಗಿ 1972 ರಿಂದ ತಮ್ಮ ಇಡೀ ಸಮಯವನ್ನು ನೀಡಿದ್ದಾರೆ. ಮುಂದಿನ ಶತಮಾನದ ಆರಂಭದಲ್ಲಿಯೇ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಚೀನಿ ಸರ್ಕಾರ ನಿರ್ಧರಿಸಿದೆ.

ಲೋಸ್‌ನುರ್ ಮರುಭೂಮಿಗೆ ಯಂಗ್ಟೆ ಮತ್ತು ಇತರ ನದಿಗಳಿಂದ ನೀರು ಹರಿಸಲು ಎರಡು ಪರ್ವತಗಳನ್ನೇ ಅಗೆಯಬೇಕಾಗುತ್ತದೆ ಎಂದು ತಜ್ಞರು ತಿಳಿಸಿದ್ದಾರೆ.

ಸದ್ದಾಂ ಸರ್ವಾಧಿಕಾರದ ವಿರುದ್ಧ ಹೋರಾಟಕ್ಕೆ ಇರಾಕಿ ಕಮ್ಯುನಿಸ್ಟ್ ಪಕ್ಷದ ಆರನೇ ಮಹಾಧಿವೇಶನ ಕರೆ

ಇತ್ತೀಚೆಗೆ ಸೇರಿದ್ದ ಇರಾಕಿ ಕಮ್ಯುನಿಸ್ಟ್ ಪಕ್ಷದ ಆರನೇ ಮಹಾಧಿವೇಶನ ಪಕ್ಷಕ್ಕೆ ಮೂರು ಕೇಂದ್ರೀಯ ಘೋಷಣೆಗಳನ್ನು ಕೊಟ್ಟಿದೆ - ಇರಾಕಿ ಜನತೆ ಮೇಲೆ ವಿಧಿಸಿರುವ ಅಂತರ್ರಾಷ್ಟ್ರೀಯ ನಿರ್ಬಂಧಗಳನ್ನು ತೆಗೆಯುವುದು, ಸರ್ವಾಧಿಕಾರಿ ಆಡಳಿತದಿಂದ ವಿಮೋಚನೆ ಮತ್ತು ಪ್ರಜಾಸತ್ತಾತ್ಮಕ ಫೆಡರಲ್ ಐಕ್ಯ ಇರಾಕಿನ ಸರ್ಕಾರ ಸ್ಥಾಪಿಸುವುದು. ಈ ಮೂರು ಪ್ರಮುಖ ಉದ್ದೇಶಗಳಿಗಾಗಿ ಹೋರಾಡಲು ಮಹಾಧಿವೇಶ ಕರೆ ನೀಡಿದೆ. ಭೂಗತವಾಗಿರುವ ಪಕ್ಷದ ಕಳೆದ ನಾಲ್ಕು ವರ್ಷಗಳ ಚಟುವಟಿಕೆಗಳನ್ನು ಮಹಾಧಿವೇಶನ ವಿಮರ್ಶಿಸಿತು.

ಸದ್ದಾಂ ಸರ್ವಾಧಿಕಾರ ಆಡಳಿತದ ಸ್ವಭಾವದ ಬಗ್ಗೆ, ಅದನ್ನು ಉರುಳಿಸುವ ವಿಧಾನಗಳ ಬಗ್ಗೆ ತೀವ್ರ ಚರ್ಚೆ ನಡೆಯಿತು. ಆಳುವ ಪಕ್ಷ, ಸೈನ್ಯದಲ್ಲಿ ಒಡಕು ಹಾಗೂ ಆಡಳಿತದ ವಿರುದ್ಧ ಜನತೆಯ ರೋಷ ಇವೆಲ್ಲವನ್ನು ಬಳಸಿ ಪ್ರಬಲ ಚಳುವಳಿ ಕಟ್ಟಬೇಕು ಎಂಬ ತೀರ್ಮಾನಕ್ಕೆ ಬಂದಿತು. ಪಕ್ಷದ ಒಂದು ವಿಭಾಗ ಸರ್ಕಾರದ ಜತೆ ಮಾತುಕತೆ ನಡೆಸಬೇಕು ಎಂಬ ಸಲಹೆಯನ್ನು ಮಹಾಧಿವೇಶನ ತಳ್ಳಿಹಾಕಿತು. ಈಗಿನ ಸರ್ಕಾರ ದೇಶದೊಳಗೆ ಹಾಗೂ ಅಂತರ್ರಾಷ್ಟ್ರೀಯವಾಗಿ ಒಂಟಿಯಾಗಿರುವಾಗ ಮಾತುಕತೆ ಸರ್ವಾಧಿಕಾರದ ವಿರುದ್ಧ ದೇಶಪ್ರೇಮಿ ಹೋರಾಟವನ್ನು ದುರ್ಬಲಗೊಳಿಸುವುದು ಎಂದಿದೆ.

ಮಧ್ಯಪ್ರಾಚ್ಯದ ಪರಿಸ್ಥಿತಿ ಬಗ್ಗೆ ವಿಮರ್ಶಿಸಿದೆ, ಶಾಂತಿಭಂಗಕ್ಕೆ ಇಸ್ರೇಲ್ ಹಾಗೂ ಅಮೆರಿಕ ಕಾರಣ ಎಂದಿದೆ. ಜಗತ್ತಿನ ಹಲವು ಕಡೆ ಪ್ರಜಾಸತ್ತಾತ್ಮಕ ಎಡಶಕ್ತಿಗಳ ವಿಜಯದ ಹೊಸ ಬೆಳವಣಿಗೆ ಬಗ್ಗೆ ಸಮಾಧಾನ ವ್ಯಕ್ತಪಡಿಸಿದೆ.

ಇರಾಕ್ ಹಾಗೂ ಕುರ್ದಿಶ್ ಕಮ್ಯುನಿಸ್ಟ್ ಪಕ್ಷಗಳ ನಡುವಿನ ಸಂಬಂಧದ ಸ್ವಭಾವದ ಬಗ್ಗೆ ಹಾಗೂ 1979-88 ರ ನಡುವಿನ ಪಕ್ಷದ ಭೂಗತ ಸಶಸ್ತ್ರ ಹೋರಾಟದ ಅನುಭವಗಳ ಬಗ್ಗೆ ಎರಡು ಪ್ರತ್ಯೇಕ ದಸ್ತಾವೇಜುಗಳನ್ನು ಮಹಾಧಿವೇಶನ ಅಂಗೀಕರಿಸಿತು.

ಮಹಾಧಿವೇಶನ ಹೊಸ ಕೇಂದ್ರ ಸಮಿತಿಯನ್ನು ಚುನಾಯಿಸಿತು. ಕಾಂ|| ಹಮೀದ್ ಮಜೀದ್ ಮೂಸಾ ಕಾರ್ಯದರ್ಶಿಯಾಗಿ ಪುನರಾಯ್ಕೆಯಾದರು.

ಸಾದರ ಸ್ವೀಕಾರ

ಸ್ವಾತಂತ್ರ್ಯ ಸಂಗ್ರಾಮದ ಹೆಜ್ಜೆಗಳು.	ಲೇ: ಬಿ.ವಿ. ಕಕ್ಕಿಲ್ಲಾಯ	ರೂ. 35
ಸಾಮಾಜಿಕ ಚಳುವಳಿಗಳು	ಲೇ: ಡಾ. ಆರ್. ಮಣಿಪಾಲ	ರೂ. 35
ಭಾರತಕ್ಕೊಂದು ಬದಲು ದಾರಿ	ಲೇ: ಬಿ.ವಿ. ಕಕ್ಕಿಲ್ಲಾಯ.	ರೂ. 35
ಇತಿಹಾಸದ ಅಧ್ಯಯನ ಅಂದು-ಇಂದು	ಲೇ: ಡಾ. ಎಸ್.ಎಸ್. ಗೋಪಾಲರಾವ್	ರೂ. 35
ಜನಾರೋಗ್ಯ	ಲೇ: ಡಾ. ಸಿ.ಆರ್. ಚಂದ್ರಶೇಖರ್	ರೂ.35
ಅಂತರಾಷ್ಟ್ರೀಯ ನೆಲೆಯಲ್ಲಿ ಭಾರತ	ಲೇ: ಸಿ.ಆರ್. ಕೃಷ್ಣರಾವ್	ರೂ.35
ಅರ್ಥಮಂತ್ರಿ ಮತ್ತು ಹಂದಿಗಳು	ಲೇ: ಶಾಂತರಾಮ ಸೋಮಯಾಜಿ	ರೂ.50
ಶ್ರೀಸಾಮಾನ್ಯ ಮತ್ತು ವೈದ್ಯ	ಲೇ. ಎಸ್.ಜೆ. ನಾಗಲೋಟಿಮಠ	ರೂ. 18
ಭೂಮಿಗೆ ವಿದಾಯ	ಲೇ: ಡಾ. ಬಾಳ ಫೊಂಡ್ಕೆ.	ರೂ.45
ಹೇಳು ಪುಟ್ಟಿ ಹೇಳು	ಲೇ: ಜೀವನಹಳ್ಳಿ ಸಿದ್ದಲಿಂಗಪ್ಪ	ರೂ. 10
ಕೈ ತೋಟ ಮಂದಾರ:	ಲೇ: ಹುಣಸೇ ಘಟ್ಟ ಸೋಮಶೇಖರ್	ರೂ. 12

ಪ್ರಕಾಶಕರು: ನವ ಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್.
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-560 001.

ಎಸ್.ಎಫ್.ಐ. ಘಟಕ ರಚನೆ

ಇತ್ತೀಚೆಗೆ ಗುಲಬರ್ಗಾ ತಾಲೂಕಿನ ಹಡಗಿಲ ಗ್ರಾಮದಲ್ಲಿ ಎಸ್.ಎಫ್.ಐ ಗ್ರಾಮ ಘಟಕವನ್ನು ಸ್ಥಾಪಿಸಲಾಯಿತು. ವಿದ್ಯಾರ್ಥಿಗಳನ್ನುದ್ದೇಶಿಸಿ ಜೈಲಾಲ್ ತೋಟದ ಮನಿ ಮತ್ತು ಅಪ್ಪಯ್ಯ ಹೀರೇಮಠ ಮಾತನಾಡಿ ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಸಂಘಟಿತ ಹೋರಾಟ ಮಾಡಲು ಕರೆಕೊಟ್ಟರು.

ನಂತರ ಹಡಗಿಲ ಗ್ರಾಮಘಟಕದ ಅಧ್ಯಕ್ಷರನ್ನಾಗಿ ಚನ್ನವೀರಪ್ಪ, ಉಪಾಧ್ಯಕ್ಷರಾಗಿ ಸದಾನಂದ, ಪ್ರಭು, ಕಂಟೆಪ್ಪ ಮತ್ತು ಕಾರ್ಯದರ್ಶಿಯನ್ನಾಗಿ ರಾಜಶೇಖರ ಪೂಜಾರಿ, ಸಹ ಕಾರ್ಯದರ್ಶಿಗಳಾಗಿ ಲಕ್ಷ್ಮಿಕಾಂತ, ರವೀಂದ್ರ, ಸಂತೋಷಕುಮಾರ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾಗಿ 6 ವಿದ್ಯಾರ್ಥಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ವೈದ್ಯಕೀಯ ವಿದ್ಯಾರ್ಥಿಗಳ ಪ್ರತಿಭಟನೆ

ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ದಂತ ವೈದ್ಯಕೀಯ, ಬಿಎಸ್‌ಸಿ(ನರ್ಸಿಂಗ್) ಮತ್ತು ನೈಸರ್ಗಿಕ ವಿಜ್ಞಾನ ವಿಷಯಗಳ ಫಲಿತಾಂಶದಲ್ಲಾದ ಭಾರಿ ಕುಸಿತ ಪ್ರತಿಭಟಿಸಿ ಮತ್ತು ಮರು ಮೌಲ್ಯಮಾಪನಕ್ಕೆ ಒತ್ತಾಯಿಸಿ ನವೆಂಬರ್ 27 ರಂದು ಎಸ್‌ಎಫ್‌ಐ ನೇತೃತ್ವದಲ್ಲಿ ವಿದ್ಯಾರ್ಥಿಗಳು ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನಾ ಸಭೆಯನ್ನುದ್ದೇಶಿಸಿ ಜಿಲ್ಲಾ ಅಧ್ಯಕ್ಷರಾದ ಜೈಲಾಲ್ ತೋಟದ ಮನಿ , ಕಾರ್ಯದರ್ಶಿ ಅಪ್ಪಯ್ಯ ಹಿರೇಮಠ ಮಾತನಾಡಿ ವಿವಿ ಯಲ್ಲಿನ ಭ್ರಷ್ಟಾಚಾರ ನಿಲ್ಲಬೇಕು. ಕ್ಯಾಪಿಟೇಶನ್-ಡೊನೇಷನ್ ಹಾವಳಿ ತಡೆಗಟ್ಟಬೇಕು. ನ್ಯಾಯಯುತವಾಗಿ ಮರು ಮೌಲ್ಯಮಾಪನ ಮಾಡಬೇಕು. ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ರಿಯಾಯಿತಿ ಪರೀಕ್ಷಾ ಶುಲ್ಕದ ಅನುಮತಿ ನೀಡಿ ವಿದ್ಯಾಭ್ಯಾಸ ಮುಂದುವರಿಸಲು ಅನುವು ಮಾಡಿಕೊಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯ ನೇತೃತ್ವವನ್ನು ಚಂದ್ರಶೇಖರ ಮೇಟಿ, ಭೀಮಾಶಂಕರ, ಶರಣಪ್ಪ, ಸಿಂಧೂ, ದೀಪಾ, ಸಂಗೀತಾ, ಅನಿತಾ ಮತ್ತು ಶಶಿಧರ ವಹಿಸಿದ್ದರು.

ಪುಸ್ತಕ ಪರಿಚಯ — ಎನ್.ಕೆ.ಉಪಾಧ್ಯಾಯ

ಸ್ವಾತಂತ್ರ್ಯ ಹೋರಾಟ ಮತ್ತು ನಂತರದ ಹಾದಿಯ ಬಗ್ಗೆ ಓದಲೇಬೇಕಾದ ಪುಸ್ತಕಗಳು

ಸ್ವಾತಂತ್ರ್ಯದ ಸುವರ್ಣಮಹೋತ್ಸವ ಮಾಲಿಕೆಯಲ್ಲಿ ನವಕರ್ನಾಟಕ ಪ್ರಕಾಶನದವರು ನನ್ನ ಹಳೇ ಸಂಗಾತಿ ಬಿ.ವಿ.ಕಕ್ಕಿಲ್ಲಾಯರ ಎರಡು ಹೊತ್ತಿಗೆಗಳನ್ನು ಪ್ರಕಟಿಸಿದ್ದಾರೆ. 'ಸ್ವಾತಂತ್ರ್ಯ ಸಂಗ್ರಾಮದ ಹೆಜ್ಜೆಗಳು' ಮತ್ತು 'ಭಾರತಕ್ಕೊಂದು ಬದಲು ದಾರಿ' - ಸ್ವಾತಂತ್ರ್ಯೋತ್ಸವದ ಭಾರತ ಅವಲೋಕನ 1947-1997 ಶೀರ್ಷಿಕೆಯಡಿಯಲ್ಲಿ ಇದು ಪ್ರಕಟವಾಗಿದೆ.

ಭಾರತ ದೇಶದ ಸ್ವಾತಂತ್ರ್ಯದ ಸ್ವರ್ಣ ಜಯಂತಿಯನ್ನು ಸಡಗರದಿಂದ ಆಚರಿಸಬೇಕೆಂದು ಕೇಂದ್ರ ಸರಕಾರ ನಿರ್ಧಾರ ಕೈಗೊಂಡಾಗ ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ ಹರಿಕಿಶನ್ ಸಿಂಗ್ ಸುರ್ಜಿತ್ ಅವರು ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ರೈತ ಕಾರ್ಮಿಕರ, ಯುವ ಜನತೆಯ ತ್ಯಾಗ ಬಲಿದಾನಗಳನ್ನು ಉಲ್ಲೇಖಿಸಬೇಕೆಂದೂ, ಬರೇ ಗಾಂಧಿ ಚಳುವಳಿಯಿಂದ ಮಾತ್ರ ಸ್ವಾತಂತ್ರ್ಯ ಪಡೆಯಲಾಯಿತೆಂಬ ಭಾವನೆಯನ್ನು ಪ್ರಚುರಗೊಳಿಸುವುದು ಸರಿಯಲ್ಲವೆಂದೂ ಹೇಳಿದ್ದರು. ಈ ಅಂಶವನ್ನು ಜನರ ಮಧ್ಯೆ ಕೊಂಡೊಯ್ಯಲು ಪಕ್ಷದ ಘಟಕಗಳು ಐವತ್ತನೇ ಸ್ವಾತಂತ್ರ್ಯೋತ್ಸವವನ್ನು ಪರಿಣಾಮಕಾರಿಯಾಗಿ ನಡೆಸುವ ಅವಶ್ಯಕತೆಯನ್ನೂ ಒತ್ತಿ ಹೇಳಿದ್ದರು.

ಎಡಪಕ್ಷಗಳು ನಡೆಸುತ್ತಿರುವ ಸ್ವಾತಂತ್ರ್ಯ ಸಂಗ್ರಾಮದ ಸ್ವರ್ಣಜಯಂತಿ ಕಾರ್ಯಕ್ರಮಗಳಿಗೆ ಬಿ.ವಿ.ಕಕ್ಕಿಲಾಯರ 'ಸ್ವಾತಂತ್ರ್ಯ ಸಂಗ್ರಾಮದ ಹೆಜ್ಜೆಗಳು' ಬಹಳ ಸಹಾಯಕವಾಗುವುದರಲ್ಲಿ ಸಂಶಯವಿಲ್ಲ. ಲೇಖಕರು ಹೇಳುವಂತೆ ಇದು ನಮ್ಮದೇಶದ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಚರಿತ್ರೆಯಲ್ಲ. ನಮ್ಮ ಹೋರಾಟದ ಸ್ಥೂಲ ಪರಿಚಯ ಮಾಡಿಕೊಡುವುದಷ್ಟೇ ಇದರ ಉದ್ದೇಶ''

ಭಾರತ ದೇಶದ ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆ ಬರೆದವರೆಲ್ಲ ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ನಡೆದ ಅಹಿಂಸಾತ್ಮಕ ಚಳುವಳಿಗಳಿಂದಲೇ ಬ್ರಿಟಿಶರು ದೇಶಬಿಟ್ಟು ತೊಲಗಬೇಕಾಯಿತೆಂದು ಒತ್ತಿ ಹೇಳುತ್ತಾರಲ್ಲದೆ 1857 ರಿಂದಲೂ ರೈತಕಾರ್ಮಿಕರು, ಯುವಜನತೆ ನಡೆಸಿದ ಹಲವಾರು ಹೋರಾಟಗಳ, ಅವರ ತ್ಯಾಗ-ಬಲಿದಾನದ ಉಲ್ಲೇಖ ಮಾಡುತ್ತಿಲ್ಲ. ಬಿ.ವಿ.ಕಕ್ಕಿಲಾಯರ ಈ ಪುಸ್ತಕ ಎಲ್ಲಾ ಹೋರಾಟಗಳ ಸ್ಥೂಲ ಪರಿಚಯ ಮಾಡಿಕೊಟ್ಟು ಆಳುವವರ ಮೇಲೆ ಹಾಗೆಯೇ ಇಡೀ ಸ್ವಾತಂತ್ರ್ಯ ಸಂಗ್ರಾಮದ ಅದರ ಪರಿಣಾಮ ಏನಾಗಿದೆ ಅದು ಗಾಂಧೀಜಿಯವರ ನೇತೃತ್ವ ನಡೆದ ಹೋರಾಟಗಳ ಮೇಲೂ ಯಾವ ರೀತಿ ಪರಿಣಾಮ ಬೀರಿ, ಆ ಹೋರಾಟಗಳ ದಿಶೆಯನ್ನೇ ಹೇಗೆ ಬದಲಾಯಿಸಿದೆ ಎಂಬುದನ್ನು ವಿಶ್ಲೇಷಿಸಿದ್ದಾರೆ. ಲೇಖಕರೇ ಹೇಳುವಂತೆ 'ಗಾಂಧೀಜಿಯವರ ನಾಯಕತ್ವದಲ್ಲಿ ನಡೆದ ಅಹಿಂಸಾತ್ಮಕ ಸಾಮೂಹಿಕ ಕಾಯಿದೆ ಭಂಗ ಚಳುವಳಿಗಳು ಮತ್ತು ಸತ್ಯಾಗ್ರಹಗಳು, ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿ ನಡೆದಿದ್ದ ಕಾರ್ಮಿಕರ, ರೈತರ, ವಿದ್ಯಾರ್ಥಿಗಳ ಯುವಜನರ ಮಹಿಳೆಯರ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಚಟುವಟಿಕೆಗಳು ಎಲ್ಲವೂ ಸೇರಿ ಈ ದೇಶದಿಂದ ಬ್ರಿಟಿಶರನ್ನು ತೊಲಗಿಸಿದವು. ನಲ್ವತ್ತೇಳರ ಸ್ವಾತಂತ್ರ್ಯ ಸ್ವಾತಂತ್ರ್ಯವನ್ನು ಸಾಧಿಸಿದವು'' ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಶ್ರಮಜೀವಿಗಳ ಪಾತ್ರ ಮಹತ್ವಪೂರ್ಣವಾದದ್ದು. ಯುವಜನರ ಪಾತ್ರ ಪ್ರಾಮುಖ್ಯವಾದದ್ದು. ಇವರನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿ, ಸಂಘಟಿಸಿದ ಕೀರ್ತಿ ಭಾರತದ ಕಮ್ಯುನಿಸ್ಟರದ್ದಾಗಿದೆ. ಸ್ವಾತಂತ್ರ್ಯ ಹೋರಾಟಕ್ಕೆ ಆರ್ಥಿಕ ಹಾಗೂ ಸಾಮಾಜಿಕ ಉದ್ದೇಶಗಳನ್ನು ನೀಡಿದ ಕೀರ್ತಿಯು ಮತ್ತೆಲ್ಲರಕ್ಕಿಂತ ಹೆಚ್ಚು ಕಮ್ಯುನಿಸ್ಟರಿಗೆ ಸಲ್ಲುತ್ತದೆ''

ಪರಿವಿಡಿಯ 4ನೆಯ ಸಾಮೂಹಿಕ ಚಳುವಳಿಯ ಹಾದಿಯಲ್ಲಿ (ಪುಟ 73)''1942 ರ ಆಗಸ್ಟ್ 15 ರಂದು ಬೊಂಬಾಯಿಯಲ್ಲಿ ಗವಾಲಿಯ ಟ್ಯಾಂಗ್ ಮೈದಾನಿನಲ್ಲಿ (ಕ್ರಾಂತಿ ಮೈದಾನದಲ್ಲಿ) ಸಭೆ ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ ಸಮಿತಿ 'ಕ್ವಿಟ್ ಇಂಡಿಯಾ' ಭಾರತದಿಂದ ತೊಲಗಿ-ಎಂದು ಬ್ರಿಟಿಶರಿಗೆ ಕರೆಕೊಟ್ಟಿತು'' ಎಂದಿದೆ. ಇದು ಸರಿಯಲ್ಲ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆ ಸೇರಿ 'ಕ್ವಿಟ್ ಇಂಡಿಯಾ' ನಿರ್ಣಯ ಕೈಗೊಂಡದ್ದು 1942 ಆಗಸ್ಟ್ 8 ರಂದು. ಅದೇ ದಿವಸ ರಾತ್ರಿ ಗಾಂಧೀಜಿಯವರನ್ನೊಳಗೊಂಡು ಎಲ್ಲ ಮುಖಂಡರನ್ನು ಬಂಧಿಸಿ ಗುಪ್ತಸ್ಥಳಕ್ಕೆ ಕೊಂಡೊಯ್ಯಲಾಯಿತು. ಆಗಸ್ಟ್ 9 ರಂದು ಅದೇ ಗವಾಲಿಯಾ ಟ್ಯಾಂಕ್ ಮೈದಾನಿನಲ್ಲಿ ಅರುಣ ಅಸಫ್ ಆಲಿಯವರು ಧ್ವಜವಂದನೆ ಮಾಡಿದರು. ಸಾವಿರಾರು ಜನರ ಬೃಹತ್ ಮೆರವಣಿಗೆ ಗವಾಲಿಯಾ ಟ್ಯಾಂಕ್ ಮೈದಾನದಿಂದ ಚಿಪಾಟಿಗೆ ಹೊರಟಿತು. ನಾನೂ ಅದರಲ್ಲಿ ಭಾಗಿಯಾಗಿದ್ದೆ. ಸ್ಯಾಂಡರ್ಸ್ ಬ್ರಿಜ್‌ನಲ್ಲಿ ಲಾಠಿಚಾರ್ಜ್, ಗೋಳಿಬಾರಾಯಿತು. ಆದ್ದರಿಂದ ಕ್ವಿಟ್ ಇಂಡಿಯಾ ಚಳುವಳಿ 1942 ಆಗಸ್ಟ್ 9 ರಿಂದ ಸ್ಫೋಟವಾಗಿತ್ತು. 1942 ಆಗಸ್ಟ್ 15 ರಂದು ಅಲ್ಲ. ತಿದ್ದುಪಡಿ ಅಗತ್ಯ.

1947 ಆಗಸ್ಟ್ 15 ರಂದು ಬ್ರಿಟಿಶರು ಅಧಿಕಾರ ಬಿಟ್ಟುಹೋಗಲು ಮುಖ್ಯ ಕಾರಣ ಗಾಂಧೀಜಿಯವರ ಅಹಿಂಸಾ ಚಳುವಳಿಗಳು ಮಾತ್ರವಲ್ಲ. ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ನಡೆಯುತ್ತಿದ್ದ ರೈತ-ಕಾರ್ಮಿಕರ ಹಲವಾರು ಹೋರಾಟಗಳು ಪರಿವಿಡಿ 5.- ಸ್ವಾತಂತ್ರ್ಯ ಹೊಸ್ತಿಲಲ್ಲಿ ಹೆಚ್ಚಿನ ಅಂಶಗಳನ್ನೆಲ್ಲ ನಮೂದಿಸಲಾಗಿದೆ. ಅದೇ ಪರಿವಿಡಿಯಲ್ಲಿ ತೆಲಂಗಾಣದ ಸಶಸ್ತ್ರ ಕ್ರಾಂತಿಯ ವೀರಗಾಥೆ ಬರಬೇಕಾಗಿತ್ತೆಂದು ನನ್ನ ಅನಿಸಿಕೆ. ಪರಿವಿಡಿ-6 ರಾಷ್ಟ್ರೀಯ ಏಕತೆ ಸಾಧನೆಯಲ್ಲಿ ತೆಲಂಗಾಣದ ಉಲ್ಲೇಖವಿದೆ. ಅದು ಹೈದರಾಬಾದ್ ಸಂಸ್ಥಾನಕ್ಕೆ ಸಂಬಂಧ ಪಟ್ಟಂತಾಗಿದೆ. ಎರಡನೇ ಯುದ್ಧ ಮುಕ್ತಾಯಗೊಳ್ಳುತ್ತಿರುವಾಗ 1946 ರಾಯಲ್ ಇಂಡಿಯನ್ ನೇವಿಯ ಭಾರತೀಯ ನಾವಿಕರ ಪಡೆಯವರೂ, ಭಾರತೀಯ ಅಧಿಕಾರಿಗಳೂ ಹೂಡಿದ ಬಂಡಾಯ ಯುದ್ಧ ನೌಕೆಯಲ್ಲಿ ಕಾಂಗ್ರೆಸ್, ಮುಸ್ಲಿಂ ಲೀಗ್, ಮತ್ತು ಕಮ್ಯುನಿಸ್ಟ್ ಪಕ್ಷದ ಧ್ವಜಗಳನ್ನು ಹಾರಿಸಿದ ಘಟನೆ ಅದಕ್ಕೆ ಬೊಂಬಾಯಿ ಕಾರ್ಮಿಕರ ಮತ್ತು ಸಾರ್ವಜನಿಕರ ಬೆಂಬಲ ದೇಶದ ಹಲವಾರು ಕಡೆ ಈ ಬಂಡಾಯದ ಹಬ್ಬುವಿಕೆ ಹಾಗೆಯೇ ತೆಲಂಗಾಣದ ಸಶಸ್ತ್ರ ಬಂಡಾಯ 1947 ಆಗಸ್ಟ್ 15 ರ ಅಧಿಕಾರ ಹಸ್ತಾಂತರಕ್ಕೆ ಹೆಚ್ಚಿನ ಪ್ರಚೋದನೆ ನೀಡಿದವೆಂಬುದನ್ನು ಮರೆಯುವಂತಿಲ್ಲ.

ಆ ಕಾರಣದಿಂದ ತೆಲಂಗಾಣ ಚಳುವಳಿಯ ಸ್ಥಾನ 5ನೇ ಪರಿವಿಡಿಯಲ್ಲಿದ್ದರೆ ಒಳ್ಳೆದಿತ್ತು.

ಸ್ವಾತಂತ್ರ್ಯ ಹೋರಾಟದ ಎಡಪಂಥೀಯ ದೃಷ್ಟಿಕೋನ ನೀಡುವ ಸ್ವಾತಂತ್ರ್ಯ ಸಂಗ್ರಾಮದ ಹೆಜ್ಜೆಗಳು'' ಪ್ರತಿಯೊಬ್ಬ ಓದಿ ಅರಗಿಸಿಕೊಳ್ಳಬೇಕಾದ ಪುಸ್ತಕ.

✪

''ಭಾರತಕ್ಕೊಂದು ಬದಲುದಾರಿ'' ಪುಸ್ತಕವೂ

ಭಾರತಕ್ಕೊಂದು ಬದಲು ದಾರಿ
ರೂ. 35.

ಸ್ವಾತಂತ್ರ್ಯ ಸಂಗ್ರಾಮದ ಹೆಜ್ಜೆಗಳು
ರೂ.35,

ನವ ಕರ್ನಾಟಕ ಪ್ರಕಾಶನ,
ಬೆಂಗಳೂರು.

ಉತ್ತಮವಾಗಿದೆ. ಪ್ರಧಾನ ಸಂಪಾದಕ ಜಿ. ರಾಮಕೃಷ್ಣ ಅವರು ಓದುಗರೊಡನೆ ಹಂಚಿಕೊಂಡ '' 1942 ಆಗಸ್ಟ್ 9 ರಂದು ಘೋಷಿಸಲಾದ'' ಭಾರತ ಬಿಟ್ಟು ತೊಲಗಿ'' ಎಂಬ ಕರೆಯು ಅಂದಿನ ವಸಾಹತು ಅಧಿಪತಿಯನ್ನು ಕುರಿತಾಗಿತ್ತು. ತೊಲಗಿಸಿಯಾದ ಮೇಲೆ ಮತ್ತೆ ರತ್ನ ಕಂಬಳಿ ಹಾಸಿ ಅವರನ್ನೂ ಅವರ ಪರಿವಾರದವರನ್ನೂ ಬರಮಾಡಿಕೊಂಡು ನಮ್ಮ ಮಧ್ಯೆ ನೆಲೆ ಹೂಡಲು ಅವಕಾಶವಾಗಲೆಂದು ಐವತ್ತು ವರ್ಷಗಳ ಹಿಂದೆ ನಾವು ಉದ್ದೇಶಿಸಿರಲಿಲ್ಲ. ಇಂದೂ ಉದ್ದೇಶಿಸುವುದಿಲ್ಲ. ನಮ್ಮ ಜನರೆಲ್ಲರ ಆಶೋತ್ತರಗಳ ಪೂರೈಕೆಗಾಗಿ ಶ್ರಮಿಸಲು ಈ '' ಬದಲು ದಾರಿ'' ಯನ್ನು ಅನುಸರಿಸುವುದು ಇಂದಿನ ಆದ್ಯತೆಯಾಗಿದೆ ಎಂಬ ಅಭಿಪ್ರಾಯ ಸಮರ್ಪಕವಾಗಿದೆ.

ಬದಲು ದಾರಿಗೆ ಬಂದೆವು ಎಂಬ 10ನೆಯ ಪರಿವಿಡಿಯಲ್ಲಿ ''ಭಾರತ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮದಲ್ಲಿ ಉಲ್ಲೇಖಿತವಾಗಿರುವ ರಾಷ್ಟ್ರೀಯ ಪ್ರಜಾಪ್ರಭುತ್ವ ಅಥವಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮದಲ್ಲಿ ಉಲ್ಲೇಖಿಸಲಾಗಿರುವ ಜನತಾ ಪ್ರಜಾಪ್ರಭುತ್ವ ಇವೆರಡರಿಂದಲೂ ಈಗಿನ ಧರ್ಮ ನಿರಪೇಕ್ಷ ಪ್ರಗತಿಪರ ಪ್ರಜಾಪ್ರಭುತ್ವವಾದಿ ಕಮ್ಯುನಿಸ್ಟ್ ಮತ್ತು ಎಡಶಕ್ತಿಗಳ ಸಂಯುಕ್ತ ರಂಗವು ಬೇರೆಯಾಗಿದೆ. ಬೇರ'ಯಾದರೂ ಸರಿಯಾದ ದಿಸೆಯಲ್ಲಿ ಸಾಗುವ ಮೊದಲನೆಯ ಹೆಜ್ಜೆಯಾಗಿದೆ. ಈಗಿನ ಸಂಯುಕ್ತ ರಂಗದ ಯಶಸ್ಸು ಮತ್ತು ವಿಕಾಸ ಕಮ್ಯುನಿಸ್ಟರ ದೃಷ್ಟಿಯಲ್ಲಿ ಅತ್ಯಂತ ಅಪೇಕ್ಷಣೀಯ '' ಎಂದು ಹೇಳಿರುವುದು ಸಮರ್ಪಕ. ಆದರೆ ಅದರ ಜೊತೆಯಲ್ಲಿಯೇ ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾ ರಾಜ್ಯಗಳ ಎಡರಂಗ ಸರಕಾರ, ಎಡ ಮತ್ತು ಪ್ರಜಾಪ್ರಭುತ್ವ ರಂಗದ ಸರಕಾರದ ಸಾಧನೆಗಳನ್ನು ಸ್ವಲ್ಪ ಮಟ್ಟಿಗೆ ವಿವರಿಸಿ ಆ ದಾರಿಯಲ್ಲೆ ಸಂಯುಕ್ತರಂಗ ಸರಕಾರ ಮುಂದುವರಿಯಲು ಸಾಧ್ಯವಾದರೆ ಬದಲು ದಾರಿ ಕಂಡುಕೊಳ್ಳಲು ಅದಕ್ಕೆ ಬೇಕಾದ ವರ್ಗ ಸಂಘಟನೆ ಬೆಳೆಸಲು ಅನುಕೂಲವಾಗುತ್ತದೆಂಬ ಅಭಿಪ್ರಾಯ ಪುಸ್ತಕದಲ್ಲಿ ಮೂಡಿಬರುವುದು ಅಗತ್ಯವಿತ್ತು. ಅದರಂತೆಯೇ ವಿವಿದೋದ್ದೇಶಗಳಿಂದ ಕೂಡಿದ 13 ಪಕ್ಷಗಳನ್ನು ಒಂದೆಡೆ ಸೇರಿಸುವಲ್ಲಿ. ಇತ್ತೀಚೆಗೆ ಕಾಂಗ್ರೆಸಿಂದಾಗಿ ರಾಜೀನಾಮೆ ಕೊಡುವ ಸಂದರ್ಭದಲ್ಲಿ ಸಂಯುಕ್ತ ರಂಗವನ್ನು ಆಸೆ-ಆಮಿಷಗಳಿಗೊಳಗಾಗದಂತೆ ಮಾಡಿ, ಸಂಯುಕ್ತ ರಂಗ ಭದ್ರವಾಗುಳಿಯುವಂತೆ ಮಾಡಿದ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳ ಪ್ರಯತ್ನ ಅದರ ಪ್ರತಿಫಲ, ಅದರಿಂದಾಗಿ ದೇಶದ ರಾಜಕೀಯದ ಮೇಲೆ ಉಂಟಾಗಬಹುದಾದ ಒಳ್ಳೆ ಪರಿಣಾಮಗಳ ಉಲ್ಲೇಖ ಅಗತ್ಯವಿತ್ತೇನೋ.

''ಭಾರತಕ್ಕೊಂದು ಬದಲು ದಾರಿ'' ಪ್ರತಿಯೊಬ್ಬರೂ ಓದಲೇ ಬೇಕಾದ ಪುಸ್ತಕ.

ಅಣಕ — ಶರತ್ ಚಂದ್ರ

ಪ್ರಳಯದ ತರಂಗಗಳು........ ಮತ್ತು ತರಂಗದ ಪ್ರಳಯಗಳು

*ತರಂಗ1*____

ಪ್ರಳಯದ ಮೊದಲ ತರಂಗ ಮುಟ್ಟಿದ್ದು ಸೀದಾ ಕ್ಯೋಟೊದ ಕಲ್ಮಶ ಅನಿಲ ನಿಯಂತ್ರಣ ಸಮ್ಮೇಳನಕ್ಕಂತೆ. ಅಲ್ಲಿ ಮೂರನೇ ಜಗತ್ತಿನ ದೇಶಗಳ ಪ್ರತಿನಿಧಿಗಳಿಂದ ಬೈಸಿಕೊಳ್ಳುತ್ತಿದ್ದ ಅಮೇರಿಕದ ಉಪಾಧ್ಯಕ್ಷ ಅಲ್ ಗೊರೆ ಅವರಿಗೆ ಭಾರಿ ಖುಶಿ ಆಯ್ತಂತೆ. ಪ್ರಳಯ ಇನ್ನೇನು ಮುಂದಿನ ವರ್ಷವೇ ಬಂದು ಬಿಡತ್ತೆ. ಕಲ್ಮಶ ಅನಿಲ ನಿಯಂತ್ರಿಸಿ ಏನೂ ಪ್ರಯೋಜನವಿಲ್ಲ. ಪಾಪ ಫೋರ್ಡ್, ಜನರಲ್ ಮೋಟಾರ್ಸ್‌ಗೆಲ್ಲ ಲಾಭ ಕಡಿಮೆ ಆಗತ್ತೆ. ಅಮೇರಿಕ ಈಗಾಗಲೇ ಒಪ್ಪಿಕೊಂಡಿದ್ದ ಎಲ್ಲಾ ಕಲ್ಮಶ ಅನಿಲ ನಿಯಂತ್ರಣ ವಾಪಸು ತೆಗೆದುಕೊಳ್ಳುತ್ತಿದ್ದೇನೆ ಎಂದರಂತೆ.

*ತರಂಗ2*____

ಅಖಿಲ ಕರ್ನಾಟಕ ಜ್ಯೋತಿಷಿಗಳ ಸಂಘ ಪ್ರಳಯಾಂತಕ ವಿಶೇಷ ತುರ್ತು ಸಭೆ ಕರೆದು ಪ್ರತಿಭಟನೆ ಸಲ್ಲಿಸಿ, ಇವರು ನಮ್ಮ ಹೊಟ್ಟೆಗೆ ಹೊಡೆಯುತ್ತಿದ್ದಾರೆ ಎಂದು ಪತ್ರಿಕಾ ಸಮ್ಮೇಳನದಲ್ಲಿ ಬೊಬ್ಬೆ ಹೊಡೆದಿದ್ದಾರಂತೆ. ಪ್ರಳಯದ ತರಂಗ ಎಲ್ಲಾ ಕಡೆಗೆ ಹೊಡೆದಿದ್ದು, ನಮಗೆ ಗಿರಾಕಿ ಇಲ್ಲದಂತಾಗಿದೆ. ಮುಂದಿನ ವರ್ಷಗಳ ಒಳಿತು, ಕೆಡಕು ಭವಿಷ್ಯಗಳನ್ನು ಜನಗಳಿಗೆ ಹೇಳಿ , ಅವರ ಮನೋರಂಜನೆ ಮಾಡುತ್ತಿದ್ದ ನಮ್ಮ ಮೂಲಭೂತ ಹಕ್ಕನ್ನು ಈ ಒಂದೇ ಭವಿಷ್ಯ ವಾಣಿ ಕೆಡಿಸಿದೆ. ಕೋರ್ಟಿಗೆ ಹೋಗುವುದಾಗಿ ಬೆದರಿಸಿದೆ. ಪತ್ರಕರ್ತರೊಬ್ಬರು ನೀವು ಇಷ್ಟು ವರ್ಷ ಮಾಡಿದ್ದನ್ನೇ ಅವರೂ ಮಾಡಿದ್ದಾರೆ. ಅದರಲ್ಲಿ ವಿಶೇಷವೇನು ಎಂದು ಕೇಳಿದರಂತೆ. ಅದಕ್ಕೆ ಅವರೆಂದರಂತೆ, ನಾವು ಧರ್ಮಗ್ರಂಥಗಳನ್ನು, ಅರೆ-ಬರೆ ವಿಜ್ಞಾನವನ್ನೆಲ್ಲಾ ಮಿಶ್ರಮಾಡಿ ಜನಗಳಿಗೆ ಕನ್‌ಫ್ಯೂಸ್ ಮಾಡಿಲ್ಲ. ಅದೇ ಮಾತ್ರವಲ್ಲ. ನಾವು ಜನರನ್ನು ಗಾಬರಿಗೊಳಿಸುವುದಿಲ್ಲ. ಒಳಿತು ಹೇಳಿ ಜನರನ್ನು ದೈನಂದಿನ ಜೀವನಕ್ಕೆ ಹುರಿದುಂಬಿಸುತ್ತೇವೆ. ಕೆಡುಕು ಹೇಳಿ ಜನರು ಜೀವನದಲ್ಲಿ ಹುಶಾರಾಗಿರುವಂತೆ ಮಾಡುತ್ತೇವೆ ಎಂದರಂತೆ. ಇವರು ಬಂದು ಜ್ಯೋತಿಷ್ಯರ ಪಾವಿತ್ರ್ಯವನ್ನು ಕೆಡಿಸಿದ್ದಾರೆ ಎಂದರಂತೆ.

*ತರಂಗ3*____

ಮಾರವಾಡಿಗಳೆಲ್ಲಾ ಪ್ರಳಯದ ಪುರವಣಿಯನ್ನು 'ಶುಭ ಲಾಭ'ದ ಬಳಿ ನೇತುಹಾಕಿದ್ದಾರಂತೆ. ಮಾರವಾಡಿಗಳು ಹೇಳಿದ ಬಡ್ಡಿಗಿಂತ ಹೆಚ್ಚಿನ ದರದಲ್ಲಿ ಲಕ್ಷಾಂತರ ಸಾಲ ತೆಗೆದುಕೊಂಡು ಹೋಗುತ್ತಿದ್ದಾರಂತೆ. ಯಾರೋ ಮಾರವಾಡಿಗಳನ್ನು ಕೇಳಿದರಂತೆ - ಪ್ರಳಯ ಆಗದಿದ್ರೆ ಏನು ಮಾಡ್ತೀರಿ. ಅದಕ್ಕೆ ಅವರು ಮಾರವಾಡಿಗಳಿಗೆ ನಷ್ಟ ಅಂತಲೇ ಇಲ್ಲ ಎಂದರಂತೆ. ಪ್ರಳಯ ಆಗದಿದ್ದರೆ, ಒದ್ದು ಹೆಚ್ಚಿನ ಬಡ್ಡಿದರ ಅಲ್ಲದಿದ್ದರೂ ಒರಿಜಿನಲ್ ಬಡ್ಡಿ ವಸೂಲಿ ಮಾಡೇ ಮಾಡ್ತೀವಿ. ನಮಗೆ ಗೊತ್ತು ಹೇಗೆ ವಸೂಲಿ ಮಾಡುವುದು ಅಂತ. ಪ್ರಳಯ ಆದರಂತೂ ಏನೂ ಚಿಂತೆ ಇಲ್ವಲ್ಲ ಎಂದರಂತೆ. ಸಾವಿರಾರು ರೂ. ಸಾಲ ಒಯ್ಯುತ್ತಿದ್ದ ಒಬ್ಬರನ್ನು ಪ್ರಳಯ ಆಗದಿದ್ರೆ ಏನು ಮಾಡ್ತೀರಿ ಅಂತ ಕೇಳಲಾಗಿ, ನೋಡಿ ಸಾರ್, ಇವೆಲ್ಲ ಸಿಗರೇಟು ಸೇದಿದಂತೆ, ಬಾಟ್ಲಿ ಹಾಕಿದಂತೆ, ಇದ್ದಾಗ ಮಜ ಮಾಡಬೇಕು. ಆಮೇಲೆ ನೋಡ್ಕೊಳ್ಳೋಣ. ಪ್ರಳಯ ಆಗದಿದ್ರೆ ಕಷ್ಟ ಕಾರ್ಪಣ್ಯ ಇದ್ದೇ ಇರತ್ತಲ್ಲ ಅಂದರಂತೆ.


*ತರಂಗ4*____

ವಿಶ್ವ ಬ್ಯಾಂಕ್‌ನಿಂದ ಫಂಡ್ ಪಡೆಯುವ ಪರಿಸರವಾದಿಗಳ ಗುಂಪೊಂದು ಪ್ರಳಯದ ತರಂಗವನ್ನು ಹಲವು ದಿನಗಳವರೆಗೆ ಕೂಲಂಕುಷವಾಗಿ ವಿಶ್ಲೇಷಿಸಿತ್ತಂತೆ. ನಾವು ಇದರಲ್ಲಿ ಕಲಿಯುವುದು ತುಂಬಾ ಇದೆ. ನಿಜವಾದ ಪರಿಸರ ಸಮಸ್ಯೆಗಳನ್ನು ಮರೆ ಮಾಡಿ, ಅವುಗಳಿಗೆ ಕಾರಣರಾದ ಭಾರಿ ಬಹುರಾಷ್ಟ್ರೀಯ ಕಂಪನಿಗಳ ಪಾತ್ರ ಮುಚ್ಚಿಟ್ಟು, ಹೇಗೆ ಜನರಿಗೆ ಗಾಬರಿ ಪಡಿಸಬಹುದು ಎಂಬುದಕ್ಕೆ ಒಳ್ಳೆ ಮಾದರಿ ಇದು. ವೈಜ್ಞಾನಿಕ ಸತ್ಯಗಳನ್ನು ತೆಗೆದುಕೊಂಡು ಅವನ್ನು ಕುಲಗೆಡುವಷ್ಟು ಸರಳೀಕರಿಸಿ ಅದರಲ್ಲಿ ಧರ್ಮವನ್ನು ಬೆರಸಿ, ಜ್ಯೋತಿಷ್ಯದ ಒಗ್ಗರಣೆ ಹಾಕಿ ಬರೆಯುವ ಈ ಹೊಸ ಕಲಸುಮಲೋಗರದ ತಂತ್ರದ ಬಗ್ಗೆ ಚರ್ಚೆ ಮಾಡಲು ಮೂರು ದಿನಗಳ ಕಾರ್ಯಶಿಬಿರ ಏರ್ಪಡಿಸುತ್ತಿವೆಯಂತೆ. ಅದಕ್ಕೆ ವಿಶ್ವ ಬ್ಯಾಂಕ್‌ನ ಅನುದಾನ ಆಗಲೇ ಸಿಕ್ಕಿದೆಯಂತೆ. ಈ ಪ್ರಳಯಗಳನ್ನು ಎಲ್ಲಾ ಕಡೆ ಸೃಷ್ಟಿಸಲು, ಅಮೇರಿಕ ಬಹುರಾಷ್ಟ್ರೀಯ ಕಂಪನಿಗಳ ಪರಿಸರ ಸಮಸ್ಯೆ ಪರಿಹರಿಸಲು ವಿಶ್ವ ಬ್ಯಾಂಕ್ ಆಗಲೇ ಯೋಜನೆ ಹಾಕಿದೆಯಂತೆ.

*ತರಂಗ5*____

ಹಾಲು ವ್ಯಾಪಾರಿಗಳು ಚಿಂತಾಕ್ರಾಂತರಾಗಿದ್ದಾರಂತೆ. ಈ ಪ್ರಳಯದ ವದಂತಿ ಎಲ್ಲಾ ಬುರುಡೆ ಎನ್ನುತ್ತಿದ್ದಾರಂತೆ. ಕಳೆದ ಬಾರಿ ಗಣೇಶ ಹಾಲು ಕುಡಿದಾಗ ಮಾಡಿದ ಲಾಭ ನೆನೆಸಿಕೊಂಡು ಮರುಗುತ್ತಿದ್ದಾರಂತೆ. ಒಬ್ಬ ಹಾಲು ವ್ಯಾಪಾರಿ ಇದೆಲ್ಲಾ ಬುರುಡೆ ಎಂದು ಹೇಳಿದಾಗ ಇಬ್ಬರು ಮ್ಯಾಗಜೀನ್ ಮಾರುವ ಅಂಗಡಿಯವರು ಆತನನ್ನು ಹಿಡಿದು ಹೊಡೆದರಂತೆ. ನಿನಗೆ ಲಾಭ ಆಗಲಿಲ್ಲ ಅಂತ ಅಪ ಪ್ರಚಾರ ಮಾಡಬೇಡ ಎಂದರಂತೆ. ಮ್ಯಾಗಜೀನ್ ಮಾರಾಟಗಾರರೆಲ್ಲ ಸೇರಿ ಪ್ರತಿ ಮ್ಯಾಗಜೀನ್ ಪ್ರಳಯದ ಬಗ್ಗೆ ಧಾರಾವಾಹಿ ಪ್ರಕಟಿಸಬೇಕು, ಹಾಗೆ ಮಾಡದ ಮ್ಯಾಗಜೀನ್ ಇಡಲ್ಲ ಎಂದು ನಿರ್ಧರಿಸಿದ್ದಾರಂತೆ.

ವಾರದ ವ್ಯಂಗ್ಯಚಿತ್ರ — 'ದಿ ಹಿಂದು' ನಲ್ಲಿ ಸುರೇಂದ್ರನ್



ಜಿ.ಎನ್. ಮೋಹನ್ ಗೆ ಮಾಧ್ಯಮ ಪ್ರಶಸ್ತಿ



ಪತ್ರಿಕೋದ್ಯಮವನ್ನು ಜನರ ಬಳಿ ಕೊಂಡೊಯ್ದುದ್ದಕ್ಕಾಗಿ ಪತ್ರಕರ್ತ ಜಿ.ಎನ್. ಮೋಹನ್ ಅವರಿಗೆ 'ಸಂದೇಶ ಮಾಧ್ಯಮ ಪ್ರತಿಷ್ಠಾನ' ಪ್ರಶಸ್ತಿಯನ್ನು ಘೋಷಿಸಿದ.

ಡಂಕೆಲ್ ಪ್ರಸ್ತಾವನೆಗಳು ಮಾಧ್ಯಮ ಕ್ಷೇತ್ರದ ಮೇಲೆ ಉಂಟು ಮಾಡುವ ಪರಿಣಾಮಗಳ ಬಗ್ಗೆ ಅಧ್ಯಯನ ನಡೆಸಿ ಬರೆದ 'ಡಂಕೆಲ್ ಪ್ರಸ್ತಾವನೆ-ಪತ್ರಿಕಾರಂಗಕ್ಕೆ ಲಗ್ಗೆ' ಪುಸ್ತಕಕ್ಕಾಗಿ ಹಾಗೂ 'ಪ್ರಜಾವಾಣಿ'ಯಲ್ಲಿ ದೃಶ್ಯಮಾಧ್ಯಮಕ್ಕೆ ಸಂಬಂಧಿಸಿದಂತೆ ಬರೆದ ಲೇಖನಗಳಿಗಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ.

ವಿವಿಧ ಸಮೂಹ ಸಂಘಟನೆಗಳಿಗಾಗಿ ನಡೆಸಿದ ಪತ್ರಿಕಾ ಕಾರ್ಯಾಗಾರ, ಪತ್ರಿಕಾ ಹೇಳಿಕೆ ಕುರಿತ ಶಿಬಿರ, ವಿವಿಧ ಮಾಧ್ಯಮ ಸಂಕಿರಣಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಗಮನಿಸಿ ಮಾಧ್ಯಮ ಜನಜಾಗೃತಿಗಾಗಿ ಈ ಪ್ರಶಸ್ತಿ ನೀಡಲಾಗಿದೆ.

ಈ ಬಾರಿಯ ಮಾಧ್ಯಮದ ವಿವಿಧ ಪ್ರಶಸ್ತಿಗಳನ್ನು ಖ್ಯಾತ ಸಾಹಿತಿ ಪೂರ್ಣಚಂದ್ರ ತೇಜಸ್ವಿ, ಹಿರಿಯ ಪತ್ರಕರ್ತ ಜಿ.ಎಸ್. ಸದಾಶಿವ, ಜಾನಪದ ತಜ್ಞ ಡಾ. ಎಸ್.ಕೆ. ಕರೀಂ ಖಾನ್, ಅಮೇರಿಕಾ, ಅಮೇರಿಕಾ ಚಿತ್ರಕ್ಕಾಗಿ ನಾಗತಿಹಳ್ಳಿ ಚಂದ್ರಶೇಖರ್, ಟಿ.ಎಸ್. ಸೀತಾರಾಂ ಅವರಿಗೂ ನೀಡಲಾಗಿದೆ.

'ಐಕ್ಯರಂಗ' ಬಳಗ ಪ್ರಶಸ್ತಿ ವಿಜೇತರಿಗೆ ಅಭಿನಂದನೆ ಸಲ್ಲಿಸುತ್ತದೆ.

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27